
ಪ್ರತಿಭಾ ಗ್ರಂಥಮಾಲೆ

1953

ಹಳ್ಳದಿಂದ ಹಾದಿಗೆ

— ಜನಾರ್ದನ ಗುರ್ಕಾರ



ಪ್ರತಿಭಾ ಗ್ರಂಥಮಾಲೆ, ಧಾರವಾಡ.

ಪ್ರತಿಭಾ ಗ್ರಂಥಮಾಲೆ: ಹತ್ತನೆಯ ವರುಷದ ನಾಲ್ಕನೆಯ ಕಿರಣ.

ಹಳ್ಳದಿಂದ ಹಾದಿಗೆ

(ಸ್ವತಂತ್ರ ಸಾಮಾಜಿಕ ಕಾದಂಬರಿ)

ಲೇಖಕರು:

ಶ್ರೀ ಜನಾರ್ದನ ಗುರ್ಕಾರ್

ಪ್ರಕಾಶಕರು:

ಭಾಲಚಂದ್ರ ವೆಂಕಟೇಶ ಘಾಣೇಕರ

ಪ್ರತಿಭಾ ಗ್ರಂಥಮಾಲೆ, ಧಾರವಾಡ.

ಎಪ್ರಿಲ್ ೧೯೫೩] ಬೆಲೆ: ೧-೮-೦

ಓದುಗರಲ್ಲಿ ಅರಿಕೆ

ಶ್ರೀ ಜನಾರ್ದನ ಗುರ್ಕಾರ್ ಅವರ ಈ "ಹಳ್ಳದಿಂದ ಹಾದಿಗೆ" ಕಾದಂಬರಿಯು ನಮ್ಮ ಪ್ರತಿಭಾ ಗ್ರಂಥಮಾಲೆಯ ೧೦ನೆಯ ವರುಷದ ೪ನೆಯ ಕುಡಿ. ಕಳೆದ ವರುಷ ಇದೇ ಮಾಲೆಯಲ್ಲಿ ಇದೇ ಲೇಖಕರ "ಪರಾವಲಂಬಿ" ಎಂಬ ಕಾದಂಬರಿಯು ಪ್ರಕಟವಾಗಿ, ಕನ್ನಡ ಕಾದಂಬರೀ ಕ್ಷೇತ್ರದಲ್ಲಿ 'ಉತ್ಕೃಷ್ಟವಾದ ಪ್ರಾದೇಶಿಕ ಕಾದಂಬರಿ' ಎಂದು ತನ್ನ ಹೆಸರು ಗಳಿಸಿಕೊಂಡಿತು.

ಪ್ರಸ್ತುತ ಕಾದಂಬರಿಯಲ್ಲಿ ಲೇಖಕರು ಘನವಾದ ವೇಶ್ಯಾ ಸಮಸ್ಯೆಯನ್ನು ಪ್ರತಿಪಾದಿಸಿದ್ದಾರೆ. ಇಲ್ಲಿಯ ಸುಂದರಿಯ ಪಾತ್ರ ತನ್ನದೇ ಆದ ವೈಶಿಷ್ಟ್ಯಗಳಿಂದ ಕೂಡಿಕೊಂಡಿದ್ದರೂ ಸಮಾಜದ ಕಣ್ಣಿಗೆ ಬೆಲೆವೆಣ್ಣಿನಂತೆ ಕಾಣುತ್ತದೆ. ಮುಖ್ಯವಾಗಿ ಸುಂದರಿಯ ಮನೋಲೋಕವನ್ನು ಅರಳಿಸಿ ತೋರಿಸಿದ ಕಲಾಪೂರ್ಣವಾದ ಕೈವಾಡ ಅಸಾಮಾನ್ಯವಾದದ್ದು. ಆ ಮೂಲಕವೇ ಆಕೆಯ ಹಿಂದಿನ ಜೀವನದ ಅಂಶಗಳನ್ನೂ ಸೂಕ್ಷ್ಮವಾಗಿ ತಿಳಿಯಪಡಿಸುವಾಗ ಲೇಖಕರು ನಿಜಕ್ಕೂ ನವೀನ ತಂತ್ರವನ್ನು ಬಳಸಿದ್ದಾರೆ. ಅಂತೇ ಚೌಡಪ್ಪನವರಂಥ ಪಾತ್ರಗಳು ನಮ್ಮ ಸಮಾಜದಲ್ಲಿ ಅಪರೂಪವೇನಲ್ಲ. ಮೊದಮೊದಲು ಮುದುಕಿಯ ಸ್ವಭಾವ ನೀಚ ಪಾತ್ರದಂತೆ ಕಂಡರೂ ಕೊನೆಗೆ ಮಾತ್ರ ಆವಳ ಪಾಡಿಗೆ ನಾಲ್ಕು ಹನಿ ಕಣ್ಣೀರು ಸುರಿಸಲೇ ಬೇಕಾಗುವುದು.

ಒಟ್ಟಿನಲ್ಲಿ ಸುಂದರಿಯ ಜೀವನದ ಜಪವೆಂದೇ ಹೇಳಬಹುದಾದ "ಹಳ್ಳದಿಂದ ಹಾದಿಗೆ" ಹೋಗಬೇಕೆಂಬ ಬಯಕೆಯ ಸುವಿಸ್ತೃತವಾದ ಚಿತ್ರಣವೇ ಈ ಕಾದಂಬರಿಯ ಜೀವಾಳ.

ಇಂಥ ಸತ್ವಪೂರ್ಣ ತರುಣಲೇಖಕರು ಚಿಕ್ಕದಾದರೂ ಮನೋವೇಧಕವಾಗಿರುವ ಈ ಕಾದಂಬರಿಯನ್ನು ನಮ್ಮ ಮಾಲೆಯಲ್ಲಿ ಪೋಣಿಸಲು ಅನುಮತಿ ಕೊಟ್ಟದ್ದಕ್ಕಾಗಿ ನಾವು ಅವರಿಗೆ ಆಭಾರಿಯಾಗಿದ್ದೇವೆ.

—ಪ್ರಕಾಶಕ.

ಹಳ್ಳದಿಂದ ಹಾದಿಗೆ

ಒಂದನೆಯ ಅಧ್ಯಾಯ

ಬಿಸಿಲೇ ಬಿಸಿಲು. ಕಾಸಿದ ಸೂಜಿಯಂತೆ ಸೂರ್ಯಕಿರಣಗಳು ಧರೆಗೆ ಸುರಿಯುತ್ತಿದ್ದವು. ಉರಿಯುವ ಬಿಸಿಲ ಸಾಗರದಲ್ಲಿ ಅಣಗಿಸುವ ನಡುಗಡ್ಡೆಗಳಂತೆ ಮರ, ಗಿಡ, ಮನೆ, ಮಠಗಳ ಕರಿಯ ನೆರಳು ಅಲ್ಲಲ್ಲಿ ಮಲಗಿತ್ತು. ತಾಳಲಾರದ ತಾಪದಲ್ಲಿ ಜೀವಜಾತಿಯೆಲ್ಲ ಉಸಿರಾಡಿಸುವಾಗ ಮಾತ್ರ ಯಾವುದೋ ಒಂದು ತಾಳಲಯ ಭರಿತವಾದ ರುದ್ರಗಾನ ಕೇಳಬರುತ್ತಿತ್ತು. ಅದರಿಂದಲೇ ಜಗತ್ತಿನಲ್ಲಿ ಜೀವಜಾತಿಯಿದೆ ಎಂದು ತಿಳಿದುಕೊಳ್ಳಬೇಕು. ಹೊರತು ಜನರ ಉತ್ಸಾಹ, ಉದ್ಯಮಗಳ ಉಲಿವಿಂದಲ್ಲವೇ ಅಲ್ಲ.

ಇಂಥ ರಣಬಿಸಿಲಲ್ಲಿ ಸುಂದರಮ್ಮ ತನ್ನ ಮನೆಯ ಬಾಗಿಲು ತೆರೆದಿಟ್ಟೇ ಮಲಗಿದ್ದಳು. ಇದುವರೆಗೆ ಎಂದೂ ಕದ ಮುಚ್ಚದೆ ಮಲಗಿದವಳಲ್ಲ ಅವಳು. ಬಹುಶಃ ಇಂದಿನ ಬಿಸಿಲಿನ ಬೇಗೆ ಅವಳನ್ನು ಆ ರೀತಿ ಅರಿವುಗೇಡಿಯನ್ನಾಗಿ ಮಾಡಿರಬಹುದು. ತಣ್ಣಗಾದ ಸಿಮೆಂಟಿನ ನೆಲದ ಮೇಲೆ ಮೈಯೂರಿದೊಡನೆ ಅವಳನ್ನು ನಿದ್ದೆಯಾವರಿಸಿತ್ತು.

ಮಧ್ಯಾಹ್ನ ದಾಟಿತು. ಅವಳ ಎಡಪಕ್ಕದ ಗೋಡೆಯ ಗಡಿಯಾರ ಎರಡು ಗಂಟೆ ಬಾರಿಸಿತು. ಆದರೂ ಅವಳಿಗೆ ಎಚ್ಚರವಿಲ್ಲ. ಅವಳ ನಿದ್ದೆಯನ್ನು ಕೆಡಿಸುವ ಮನಸ್ಸು ಆ ಗಡಿಯಾರಕ್ಕೂ ಬರಲಿಲ್ಲವೆಂದು ಕಾಣುತ್ತದೆ. ಅದು ತನ್ನ ಕೆಲಸ ಮಾಡುತ್ತ ಮುಂದೆ ಸಾಗುತ್ತಲೇ ಇತ್ತು.

ಆಗ ತಾನೆ ಚೌಡಪ್ಪನವರ ಸವಾರಿ ಅವಳ ಮನೆಯ ಮುಂದೆ ಬಂದು ಟಾಂಗಾದಿಂದ ಇಳಿಯಿತು. ನಾಲ್ಕಾರು ದಿನಗಳಿಂದ ಅವರು ಊರಲ್ಲಿಯೂ ಇರಲಿಲ್ಲ. ಈಗ ಬಂದವರೇ ಸುಂದರಿಯ ದರ್ಶನಕ್ಕೆ ಮೊದಲು ಸಿದ್ಧರಾದರು.

ಅಲ್ಲಿಯ ವಾತಾವರಣವನ್ನು ನೋಡಿದೊಡನೆ ಅವರಿಗೂ ಕೊಂಚ ನಡುಕು ಹುಟ್ಟದೆ ಬಿಟ್ಟರಲಿಲ್ಲ. ಕಿಡಿಕಿ, ಬಾಗಿಲುಗಳೆಲ್ಲ ಬಾಯಿಬಿಟ್ಟು ಭೂತ ದಂತೆ ನಿಂತಿದ್ದವು. ಅಲ್ಲದೆ ಒಳಗೆ ಸುಂದರಮ್ಮ ಇರುವ ಲಕ್ಷಣಗಳಾವುವೂ ಅವರಿಗೆ ಕಾಣಿಸಲಿಲ್ಲ. ಕಾರಣ ಸ್ವಲ್ಪ ರಭಸದಿಂದಲೇ ಒಳಗಿನ ಪಡಸಾಲೆಗೆ ಬಂದರು. ಆದರೆ ಅಲ್ಲಿ ಸುಂದರಮ್ಮ ಮಲಗಿ ನಿದ್ರಿಸುತ್ತಿದ್ದ ದೃಶ್ಯ ಅವರ ಮನಸ್ಸಿಗೆ ಮೇಜವಾನಿ ಮಾಡಿತು. ಪ್ರಯಾಣದ ಆಯಾಸ, ಬಿಸಿಲಿನ ತಾಪ-ಯಾವುದೂ ಅವರ ಲಕ್ಷ್ಯಕ್ಕೆ ಬರಲಿಲ್ಲ. ಮನಸ್ಸು ಮಯೂರವಾಯಿತು. ಕೂಡಲೇ ಬಚ್ಚಲು ಮನೆಗೆ ನಡೆದರು. ಅವಸರದಿಂದಲೇ ಕೈಕಾಲು ಮುಖ ತೊಳೆಯುವ ಕೆಲಸ ಮುಗಿಯಿತು. ಹಿಂದಿರುಗಿ ಬರುವಾಗ ಹಿತ್ತಿಲ ಬಾಗಿಲು ಗಳನ್ನು ಮುಚ್ಚುವ ಕಾಯಕವನ್ನು ಅವರ ಕೈಗಳು ತಾವಾಗಿಯೇ ಮಾಡಿ ದವು. ತರುವಾಯ ಅಲ್ಲಿಯೇ ಇದ್ದ ಟಾವೆಲಿನಿಂದ ಮೈಗೆ ತಾಗಿದ ನೀರು ಒರಸಿಕೊಂಡರು. ಕೋಟು, ಶರ್ಟುಗಳು ಈ ಮೊದಲೇ ತೂಗುದಂಡದ ಮೇಲೆ ಕೂತಿದ್ದವು. ಮೈಮೇಲೆ ಒಂದು ಗಂಜಿಫ್ರಾಕ್ ಹಾಗೂ ಉಟ್ಟ ಧೋತರ ಮಾತ್ರ ಇದ್ದವು. ಹೀಗೇ ಸ್ವಲ್ಪ ಹೊತ್ತು ಸುಂದರಿಯನ್ನೇ ನೋಡುತ್ತ ನಿಂತರು. ಆಮೇಲೆ ಥಟ್ಟನೆ ಹೋಗಿ ಮುಂದಿನ ಕದವನ್ನು ಮುಚ್ಚಿಕೊಂಡು ಬಂದರು.

ಅವರಂಥವರಿಗೂ ಒಮ್ಮೆ "ಏನು ಮಾಡಬೇಕು ?" ಎಂದು ತಿಳಿಯ ಲಿಲ್ಲ—ಸುಂದರಿಯ ಆ ಸ್ವರೂಪವನ್ನು ನೋಡಿ. ಕಣ್ಣು ಅಲ್ಲಿ ಬಿದ್ದಿರುವ ಸೌಂದರ್ಯ ರಾಶಿಯ ಮೇಲೆ ನೆಟ್ಟಿತ್ತು. ಮನಸ್ಸು ಕಾತರಿಸುತ್ತಿತ್ತು. ಮುಖದ ಮೇಲೆ ಹೆಮ್ಮೆಯ ಬಿಂಕವೂ ಕಾಣಿಸದಿಲ್ಲ. ಅವರು ಅಲ್ಲಿ ನಿಂತ ಭಂಗಿ, ಬೇಟೆ ಕೆಡವಿ ನಿಂತ ಬೇಡನ ಬಿಂಕವನ್ನು ನೆನಪಿಗೆ ತರುತ್ತಿತ್ತು. ಅಷ್ಟು ಪ್ರಫುಲ್ಲರೂ ಆಗಿದ್ದರು. ಅವಳ ತೊಂಡೆ ತುಟಿ ಕಂಡ ಅವರಿಗೆ ಅಲ್ಲಿ ಹಾಗೆ ಬಹಳ ಹೊತ್ತು ನಿಲ್ಲುವುದೂ ಅಸಾಧ್ಯವಾಯಿತು. ಅವಳ ಮುಂದೆ ಹೋಗಿ ಕುಸಿದು ಬಿದ್ದರು. ತೋಳ ಮೇಲೆ ತಲೆ ಇಟ್ಟು ಮಲಗಿದ ಸುಂದರಿಯ ಹರ ಯವೆಲ್ಲ ಅವರ ಮುಂದೆ ಪ್ರದರ್ಶನಕ್ಕಿಟ್ಟಂತಾಗಿತ್ತು. ಜಾರಿದ ಸೆರಗು ಅವಳೆ ದೆಯನ್ನು ಹೇಗೋ ಮುಚ್ಚಿದ ರವಕೆಯ ಮೇಲಿರಲಿಲ್ಲ. ಗಾಢನಿದ್ರೆಯಲ್ಲಿ ಭಾರವಾಗಿ ಉಸಿರಾಡಿಸುವಾಗ ಅವಳ ಉಬ್ಬಿದ ವಕ್ಷಸ್ಥಳದ ಏರಿಳಿತಗಳು

ಚೌಡಪ್ಪನವರ ಮನಸ್ಸನ್ನು ಹಿಂದೆ ಮುಂದೆ ಸರಿದಾಡಿಸುತ್ತಿದ್ದವು.

ತಂಗಾಳಿ ಬೀಸಿತು. ಅವರ ಜೀವಕ್ಕೆ ಅದರಿಂದ ಸುಖವಾಗಿರಲೂ ಬಹುದು. ಆಗ ಸುಂದರಿಯ ಮುಂಗುರುಳುಗಳು ಆ ಗಾಳಿಯಲ್ಲಿ ನಲಿದಾಡಿದವು. ಅವುಗಳನ್ನು ನೋಡುವಾಗ ಚೌಡಪ್ಪನವರಿಗೆ ಹೆಣ್ಣಿನ ಸೌಂದರ್ಯ ಕೇಶದಲ್ಲಿ ಎಂಬ ಭಾವನೆಯಾಯಿತು. "ಎಂಥ ಮುಖ!" ಎಂದು ಅವರ ಮನಸ್ಸು ಒಮ್ಮೆ ಆಶ್ಚರ್ಯಪಡದೆಯೂ ಬಿಡಲಿಲ್ಲ. "ಹಿಂದೆ ನಾನಿದನ್ನು ಕಂಡಿದ್ದೇನೆಯೇ!" ಎಂಬ ಸಂಶಯವೂ ಅದಕ್ಕೆ ಬಂದಿತು. ಅವಳ ಪಕ್ಕದಲ್ಲೇ ಕಾಲು ಚಾಚಿ, ತಾವೂ ಅವಳಂತೆ ಮಲಗಿದರು. ಅವಳಿಗಿನ್ನೂ ಎಚ್ಚರವಾಗಿರಲಿಲ್ಲ. ಅಂತೇ ಚೌಡಪ್ಪನವರೂ ಅವಳ ಮೈಮುಟ್ಟಿರಲಿಲ್ಲ.

"ಸುಂದರೀ" ಎಂದರು ಚೌಡಪ್ಪ ಮಲಗಿದಲ್ಲಿಂದಲೇ. ಅವಳು ಮೌನವಾಗಿಯೇ ಇದ್ದಳು. "ಬೇಕೆಂದು ನಟನೆ ಮಾಡುತ್ತೀಯಾ?" ಎನ್ನುತ್ತ ಕೈಗಳನ್ನು ಅವಳ ಎದೆಯತ್ತ ಒಯ್ದರು. "ಬೆವರಿನಿಂದ ಕುಪ್ಪಸವೂ ಒದ್ದೆಯಾಗಿದೆ! ಇನ್ನೂ ಎಚ್ಚರವಿಲ್ಲವೇ?" ಎಂದು ಅವಳನ್ನು ಕೇಳುತ್ತ ಕರುಣೆಪಟ್ಟಿತು ಅವರ ಮನಸ್ಸು.

ಆದರೇನು ಮಾಡುವುದು? ಅವರ ಕೈ ಸೋಂಕಿದೊಡನೆ ಸುಂದರಿ ಚಿಕ್ಕನೆದ್ದಳು "ಅಯ್ಯೋ ಬಿಸಿಲೇ! ಈ ಹೊತ್ತಿಗೂ ನೀವು ಬರುವುದೇ?" ಎಂದು ಎದ್ದುನಿಂತಳು ಆಕೆ. ಕುಪ್ಪಸದ ಗುಂಡಿ ಹಾಕುತ್ತ, "ಕುಪ್ಪಸದ ಗುಂಡಿಯನ್ನೂ ಬಿಚ್ಚಿದ್ದೀರಲ್ಲಾ!" ಎಂದು ಗುಣಗುತ್ತ ಅವರತ್ತ ಕೆರಳಿದ ಕಣ್ಣುಗಳಿಂದ ನೋಡಿದಳು. ಅವರಿನ್ನೂ ಮಲಗಿಯೇ ಇದ್ದರು. ಅವಳಷ್ಟು ಬೇಗನೆ ಏಳಲು ಅವರಿಂದಾಗಲಿಲ್ಲ. ಅಲ್ಲದೆ ಏಳುವ ಮನಸ್ಸೂ ಅವರಿಗಿರಲಿಲ್ಲ. ಕೂಡಲೆ ಕೈಚಾಚಿ ಅವಳ ಸೀರೆಯ ನೆರಿಗೆಯನ್ನು ಬಲವಾಗಿ ಹಿಡಿದರು. ಅವಳಿಗೆ ಅತ್ತ ಸರಿಯುವುದೂ ಕಷ್ಟವಾಯಿತು. ತಾನೂ ಮೇಲಿನಿಂದ ಅದೇ ನೆರಿಗೆಯನ್ನು ಎಳೆಯತೊಡಗಿದಳು. "ಏಳಿ, ಏಳಿ" ಎಂದಳು ಅವರತ್ತ ನೋಡುತ್ತ.

"ಮಲಗು ಮಲಗೇ" ಎಂದರು ಚೌಡಪ್ಪ.

"ಈ ಉರಿಬಿಸಿಲಿಗೆ!"

"ಹೌದು"

"ನೆರಿಗೆ ಬಿಡಿರಿ"

"ಸುಂದರಿ, ಚೇಷ್ಟೆ ಮಾಡಬೇಡ."

"ಗೋದಿ ಬರುವ ಹೊತ್ತಾಯಿತು"

"ಇಲ್ಲ" ಎನ್ನುತ್ತ ಚೌಡಪ್ಪನವರು ಅವಳನ್ನು ಬಲವಂತದಿಂದ ಅಲ್ಲಿ ಕುಳ್ಳಿರಿಸಿದರು. ಅರಳೆಯ ರಾಶಿಗೆ ಬೆಂಕಿ ಬಿದ್ದ ಮೇಲೆ ಕೇಳಬೇಕೆ? ಅದು ಕಡಿಮೆಯಾಗುವುದು ಕಷ್ಟ. ಚೌಡಪ್ಪನವರ ಕಾಯದ ಸ್ಥಿತಿಯೂ ಕಾಮದ ಬೆಂಕಿಯಿಂದ ಅಂತೇ ಆಗಿತ್ತು. ಅವರ ದರ್ಪದಲ್ಲಿ ಸಿಲುಕಿದ ಸುಂದರಮ್ಮ "ರಾತ್ರಿ ಬನ್ನಿ" ಎಂದು ಬೇಡಿಕೊಂಡಳು.

"ರಾತ್ರಿಯೂ ಬರುತ್ತೇನೆ"

"ಹಾಗಾದರೆ ಈಗ ಯಾಕೆ ಪೀಡಿಸುತ್ತೀರಿ?"

"ಛೆ" ಎನ್ನುತ್ತ ಅವಳ ರಟ್ಟೆಗಳನ್ನು ಗಟ್ಟಿಯಾಗಿ ಹಿಡಿದು ಮಲಗಿಸಲು ಹೆಣಗಾಡಿದರು. ಆದರೆ ಸುಂದರಿ ಕೇಳಲಿಲ್ಲ. ಆಗ ಅವಳ ಅಬಲಾವತಾರ ಬದಲಾಯಿತು. ಅವಳ ಬಲದ ಮುಂದೆ ಚೌಡಪ್ಪನವರ ಬಲ ನೀರಾಯಿತು. ಕ್ರೋಧದಿಂದ ಕೆಂಪಾದರು. ಎದ್ದು ಒಂದು ಒದ್ದರು— ಅವಳಿಗೆ. "ಯಾವುದಕ್ಕೂ ಇವತ್ತು ರಾತ್ರಿ ಬರುತ್ತೇನೆ" ಎಂದು ಹತ್ತಾರು ಬೈದು, ಕೋಟು, ಅಂಗಿ ಸಿಕ್ಕಿಸಿಕೊಂಡರು. ತುರತುರನೆ ಅವಳನ್ನು ನೋಡುತ್ತ ಅಬ್ಬರದಿಂದ ಹೊರಹೊರಟರು. ಅವರ ಸಿಟ್ಟು ಒಂದೆರಡು ಕಾಜುಗಳನ್ನೂ ಒಡೆದು ಪುಡಿ ಮಾಡಿತು.

ಅವರು ಹೋದೊಡನೆ ಸುಂದರಮ್ಮ ಬಾಗಿಲು ಮುಚ್ಚಿಕೊಂಡಳು. ಒಳಗೆ ಬಂದು ಗಡಿಯಾರ ನೋಡಿದಳು. "ಇನ್ನೂ ಮೂರು ಗಂಟೆಯಷ್ಟೆ. ಗೋದಿ ಬರಲು ಇನ್ನೂ ತಾಸು, ದೀಡು ತಾಸು—ಹೊತ್ತಿದೆ" ಎಂದು ನೆನೆದು ಮಲಗಿದಳು. ಆದರೆ ನಿದ್ದೆ ಬಾರದಾಯಿತು. ಮನಸ್ಸು ಮುರಿಯತೊಡಗಿತು. ಕಣ್ಣು ಮುಚ್ಚಿದೊಡನೆ ಚೌಡಪ್ಪನವರ ಮೂರ್ತಿ ಬಂದು ಬೆದರಿಸಹತ್ತಿತು. "ನನಗೇಕೆ ಹೀಗಾಗಲಿಕ್ಕೆ ಹತ್ತಿದೆ?" ಎಂದು ತನ್ನನ್ನೇ ಪ್ರಶ್ನೆ ಮಾಡಿಕೊಂಡಳು. ಉತ್ತರ ಸಿಗಲಿಲ್ಲ. ಎದ್ದು ಕೂತಳು. ಕಣ್ಣು ತಿಕ್ಕಿಕೊಳ್ಳುತ್ತ ಬದಿಯ ಗೋಡೆಯ ಕಪಾಟಿನತ್ತ ದೃಷ್ಟಿತೂರಿದಳು. ಅಲ್ಲಿ ಎರಡು

ಬಾಟಲಿಗಳು ಕೂತಿದ್ದವು. ಅವುಗಳನ್ನೇ ದಿಟ್ಟಿಸಿ ನೋಡಿಯೇ ನೋಡಿದಳು. "ಅವುಗಳನ್ನು ಒಯ್ದು ಗಟಾರಕ್ಕೆ ಎಸೆದುಬರಲೇ ?" ಎಂದು ಅವಳ ಮನಸ್ಸು ಸಂಶಯಕ್ಕೀಡಾಯಿತು. ಆಗ ಒಮ್ಮೆಲೇ ಮೈಯೊಳಗೆ ನವೋತ್ಸಾಹ ಹರಿದಂತೆ ಭಾಸವಾಯಿತವಳಿಗೆ. "ಆದರಲ್ಲಿ ಒಂದಷ್ಟು ಬಾಗಿಸಿ ಬಿಡುತ್ತೇನೆ" ಎಂದು ಎದ್ದುಹೋಗಿ, ಒಂದು ಬಾಟ್ಲಿಯನ್ನು ಕೈಗೆ ತೆಗೆದುಕೊಂಡೂ ಆಯಿತು. ಆದರೆ ಮರುಕ್ಷಣಕ್ಕೆ ಚೌಡಪ್ಪನವರ ನೆನಪಾಯಿತು. "ಹೌದು, ಪಾಪ ಅವರೂ ಬರಲಿ. ರಾತ್ರಿ ಬರುತ್ತೇನೆ ಅಂದಿದ್ದಾರೆ. ಬಹುಶಃ ಇವುಗಳನ್ನು ತರಲಿಕ್ಕೇ ಅವರು ಊರು ಬಿಟ್ಟು ಹೋಗಿರಬಹುದು" ಎನ್ನುತ್ತ ಅದನ್ನು ಪುನಃ ಅಲ್ಲಿಯೇ ಇಟ್ಟಳು. ಆಗ ಅವಳಿಗೆ ಎಲ್ಲಿಂದಲ್ಲಿಂದ ನಗುವೂ ಬಂತು. ವಿಕಟವಾದ ನಗುವೇನೋ ಹೌದು ಅದು. ಆದರೆ ಅವಳಿಗೆ ಮಾತ್ರ ಅದರ ಪರಿವಿರಲಿಲ್ಲ. ನಕ್ಕೇ ನಕ್ಕಳು. "ಗಂಡಸಂತೆ! ಗಂಡಸು! ಯಾರು ಹೇಳುತ್ತಾರೆ ಗಂಡಸೆಂದು? ಅವನ ಗಂಡಸುತನವೆಲ್ಲ ನನ್ನ ಎರಡು ಬಾಹುಗಳಲ್ಲಿದೆ. ನನ್ನ ಎರಡು ಇದೇ ಈ ಎರಡು ಭದ್ರ ಬಾಹುಗಳಲ್ಲಿದೆ" ಎನ್ನುತ್ತ ಮನೆಯ ಬಾಗಿಲುಗಳನ್ನೆಲ್ಲ ತೆರೆಯತೊಡಗಿದಳು. ಇದ್ದಬಿದ್ದ ಸಣ್ಣ ಪುಟ್ಟ ಮನೆಗೆಲಸವನ್ನೂ ಅದೇ ಹುಚ್ಚು ಹುಮ್ಮಸದಲ್ಲಿ ಮುಗಿಸಿದಳು. ಅವಳ ಮನಸ್ಸು ಎಲೆಯ ಮೇಲಿನ ನೀರ ಹನಿಯಂತೆ ಅಸ್ಥಿರವಾಗಿತ್ತು—ಕವಿಗಳು ಹೇಳುವಂತೆ.

ಅಷ್ಟರಲ್ಲಿ ಢಂಯ್ ಎನ್ನುತ್ತ ಗೋಡೆಯ ಗಡಿಯಾರ ನಾಲ್ಕು ಸಲ ಗರ್ಜಿಸಿತು. ಅದರ ಢಣಾತ್ಕಾರ ಕಿವಿಗೆ ಬಿದ್ದೊಡನೆ ಸುಂದರಮ್ಮ ಸರ್ರನೆ ಅಡುಗೆಮನೆ ಸೇರಿದಳು. "ಈಗ ಗೋದಿ ಬರುತ್ತಾಳೆ. ಇನ್ನು ಅರ್ಧ ಗಂಟೆಯಲ್ಲಿ ಚಹಾ ತಯಾರಿರಬೇಕು." ಎಂದು ಚಹ ತಯಾರಿಸುವುದರಲ್ಲಿ ತಲ್ಲೀನಳಾದಳು. ಚಹಕ್ಕೆ ಇಟ್ಟ ನೀರು ಕುದಿ ಹಿಡಿಯಿತು. ಅದು ಕಳಕಳನೆ ಕುದಿಯುತ್ತಿತ್ತು. ಆಗ ಸುಂದರಿಯ ತಲೆಯಲ್ಲಿ ಮತ್ತೊಂದು ವಿಚಾರ ಹೊಳೆಯಿತು. "ಚಹದ ಜೊತೆಗೆ ಏನು ಮಾಡಲಿ?" ಎಂದು ವಿಚಾರಿಸುತ್ತ ಅತ್ತ ಇತ್ತ ನೋಡುತ್ತಿರುವಾಗಲೇ ಎದುರಿಗೆ ಬಾಳೇಕಾಯಿ ಕಂಡವು. ಸರಿ, ಅವುಗಳನ್ನು ಕೊಯ್ದು ಬಜಿ ಮಾಡಲು ತಯಾರು ನಡೆಸಿದಳು. ನಾಲ್ಕು ಪ್ಲೇಟು ಬಜಿ ಕರಿದೂ ಮುಗಿಯಿತು. ಹೊರಗೆ ಬಂದು ಗಂಟೆ ನೋಡಿದಳು.

ನಾಲ್ಕೂವರೆಗೆ ಕೇವಲ ಐದು ನಿಮಿಷ ಉಳಿದಿತ್ತು. "ಹೋ!" ಎನ್ನುತ್ತ ಒಳಗೆ ಓಡಿ ಚಹಾ ಹಾಕಿದಳು. ಮಗಳು ಬಂದ ಮೇಲೆ ಸೋಸುವುದೆಂದು ನಿರ್ಧರಿಸಿಯೂ ಆಯಿತು. ಕಾರಣ, ಗೋದಿಯು ಹಾದಿ ಕಾಯುತ್ತ ನಿಂತಳು. "ಥಂಯ್" ಎಂದು ಮತ್ತೊಮ್ಮೆ ಗಡಿಯಾರ ಗಂಟೆ ಸೂಚಿಸಿತು

ಆಗ ಯಾವುದೋ ಒಂದು ಏಳು-ಏಳುವರೆ ವರುಷ ವಯಸ್ಸಿನ ಹುಡುಗಿ ಸುಂದರಿಯ ಮನೆಯತ್ತ ಓಡಿ ಬರತೊಡಗಿತು. ಸುಂದರಿ ಮೊದಲು ಅವಳು ಗೋದಿಯೇ ಎಂದು ಹಸನ್ಮುಖಿಯಾಗಿದ್ದಳು. ಆದರೆ ಆ ಹುಡುಗಿ ಹತ್ತಿರ ಬಂದೊಡನೆ ಅವಳು ಗೋದಿಯಲ್ಲವೆಂದು ಖಂಡಿತವಾಯಿತು. ಆ ಬಾಲಕಿಯನ್ನೇ ದಿಟ್ಟಿಸುತ್ತ ನಿಂತಳು ಸುಂದರಿ. ಅವಳ ಮನೆಯ ಗೇಟು ದಾಟದೊಡನೆ ಆ ಹುಡುಗಿ, "ಏ ಸೂಳೀ, ನಿನ್ನ ಗೋದಿ ಅಲ್ಲಿ ಬಿದ್ದಿದ್ದಾಳೆ" ಎಂದು ಅವಸರದಿಂದ ಹೇಳಿತು. ಆ ಸಣ್ಣ ಹುಡುಗಿಯ ಪ್ರತಿಯೊಂದು ಶಬ್ದವೂ ಸುಂದರಿಯನ್ನು ವಿಷಸರ್ಪದಂತೆ ಕಡಿಯಿತು. "ಸೂಳಿ" ಎಂದು ಆ ಸಣ್ಣ ಹುಡುಗಿ ಹೇಳಿದ ಮಾತು ಸುಂದರಿಯ ಮನಸ್ಸನ್ನು ಒಂದುಕ್ಷಣಕ್ಕೆ ಸಹಸ್ರಾರು ಸಲ ಒಂದೇ ಸವನೆ ಇರಿಯತೊಡಗಿತು. ಮುಖ ಬಾಡಿದ ಬದನೆಯಂತಾಯಿತು.

"ಎಲ್ಲಿ? ಎಲ್ಲಿ?" ಎನ್ನುತ್ತ ಸುಂದರಿ ಅತ್ತಿತ್ತ ಕುರುಡಿಯಂತೆ ಕೈ ಮಾಡಿ ತಿರುಗತೊಡಗಿದಳು. ಅವಳ ಆ ಗಾಬರಿಪಟ್ಟ ಸ್ಥಿತಿಯನ್ನು ಕಂಡು ಆ ಚಿಕ್ಕ ಹುಡುಗಿ ಅಲ್ಲಿ ನಿಲ್ಲಲಿಲ್ಲ. "ಎಲ್ಲಿ? ಎಲ್ಲಿ?" ಎನ್ನುತ್ತ ಮತ್ತೆ ಸುಂದರಿ ಹೊರಗೆ ಓಡಿ ಬಂದಳು. ಆ ಹುಡುಗಿ ಓಡುತ್ತಿತ್ತು. ಅದರ ಬೆನ್ನು ಹಿಡಿದು ಒಡುತ್ತಿದ್ದಳೋ ಏನೋ ಸುಂದರಿ! ಆದರೆ ಅಷ್ಟರಲ್ಲಿ ಇಬ್ಬರು ಪೋಲೀಸರು ಗೋದಿಯನ್ನು ಟಾಂಗಾದ ಮೇಲೆ ಕೂಡಿಸಿಕೊಂಡು ತಂದರು. ಸುಂದರಿಯ ಮನೆಯ ಮುಂದೆ ಸ್ವಲ್ಪ ದೂರದಲ್ಲಿ ಟಾಂಗಾ ನಿಂತಿತು.

ಟಾಂಗಾ ನಿಂತೊಡನೆ, "ಅಮ್ಮ, ಅಮ್ಮ" ಎನ್ನುತ್ತ ಗೋದಿ ಓಡಿ ಬರಲು ಹವಣಿಸಿದಳು—ಕೆಳಗಿಳಿದದು. ಆದರೆ ಪೋಲೀಸರು ಮಗುವನ್ನು ಬಿಡಲಿಲ್ಲ. "ಇದೇಯೋ ನಿನ್ನ ಮನೆ?" ಎಂದನು ಒಬ್ಬ ಪೋಲೀಸ.

"ಮತ್ತೂ?" ಎಂದು ಗೋದಿ ಕಣ್ಣು ತಿರುಗಿಸಿದಳು.

"ಹುಡುಗಿ ಒಳ್ಳೇ ಹುಶಾರಿ, ಚುರುಕುಂಟು, ಅಡ್ಡಿ ಇಲ್ಲ" ಎಂದನು ಮತ್ತೊಬ್ಬ ಪೋಲೀಸ.

"ಗೃಹಿಣಿಯರ ಮಕ್ಕಳು ಹೀಗೆ ಎಂದೂ ಹುಟ್ಟುವುದಿಲ್ಲ. ಸೂಳೆಯ ಮಗಳಲ್ಲವೇ ಇದು ?" ಎಂದು ಇನ್ನೊಬ್ಬ ಪೋಲೀಸ ಉತ್ತರಿಸಿದ.

"ಇವಳು ಸೂಳೆಯೇ ?" ಎಂದು ಮತ್ತೊಬ್ಬ ಕೇಳುತ್ತಿದ್ದ ಮೆಲ್ಲಗೆ. ಆಗ ಅಲ್ಲಿಗೆ ಸುಂದರಿ "ಗೋದೀ" ಎನ್ನುತ್ತ ಓಡಿ ಬಂದಳು ಗೋದಿಯೂ ಅವಳನ್ನು ಹೋಗಿ ತಬ್ಬಿಕೊಂಡಳು.

ಮಗಳ ತಲೆಗೆ ಕಟ್ಟಿದ ಬಿಳಿಯ ಪಟ್ಟಿಯನ್ನು ನೋಡಿ ಸುಂದರಿಯ ಹೊಟ್ಟೆಯಲ್ಲಿ ಉರಿಯೇ ಬಿತ್ತು. "ಏನಾಯಿತು ಕಂದಾ ?" ಎಂದು ಕಣ್ಣೀರು ಸುರಿಸುತ್ತ ಕೇಳಿದಳು. ಮಗಳನ್ನು ಎತ್ತಿ ತೋಳಮೇಲೆ ಕೂಡಿಸಿದಳು. ಸ್ವಲ್ಪ ಹೊತ್ತು ಎಲ್ಲರೂ ಮೌನದಿಂದ ಇದ್ದರು.

ಅವರೆಲ್ಲ ಸುಮ್ಮನೇ ನಿಂತದ್ದನ್ನು ನೋಡಿ, ಟಾಂಗಾವಾಲ ಅವಸರ ಮಾಡುತ್ತ "ಭಾಡಾ ರಾವಸಾಹೇಬ್—ಸರದಾರಜೀ" ಎಂದು ತನ್ನದೇ ಆದ ಶೈಲಿಯನ್ನು ಉಪಯೋಗಿಸಿ ಮಾತಾಡಿದ.

"ಎಷ್ಟು ?" ಎಂದಳು ಸುಂದರಿ.

"ಆಠಾಣಾ !" ಎಂದನು ಟಾಂಗಾವಾಲ.

ಸುಂದರಿ ಒಳಗೆ ಹೋದಳು. ಮಗುವನ್ನು ಅಲ್ಲಿಯೇ ಕೂಡಿಸಿ ಹೊರಗೆ ಬಂದಳು. "ಲೇ" ಎನ್ನುತ್ತ ಅವನಿಗೆ ಎಂಟಾಣೆ ಕೊಟ್ಟಳು. ಆತ ತನ್ನ ದಾರಿ ಹಿಡಿದ.

"ಸಿವಿಲ್ಲಿನಿಂದ ದವಾ ತನ್ನಿ ಬಾಯೀ" ಎಂದು ಪೋಲೀಸನೊಬ್ಬ ಉಪಚಾರದ ಮಾತಾಡಿದ ಅವಳನ್ನೇ ನೋಡುತ್ತ.

"ಔಷಧವೇನೂ ಅಗತ್ಯವಿಲ್ಲ. ಪೆಟ್ಟೇನೂ ಜೋರಾಗಿಲ್ಲ. ಆದರೆ ಪಟ್ಟಿ ಮಾತ್ರ ಇನ್ನೆಂಟು ದಿನದ ಮಟ್ಟಿಗೆ ಬಿಚ್ಚಬಾರದು" ಎಂದು ಮತ್ತೊಬ್ಬ ಪೋಲೀಸ ಬುದ್ಧಿ ಹೇಳಿದ. ಅವರಿಬ್ಬರ ಮಾತಿನ ನಡುವೆ ಸುಂದರಿಗೆ "ಹೂಂ" ಎನ್ನಲಿಕ್ಕೂ ಸಮಯ ಸಿಗಲಿಲ್ಲ.

ಆಮೇಲೆ ಅತ್ತಿತ್ತ ನೋಡುತ್ತ, ದೇಶಾವರಿ ನಗೆ ಬೀರುತ್ತ ಪೋಲೀಸರು

ಹೊರಡಲು ಅಣಿಯಾದರು. "ನಾವು ಹೋಗುತ್ತೇವೆ ಇನ್ನು. ಒಳ್ಳೇದು" ಎಂದನು ಒಬ್ಬ.

"ನಿಮ್ಮ ಉಪಕಾರ ನಾನು ಮರೆಯೋದಿಲ್ಲ" ಎಂದಳು ಸುಂದರಿ.

"ಅಡ್ಡಿ ಇಲ್ಲ ಬಿಡಿ ಬಾಯೀ .... ಉಪಕಾರ ಯಾವ ಮಣ್ಣಿದ್ದು? ....ಸರಿ. ಅಷ್ಟಿದ್ದರೆ ಸಾಕು. ಆಯಿತು, ಒಳ್ಳೇದು ನಾನು ಬರ್ತೇನೆ, ಇವತ್ತು" ಎನ್ನುತ್ತ ಮತ್ತೊಬ್ಬ ಪೋಲೀಸ ಅವಳ ಅಪ್ಪಣೆ ಪಡೆದುಕೊಂಡ. ಆಕೆ ಅವನ ಮಾತುಗಳನ್ನು ಚೆನ್ನಾಗಿ ಕೇಳಿಕೊಳ್ಳಲಿಕ್ಕೂ ನಿಲ್ಲದೆ, ಬಾಗಿಲು ಮುಚ್ಚಿದಳು.

ಪೋಲೀಸರೂ ಹೊರಟರು.

ಗೇಟಿನ ಹೊರಗೆ ಹೋದೊಡನೆ, ಅವರಲ್ಲಿ ಒಬ್ಬ ನಗುತ್ತ "ಇವತ್ತು ಈ ಓಣಿಯ ಗಸ್ತಿ ನನ್ನದೋ" ಎಂದು ಹಿಗ್ಗಿದ.

"ಅವಳು ಯಾರು ಎಂದು ಗೊತ್ತಿದೆಯೋ ನಿನಗೆ?........ ಮೊದಲು ಅವಳು ಯಾರು ಎಂದು ತಿಳಿದುಕೋ. ಆಮೇಲೆ ಗಸ್ತಿ ಮಾಡು" ಎಂದು ಎಚ್ಚರಿಸಿದ ಮತ್ತೊಬ್ಬ.

"ಸೂಳೆ ಅಲ್ಲವೋ?"

"ಯಾರ ಸೂಳೆ?"

"ಸೂಳೆಯರಿಗೆ ಯಾರಾದರೇನು?"

"ಛೀ ಛೀ, ಹಾಗೆ ಹೇಳಬೇಡ. ಅವಳು ದೊಡ್ಡ ಶ್ರೀಮಂತ ಸಾಹುಕಾರನ ಸಾನಿ. ನಿನಗೆ ನನಗೆ ಸಿಗುವ ಮಾಲಲ್ಲವೋ ಅದು" ಎಂದು ಅವನ ಬೆನ್ನಿಗೆ ಕೈತಟ್ಟಿಯೇ ಹೇಳಿದ.

"ಅವಳ ಮನೆಯ ಠೀವಿ ನೋಡಿ ನನಗೂ ಹಾಗೆ ಅನಿಸಿತ್ತು. .... ಹಾಗಾದರೆ ಏನೂ ಉಪಯೋಗವಿಲ್ಲ. ಹೆಣ್ಣು ಒಳ್ಳೇ ಲಾಯಕ್ ಉಂಟೋ" ಎಂದು ಅವನ ನಿರಾಶೆ, ಆಸೆಗಳೆರಡನ್ನೂ ಹೇಳುತ್ತ ಮುನ್ನಡೆದ. ಹಾಗೇ ಅವರು ಬೀದಿಯಲ್ಲಿ ಮಾಯವಾದರು. ದಾರಿ ನಡೆಯುತ್ತ ಪೋಲೀಸರು ಚೌಡಪ್ಪನವರ ಇತಿಹಾಸವನ್ನೆಲ್ಲ ಜೀರ್ಣೋದ್ಧಾರ ಮಾಡುತ್ತಿದ್ದರು. ಅವರಿಬ್ಬರಲ್ಲಿ ಒಬ್ಬನಿಗೆ ಮಾತ್ರ ಸುಂದರಿ, ಚೌಡಪ್ಪನವರ ಪರಿಚಯವಿತ್ತು. ಕಾರಣ ಅವನೇ ಮತ್ತೊಬ್ಬನಿಗೆ ಅದನ್ನೆಲ್ಲ ತಿಳಿಸಬೇಕಾಯಿತು. ತಿಳಿಸಿಯೇ ಬಿಟ್ಟ.

ಇಲ್ಲಿಯ ವರೆಗೆ ಆರಾಮ ಕುರ್ಚಿಯ ಮೇಲೆ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದ ಗೋದಿಯನ್ನು ತೆಕ್ಕೆಯಲ್ಲಿ ಒಯ್ದು ಮೆಲ್ಲನೆ ಪಲ್ಲಂಗದ ಮೇಲೆ ಹೂವಿನಂತೆ ಇಟ್ಟಳು ಸುಂದರಿ. "ನನಗೇನು ಆಗಿಲ್ಲ ಅಮ್ಮಾ. ನೀನೇನು ಹೆದರಬೇಡ" ಎನ್ನುತ್ತ ಗೋದಿ ತಾಯಿಗೆ ಧೈರ್ಯ ಹೇಳುತ್ತಿದ್ದಳೇನೋ ಹೌದು. ಆದರೆ ಅವೇ ಮಾತುಗಳು ಸುಂದರಿಯನ್ನು ಮತ್ತಿಷ್ಟು ತಾಳ್ಮೆಗೆಡುವಂತೆ ಮಾಡುತ್ತಿದ್ದುವು. ಮಗಳ ಅಂಥ ನುಡಿಗಳನ್ನು ಕೇಳಿ ಅವಳ ಹೃದಯ ವಾತ್ಸಲ್ಯದಿಂದ ಕರಗುತ್ತಿತ್ತು. "ನನ್ನ ಮಗುವಿಗೆ ಎಷ್ಟೊಂದು ಪ್ರೇಮ! ಮನೆಯಲ್ಲಿಯ ಮುದುಕಿಯಾಡುವ ಮಾತಿನಂತೆ ಮಗುವಿನ ಮಾತಿದೆಯಲ್ಲ. ಬೇರೆಯವರು ಹೇಳುವಂಥ ಮಾತುಗಳನ್ನು ತಾನೇ ಹೇಳುತ್ತಿದ್ದಾಳಲ್ಲ. ನನಗೂ ಧೈರ್ಯ ಹೇಳುವ ಇಂಥ ಮಗುವನ್ನು ದೇವರು ನನಗೆ ಕೊಟ್ಟು, ನನ್ನನ್ನು ಆದರ ಪ್ರೇಮಋಣಿಯನ್ನಾಗಿ ಎಲ್ಲಿ ಮಾಡಿಡುತ್ತಾನೋ!" ಎಂದು ಮನಸ್ಸಿನಲ್ಲೇ ಆನಂದಪಡುತ್ತ ಮರುಗಿದಳು ಆಕೆ. "ಏಳಬೇಡ, ಸುಮ್ಮನೆ ಮಲಗು ಗೋದಾ. ನಾನು ಚಹಾ ತರುತ್ತೇನೆ" ಎನ್ನುತ್ತ ಸುಂದರಿ ಒಳಮನೆಗೆ ಹೋದಳು. ಅವಳು ಚಹಾ ಸೋಸಿಕೊಂಡು ತರುವಷ್ಟರೊಳಗೆ ಗೋದಿ ಅವಳಿದ್ದಲ್ಲಿಗೆ ಬಂದಾಗಿತ್ತು. "ಅಯ್ಯೋ! ನೀನು ಇಲ್ಲಿಗೂ ಬಂದೆಯಾ? ನಾನು ನಿನಗೆ ಹೇಳಿ ಬಂದದ್ದು ಏನು? ಹಾಗೆ ಎದ್ದು ಓಡಾಡಬಾರದು ಕಂದಾ" ಎಂದು ರಮಿಸುತ್ತ, ಚಹದ ಪಾತ್ರೆಗಳನ್ನು ಕೆಳಗಿಟ್ಟು; ಗೋದಿಯನ್ನು ಎತ್ತಿಕೊಂಡು ಹೊರಗೆ ಬಂದಳು ಸುಂದರಿ. ಪುನಃ ಪಲ್ಲಂಗದ ಮೇಲೆ ಮಲಗಿಸಿದಳು. ಅಲ್ಲಿಗೆ ಚಹಾ, ತಿಂಡಿ ತೆಗೆದುಕೊಂಡು ಬಂದಳು. ಆಮೇಲೆ ಮತ್ತೆ ಮಗಳನ್ನು ಮೆಲ್ಲಗೆ ಎತ್ತಿ ಕೆಳಗೆ ಕುಳ್ಳಿರಿಸಿಯಾಯಿತು. "ತಕೋ, ಎರಡೇ ಸಾಕು. ಬಹಳ ತಿಂದರೆ ಒಳ್ಳೆಯದಲ್ಲ. ಮೊದಲೇ ಎಣ್ಣೆಯಲ್ಲಿ ಕರಿದ ತಿನಸು. ಚಹಾ ಕುಡಿ ಮಗೂ" ಎಂದು ಚಹಾ ಕಪ್ಪಿನಲ್ಲಿ ಸುರಿದಳು. ಎರಡು ಬಜಿಯನ್ನೂ ಕೊಟ್ಟಳು.

"ನನಗೆ ಅವು ಬೇಡ ಅಮ್ಮಾ, ಬರೇ ಚಹಾ ಮಾತ್ರ ಸಾಕು" ಎನ್ನುತ ಗೋದಿ ಒಂದು ಕಪ್ಪು ಚಹಾ ಕುಡಿದಳು. ಅಂತೇ "ಅಮ್ಮಾ ನೀನು ಕುಡಿಯುವುದಿಲ್ಲವೋ?" ಎಂದು ತಾಯಿಗೆ ಪ್ರಶ್ನೆಯನ್ನು ಕೇಳದೆ ಬಿಡಲಿಲ್ಲ.

"ನೀನು ಮೊದಲು ಕುಡಿ ಮಗೂ. ಆಮೇಲೆ ನಾನು ಒಳಗೆ ಕುಡಿಯು

ತ್ತೇನೆ " ಎಂದು ಸುಂದರಿ ಮಗಳತ್ತ ನೋಡುತ್ತ ಹೇಳಿದಳು

ಮಗಳಿಗೆ ಆದ ಗಾಯದಿಂದ ಅವಳ ಮನಸ್ಸಿಗೆ ಕಾಳಕೂಟದ ಊಟವಾಗಿತ್ತು. ಯಾವುದೂ ಬೇಕೆಂದು ಅನಿಸುವಂತಿರಲಿಲ್ಲ. ಕಾರಣ, ಮಗಳ ಮುಂದೆ ಹಾಗೆ ಸುಳ್ಳಾಡಬೇಕಾಯಿತು. ಅಂತೇ ಗೋದಿ ಚಹಾ ಕುಡಿದದ್ದು ನೋಡಿ, ತಾನು ಕುಡಿದದ್ದಕ್ಕಿಂತ ಹೆಚ್ಚಿನ ತೃಪ್ತಿ ಕ್ಷಣಕಾಲವಾದರೂ ಅವಳಿಗಾಗದೆ ಬಿಡಲಿಲ್ಲ.

ತಾನು ಚಹ ಕುಡಿದು ಮುಗಿದ ಮೇಲೆ ಪುನಃ " ಅಮ್ಮ, ನೀನು ಕುಡಿಯದೆ ಬರಬೇಡ " ಎಂದು ಗೋದಿ, ಒಳಗೆ ಹೋಗುತ್ತಿರುವ ತಾಯಿಗೆ ಎಚ್ಚರಿಸಿದಳು. " ನೀನು ಎದ್ದು ಬರಬೇಡ " ಎಂದು ಸುಂದರಿಯೂ ಅವಳಿಗೆ ಹೇಳಿದಳು. ಆದರೆ ಒಳಗೆ ಹೋದಾಗ ಅವಳ ಎದೆಯಲ್ಲಿ ದುಃಖದ ಸರೋವರವೇ ಅಲ್ಲೋಲ ಕಲ್ಲೋಲವಾಗತೊಡಗಿತು. ಮನೋಹರವಾದ ಮೂರ್ತಿಯಂತಿದ್ದ ಅವಳ ಮನಸ್ಸು ವೇದನೆಯ ಏಟಿನಿಂದ ಛಿನ್ನವಿಚ್ಛಿನ್ನವಾಗಿ ಒಡೆಯತೊಡಗಿತು. ಚೌಡಪ್ಪನವರ ಬಣ್ಣದ ಬದುಕು ಅವಳೆದೆಯಲ್ಲಿ ಪ್ರೇಮದ ಕಾಜಿನ ಮನೆಯನ್ನು ಕಟ್ಟಿತ್ತು. ಅದು ಈಗ ಈ ಹೊರಗಿನ ಸಮಾಜದ ಘೋರ ಪ್ರತಿಭಟನೆಯ ಪೆಟ್ಟುಗಳಿಂದ ಒಡೆಯತೊಡಗಿದೆ. ಅವಳ ಮಗಳಿಗೆ ಹೀಗೆ ಗಾಯವಾದದ್ದು ಇದೇ ಮೊದಲನೆಯ ಸಲವಲ್ಲ. ಬಹುಶಃ ಇದು ಮೂರನೆಯ ಸಲವಿರಬಹುದು. ಅವಳ (ಗೋದಿಯ) ಹಣೆಯಲ್ಲಿ ಎರಡು ಕಲೆಗಳು ಈ ಮೊದಲೇ ಇದ್ದವು. ಈಗ ಮೂರನೆಯ ಏಟು ಅದೇ ಹಣೆಗೆ ಬಿದ್ದಿದೆ. ಪೆಟ್ಟೇನೂ ಬಲವಾದದ್ದಲ್ಲ. ಆದರೆ ಆದರಿಂದ ಆದ ಮಾನಸಿಕ ಅಸಂತೃಪ್ತಿ ಅಳಿಯಲಾರದ್ದು; ಮರೆಯಲಾರದ್ದು. ಆ ಗಾಯದ ಕಲೆಗಳು ಮಾಯವಾದರೂ ಸುಂದರಿಯ ಹೃದಯದಾಳದಿಂದ ಆದರ ನೋವು ಸರಿಯುಲಿಕ್ಕಿಲ್ಲ. ಅದನ್ನೆಲ್ಲ ನೆನೆದೇ ಅವಳಿಗೆ ದುಃಖ ಉಕ್ಕಿ ಬಂತು. ಚಹಾ ಕುಡಿಯಲು ಮನಸ್ಸು ಬರಲಿಲ್ಲ. ಬಚ್ಚಲಿಗೆ ಚಲ್ಲನೆ ಚೆಲ್ಲಿದಳು ಅದನ್ನು. ಆಗ ಅವಳ ಕಣ್ಣುಗಳೂ ಅಶ್ರು ಸುರಿಸಿದವು. ಸೆರಗಿನಿಂದ ಒರಸಿಕೊಂಡಳು. ಅಳುತ್ತ ಚಹದ ಕಪ್ಪುಗಳನ್ನು ತೊಳೆದಿದ್ದಳು. ಉಳಿದ ಬಜಿಯನ್ನು ಹಾಗೇ ಬಿಟ್ಟಳು. ಇನ್ನು ಅರ್ಧ ಗಂಟೆಯಲ್ಲಿ ಬರುವ ಭಾಂಡಿ ತಿಕ್ಕುವ ಮುದುಕಿಗೆ ಅವುಗಳನ್ನು ದಾನ ಮಾಡುವ ಇಚ್ಛೆ ಅವಳಿಗೆ ಬಂದಿರಬೇಕು. ಅದರ ಹೊರತಾಗಿ ಬೇರೆ

ಉಪಾಯವೂ ಇರಲಿಲ್ಲ.

"ಅವರ ಸಂತಾನ ಹಾಳಾಗಲಿ" ಎಂದು ಮಗಳಿಗೆ ನೋವು ಮಾಡಿದ ವರನ್ನು ಬೈಯುತ್ತ ಸುಂದರಿ ಹೊರಗೆ ಬಂದಳು. ಅವಳಿಗೆ ತಿಳಿದಂತೆ ಒಳಗಿನ ಕೆಲಸವನ್ನು ಮಾಡಿ ಆಕೆ ಹೊರಗೆ ಬಂದಿದ್ದಳು. ಮಗಳ ಪಲ್ಲಂಗದ ಹತ್ತಿರ ಒಂದು ಕುರ್ಚಿ ತಂದಿಟ್ಟು ಅದರ ಮೇಲೆ ಕೂತು, "ಕಂದಾ" ಎಂದು ಕರೆದಳು. ಗೋದಿಗೆ ಆದೇ ಕಣ್ಣಡ್ಡವಾಗಿತ್ತು. ತಾಯಿಯ ಸ್ವರ ಕೇಳಿದೊಡನೆ ಕಣ್ಣು ತೆರೆದಳು. ತುಟಿಯಲ್ಲಿ ಮುಗುಳುನಗೆ ಅರಳಿತು.

"ಯಾಕಮ್ಮ?" ಎಂದಳು ಗೋದಿ.

"ನಿದ್ದೆ ಬರುತ್ತಿದೆಯೋ? ಹಾಗಾದರೆ ಮಲಗು"

"ಸುಮ್ಮನೆ ಕಣ್ಣು ಮುಚ್ಚಿದ್ದೇನಮ್ಮಾ"

"ಏನಾಗುತ್ತಿದೆ ಮಗೂ?"

"ಏನೂ ಇಲ್ಲ ನನಗೇನಾಗಿದೆ?"

ಸುಂದರಿ ಸುಮ್ಮನೆ ಕೂತಿದ್ದಳು. "ಯಾಕೆ ಮೌನವಾಗಿದ್ದಿಯಮ್ಮಾ" ಎಂದು ಗೋದಿಯೇ ಪ್ರಶ್ನಿಸಿದಳು.

"ನಾನೆಲ್ಲಿ ಮೌನವಾಗಿದ್ದೇನೆ? ಮನಸ್ಸಿನಲ್ಲಿ ಅವರನ್ನು ಶಪಿಸುತ್ತಿದ್ದೇನೆ."

"ನೀನು ಶಾಪ ಕೊಟ್ಟರೆ ಅವರಿಗೇನಾಗುತ್ತದೆ?"

ಆಗ ಸುಂದರಿಗೆ ಎಲ್ಲಿಂದಲೋ ನಗು ಬಂತು. ಹೊರಗೆ ನೋಡಿ ನಗ ತೊಡಗಿದಳು. ತಾಯಿಯ ಈ ತರಹದ ವರ್ತನೆಯನ್ನು ಕಂಡು ಆ ಚಿಕ್ಕ ಹುಡುಗಿಗೂ ಆಶ್ಚರ್ಯವಾಯಿತು.

"ನೀನು ಯಾಕೆ ನಗುತ್ತೀ? ಹುಚ್ಚರಂತೆ!"

"ನಾನೆಲ್ಲಿ ನಕ್ಕೆ? ನಕ್ಕರೆ ಹುಚ್ಚರೇ?"

"ಹೌದು. ನೀನೇ ಒಮ್ಮೆ ಹಾಗೆ ಹೇಳಿದ್ದಿಯಲ್ಲ" ಎಂದು ಗೋದಿ ತಾಯಿಗೆ ಹಿಂದಿನ ನೆನಪು ಮಾಡಿಕೊಟ್ಟಳು. ಪುನಃ ಸುಂದರಿಯ ಮುಖ ವೇದನೆಯ ಛಾಯೆ ತಾಳಿತು. ನಾನಾ ತರಹದ ಭಾವನೆಗಳನ್ನು ಆ ಮುಖ ಕಕ್ಕುತ್ತಿತ್ತು. ಏನೋ ಆಲೋಚಿಸಿ, ಸ್ವಲ್ಪ ಹೊತ್ತು ಸುಮ್ಮನಿದ್ದು ಒಮ್ಮೆಲೇ

"ಮಗೂ, ನಿನಗೆ ಯಾರು ಕಲ್ಲು ಹೊಡೆದವರೆಂದು ಹೇಳಲೇ ಇಲ್ಲವಲ್ಲ?" ಎಂದಳು.

"ಆಗ ಎಲ್ಲ ಹೇಳಿದೆನಲ್ಲ!" ಎಂದಳು ಗೋದಿ.

ಹೌದು, ಪೋಲೀಸರ ಕೈಯಿಂದ ಮಗುವನ್ನು ಪಡೆದೊಡನೆ ಸುಂದರಿ "ಯಾರು ಏನು ಮಾಡಿದರು? ಯಾಕೆ ಹೊಡೆದರು? ಎಲ್ಲಿ ಬಿದ್ದೆ? ಏನಾಯಿತು?" ಎಂದು ಪ್ರಶ್ನೆಗಳ ಮೇಲೆ ಪ್ರಶ್ನೆ ಕೇಳಿದ್ದಳು ಮಗಳಿಗೆ. ಆಗ ಗೋದಿಯೂ ಸಾವಕಾಶವಾಗಿ ಎಲ್ಲ ಸಂಗತಿಯನ್ನು ವಿಸ್ತಾರವಾಗಿ ಅವಳಿಗೆ ನೆನಪಿದ್ದಂತೆ ಹೇಳಿದ್ದಳು. "ಅವನು ಸತ್ತೇ ಹೋಗಲಿ" ಎಂದು ಸುಂದರಿ ಬೈದದ್ದೂ ಇದೆ. ಆದರೆ ಅವಳ ಚಿತ್ತವಿಕಾರದ ಮೂಲಕ ಅವಳಿಗೆ ಈಗ ಅದೆಲ್ಲ ಮರೆತು ಹೋದಂತಾಗಿದೆ. ಅಥವಾ ನೆನಪಿದ್ದರೂ ಇರಬಹುದು. ಯಾಕಂದರೆ ಆಕೆ "ಹೇಳಿದ್ದರೇನಾಯಿತು? ಇನ್ನೊಮ್ಮೆ ಹೇಳು ಕಂದಾ" ಎಂದು ಮಗಳಿಗೆ ಪುನಃ ಕೇಳುತ್ತಿದ್ದಿಲ್ಲ.

"'ನೀನು ಸೂಳೆಯ ಮಗಳು' ಎಂದು ಒಬ್ಬ ಹುಡುಗ ನನ್ನನ್ನು ಅತ್ತ ದೂಡಿದ" ಎಂದು ಮೊದಲಿನಿಂದ ಕಥೆ ಹೇಳಲು ಪ್ರಾರಂಭಿಸಿದಳು ಗೋದಿ.

"ಅವನು ಎಷ್ಟು ದೊಡ್ಡವನಿದ್ದ?"

"ನನ್ನಷ್ಟೇ ಎತ್ತರ ಇದ್ದ"

"ಈಗಿನ ಮಕ್ಕಳು ಪೂರ್ಣ ಬಾಲ್ಯದ ಹೊಂಡದಿಂದ ಏಳುವುದರೊಳಗೇ ಹಾದರದ ಹಾಳು ಮಾತು ಕಲಿಯುತ್ತವೆ........ ನಾನು 'ಸೂಳೆ' ಯಂತೆ 'ಸೂಳೆ'. ಹೌದು ನಾನು ಸೂಳೆ! ಆದರೆ ನನ್ನ ಮಗಳೂ ಸೂಳೆಯೋ?" ಎಂದು ಸುಂದರಿ ತನ್ನಷ್ಟಕ್ಕೆ ಗೊಣಗುವುದನ್ನು ನೋಡಿ, "ನಾನೇನು ಹೇಳುತ್ತೇನೆ ಅದನ್ನು ಚೆನ್ನಾಗಿ ಕೇಳುವುದಿಲ್ಲ. ಆಮೇಲೆ ಮತ್ತೊಮ್ಮೆ ಹೇಳೂ ಅನ್ನುತ್ತೀ" ಎಂದು ಗೋದಿ ಅವಳನ್ನು ಅಂತರ್ಮುಖ ಪ್ರಪಂಚದಿಂದ ಎಳೆಯಲೆತ್ನಿಸಿದಳು.

"ಹೇಳು ಮಗೂ ಹೇಳು ಒಬ್ಬನೇ ಹೊಡೆದನೋ? ಅಥವಾ ಬಹಳ ಮಂದಿಯೋ?"

"ಅವನು ದೂಡಿದಾಗ ನಾನು ಬಿದ್ದೆ. ಆದರೆ ನನಗೆ ಗಾಯವಾಗಲಿಲ್ಲ."

" ಮತ್ತು ? "

" ಸಾಲೆ ಬಿಟ್ಟ ಮೇಲೆ ನಾವೆಲ್ಲ ಬರುತ್ತಿದ್ದೆವು. ಆಗ ಆ ಹುಡುಗ 'ನಮ್ಮೊಡನೆ ನೀನು ಸೂಳೇ ಮಗಳು ಬರಬೇಡ' ಎಂದು ನನ್ನನ್ನು ಹಿಡಿದು ಜೋರಾಗಿ ದೂಡಿ ಬಿಟ್ಟ ಅಮ್ಮಾ."

" ಅಯ್ಯೋ ಕಣ್ಣಲ್ಲಿ ರಕ್ತವಿಲ್ಲದ ಬೋಳೀಮಗನೇ! ನೀನು ಎಲ್ಲಿ ಬಿದ್ದಿ ಕಂದಾ ? ನಿನ್ನನ್ನು ಪೋಲೀಸರು ಹೇಗೆ ನೋಡಿದರು ? "

" ನಮ್ಮ ಸಾಲೆಯ ಗೇಟಿನ ಹತ್ತಿರ ಹೊರಗೇ ಅಲ್ಲೇನಮ್ಮ ಪೋಲೀಸರು ನಿಲ್ಲುವ ಚೌಕಿ ? "

" ಹೌದು ಹೌದು ಕಂದಾ "

" ನಾನು ಹೋಗಿ ರಸ್ತೆಯ ಬದಿಯ ಕಲ್ಲಿಗೆ ಬಿದ್ದೆ. ತಲೆಗೆ ಪೆಟ್ಟಾಯಿತು. ನಳದಂತೆ ರಕ್ತ ಹಾರುವಾಗ 'ಅಯ್ಯೋ' ಅಂತ ಒದರಿದೆ. ಆಗ ಪೋಲೀಸ ಬಂದ."

" ಅವನೇ ಪುಣ್ಯಾತ್ಮ. ಅವನಿಗಾದರೂ ದಯೆ ಬಂತು. "

" ಆಗ ಉಳಿದ ಹುಡುಗರೆಲ್ಲ ಓಡಿದ್ದರು. ನನಗೆ ಮುಂದೇನಾಯಿತು ತಿಳಿಯಲಿಲ್ಲ. "

" ಈ ಹೊಸಾ ಅಂಗಿ ಯಾರು ಕೊಟ್ಟರು ಕಂದಾ ? "

" ನನಗೆ ಗೊತ್ತಿಲ್ಲ ಅಮ್ಮ. "

ಆಗ ಸುಂದರಿಯ ಮನಸ್ಸು ಮುಗಿಲಿನಷ್ಟು ವಿಶಾಲವಾಯಿತು. ಅದರಲ್ಲಿ ಹಿಂದಿನ ದರ್ಶನದ ಕಾರ್ಮೋಡಗಳು ಕೂಡಲೇ ಕವಿದವು. ಅವಳ ಹೃದಯದಲ್ಲಿ ವಿಚಾರಗಳ ಗುಡುಗು ಮಿಂಚಿದ್ದಿತು. ಅವಳ ಮುಖವೂ ಅದೇ ಪ್ರಕಾರ ಕಳೆಗುಂದಿತು. ಮನೆಯೇ ನಡುಗಿದಂತೆ ಅವಳಿಗೆ ಭಾಸವಾಯಿತು. ಏನು ಮಾಡಬೇಕೆಂದು ತಿಳಿಯಲಿಲ್ಲ. ಮಗಳು ಸಾಲೆಗೆ ಹೋಗಲಿಕ್ಕೆ ಹತ್ತಿ ಒಂದು ತಿಂಗಳಷ್ಟೇ ಆಗಿದೆ—ಇವತ್ತಿಗೆ. ಅವಳು ಸಾಲೆಗೆ ಹೋದ ಮರುದಿನದಿಂದ ಒಂದೊಂದು ಹೊಸ ಸುದ್ದಿ, ಅಲ್ಲ ಮಾತು–ದಿನದಿನವೂ ತರುತ್ತಲೇ ಇದ್ದಳು. ಅವುಗಳನ್ನು ಕೇಳುತ್ತಲೇ ಸುಂದರಿಯು ಚಿತ್ತ ವಿಕಾರಗೊಳ್ಳಲಾರಂಭಿಸುತ್ತಿತ್ತು.

ಎರಡನೆಯ ಅಧ್ಯಾಯ.

ಚೌಡಪ್ಪನವರ ವಯಸ್ಸು ೩೫–೪೦ ರ ಒಳಗೆ. ಆದರೆ ಅವರ ವೈಕಟ್ಟನ್ನು ಕಂಡರೆ, ಅವರಿಗೆ ಅಷ್ಟು ವಯಸ್ಸಾಗಿದೆಯೆಂದು ಹೇಳಲಿಕ್ಕೆ ಸಾಧ್ಯವಿಲ್ಲ. ವಯಸ್ಸು ಹೆಚ್ಚಾದಂತೆ ತಾರುಣ್ಯ ಉಕ್ಕೇರುವ ಆದಮಿಯೆಂದೇ ಅವರ ಬಗ್ಗೆ ಟೀಕೆ ಟಿಪ್ಪಣೆಗಳು ಆ ಊರಲ್ಲಿ ನಡೆಯುತ್ತಿದ್ದವು. ಆ ನಗರದ ಪ್ರತಿಷ್ಠಿತ ವ್ಯಕ್ತಿಗಳಲ್ಲೇ ಅಗ್ರಗಣ್ಯರೆಂದರೆ ಚೌಡಪ್ಪ. ಅಂತೇ ದೊಡ್ಡ ಅಧಿಕಾರದ ಹುದ್ದೆಯನ್ನೂ ತಮ್ಮ ಮಹಾಲಕ್ಷ್ಮಿಯ ಬಲದಿಂದ ವಶಪಡಿಸಿಕೊಂಡಿದ್ದರು. ಹುದ್ದೆಯೆಂದರೆ ಹುದ್ದೆಯೇ. ಅರ್ಥಾತ್ 'ನೌಕರಿ' ಎಂದು ಅಲ್ಲ. ಆ ಹುದ್ದೆ ಅವರಿಗೇ ಕಟ್ಟಿ ಇಟ್ಟದ್ದು. ಬೇರೆಯವರಿಗೆ ಅಂಥ ಗೌರವಸ್ಥಾನ ಸಿಗುವಂತಿರಲಿಲ್ಲ. ಅವರಿಗೆ ಬೇಕಾಗಿಯೂ ಇರಲಿಲ್ಲ. ಯಾಕಂದರೆ ಚೌಡಪ್ಪನವರಲ್ಲಿ ಇದ್ದ ಸಾಮರ್ಥ್ಯ ಬೇರೆಯವರಿಗೆ ಇರಲಿಲ್ಲವೆಂಬುದೇ ಮುಖ್ಯ ಕಾರಣ. ಇವರ ಆ ಶ್ರೀಮಂತಿಕೆ ಬೇರೆಯವರಿಗೆ ಬರುವುದೂ ಕಷ್ಟ.

ಅವರ ನಗರದಲ್ಲಿ ಮೂರು ವರ್ಷಕ್ಕೊಮ್ಮೆ, ಐದು ವರ್ಷಕ್ಕೊಮ್ಮೆ ಅಥವಾ ಕಾಲ ಬಂದಾಗೊಮ್ಮೆ ನಗರಸಭೆಯ ಚುನಾವಣೆ ನಡೆಯುತ್ತದೆ. ಆಗ ಅವರಿರುವ ವಾರ್ಡಿನಿಂದ ಅವರು ಸದಸ್ಯರಾಗಿ ಆರಿಸಿ ಬಂದೇ ಬರುತ್ತಾರೆ. ಮುಂದೆ ಸದಸ್ಯರ ಮತವು ಅವರಿಗೇ ಬಿದ್ದು, ಬಹುಮತದಿಂದ ನಗರಾಧ್ಯಕ್ಷತೆಯ ಪಟ್ಟವೂ ಅವರಿಗೇ ಕಟ್ಟಿಟ್ಟದ್ದು. ಇಷ್ಟೆಲ್ಲ ಸಂಪತ್ತು ಅವರಿಗಿದ್ದರೂ ವಿದ್ಯೆ ಕಡಿಮೆ. 'ವಿದ್ಯೆ ಇಲ್ಲ' ಎಂದು ಹೇಳಿದರೆ ತಪ್ಪಾದೀತು. ಯಾಕಂದರೆ ವಿದ್ಯೆ ಎಂಬುದಕ್ಕೆ, ಕನ್ನಡವೋ, ಇಂಗ್ಲೀಷೋ ಓದಲಿಕ್ಕೆ ಬರೆಯಲಿಕ್ಕೆ ಮತ್ತು ಮಾತಾಡಲಿಕ್ಕೆ ಬರುವುದು—ಎಂಬ ಸಂಕುಚಿತ ಅರ್ಥದ ವ್ಯಾಖ್ಯೆಯನ್ನು ಪರಿಗಣಿಸಿ, ಚೌಡಪ್ಪನವರಿಗೆ ವಿದ್ಯೆ ಇಲ್ಲ ಎಂದು ನಿರ್ಣಯಿಸುವುದು ಶತಮೂರ್ಖತನವೇ. ವಿದ್ಯೆಗಳು ವಿಶಾಲವಾದ ಆಕಾಶದಲ್ಲಿ ಬೆಳಗುವ ಕೋಟ್ಯಾನುಕೋಟಿ ತಾರೆಗಳಂತೆ ಅನಂತ. ಆದ್ದರಿಂದ ಆ ಲೆಕ್ಕವಿಲ್ಲದ ವಿದ್ಯೆಗಳಲ್ಲಿ ಚೆನ್ನಾಗಿ ಓದು ಬರೆಯುವ ಸಣ್ಣ ವಿದ್ಯೆಯೊಂದು ಮಾತ್ರ ಚೌಡಪ್ಪನವರಿಗೆ ಸ್ವಲ್ಪ ಅಷ್ಟಕ್ಕಷ್ಟೇ. ಅವರು ಕಾಗದ ಪತ್ರಗಳಿಗೆ ಮಾಡಿದ ಸಹಿಯೆಂದರೆ ಸುಪ್ರಸಿದ್ಧ ಚಿತ್ರಕಾರ

ಅನರ ನಗರದ ನಕ್ಷೆಯನ್ನು ಓರೆಕೋರೆಯಾಗಿ ಬಿಡಿಸಿದ ಮಾದರಿಯ ನಕಾಶವೇ. ಅವರ ಸಹಿ ಅಷ್ಟು ಕಲಾಪೂರ್ಣವಾಗಿರುತ್ತದೆ. ಒಟ್ಟಿನಲ್ಲಿ ಚೌಡಪ್ಪ ಸಾಮಾನ್ಯದ ವ್ಯಕ್ತಿಯಲ್ಲ

ಎಣ್ಣೆಗಪ್ಪು ಅವರ ಮೈಬಣ್ಣ. "ನನ್ನ ಮೂಗು ಗಿಳಿ ಮೂಗು" ಎಂದು ಹಿಂದೆ ಅವರು ಸಣ್ಣವರಿರುವಾಗ ಹೇಳಿಕೊಂಡು ಹೆಮ್ಮೆಪಡುತ್ತಿದ್ದರು. ಈಗಲೂ ಆ ಬಗ್ಗೆ ಹೆಮ್ಮೆ ಅವರ ಅಂತರಂಗದಲ್ಲಿರಬಹುದು. ಆ ಮಾತೇ ಬೇರೆ. ಸಾಕಷ್ಟು ಎತ್ತರವಾದ ನಿಲುವು ಅವರದು. ಮುಖದಲ್ಲಿ ಹುಬ್ಬು ಮತ್ತು ರೆಪ್ಪೆಗೂದಲುಗಳನ್ನು ಬಿಟ್ಟು ಬೇರೆ ಶಾಸ್ತ್ರಕ್ಕೆ ಒಂದು ಕೂದಲೂ ಕಾಣಿಸುವುದಿಲ್ಲ. ಅಷ್ಟು ನುಣ್ಣಗಾದ 'ದಾಡಿ' ಅವರದು. ದುಂಡಗಾದ ಸುಂದರ ಮುಖ. ಇಂಥ ಎಲ್ಲ ಸಹಜ ಸೌಂದರ್ಯಕ್ಕೆ ಆಡಂಬರದ ಉಡುಪುಗಳ ಶೃಂಗಾರ ಬೇರೆ. ಯಾವಾಗಲೂ ಮಿರಿಮಿರಿಯಾಗಿ ಜಾರುವ ಮಲ್ಲಿನ ದೋತರವನ್ನೇ ಅವರು ಉಡುತ್ತಿದ್ದರು. ಮೈಸೂರ ಸಿಲ್ಕಿನ ಅಂಗಿಯೇ ಬೇಕು ಅವರಿಗೆ. ಬೇಸಿಗೆಯಾಗಲಿ, ಚಳಿಗಾಲವಾಗಲಿ ನಿತ್ಯವೂ ಉಣ್ಣೆಯ ಕೋಟು ಅವರ ಮೈಮೇಲೆ ತಪ್ಪುವಂತಿಲ್ಲ. ಕಾಲಿಗೆ ಆ ಪಟ್ಟಣದ ಸುಪ್ರಸಿದ್ಧ ಬೂಟಿನ ಅಂಗಡಿಯವ ಇವರಿಗಾಗಿಯೇ ತಯಾರಿಸಿದ 'ಸ್ಲಿಪರ್' ಬೇಕೇ ಬೇಕು. ಇನ್ನು ತಲೆಗೆ ಒಮ್ಮೊಮ್ಮೆ ಜರದ ರುಮಾಲೋ, ಟೊಪ್ಪಿಗೆಯೋ, ಸಾದಾ ಪಟಕಾನೋ ಇದ್ದೇ ಇರುತ್ತದೆ. ಬೋಳು ತಲೆಯಲ್ಲಿ ಅವರು ಎಂದೂ ಹೊರಗೆ ಹೋಗುವುದಿಲ್ಲ. ಹೀಗೆ ಅವರ ವ್ಯವಸ್ಥೆ ಪ್ರಶಂಸನೀಯವಾದುದು. ಆಗಾಗ ನಗರಕ್ಕೆ ಮಂತ್ರಿಗಿಂತ್ರಿ ಮೊದಲಾದ ವರೇಣ್ಯರು ಬಂದಾಗ, ಅವರಿಗಿಂತ ಚೌಡಪ್ಪನವರೇ ಗಂಭೀರವಾದ ಉಡುಪುಗಳಿಂದ ತಯಾರಾಗಿ ಬರುತ್ತಿದ್ದರು. "ಕೆಲವೊಮ್ಮೆ ಕಾಂಗ್ರೇಸ ಮಿನ್ಸ್ಟ್ರಾರುಗಳು [Ministers] ಬಂದಾಗ ಖಾದೀ ಕೋಟು, ಖಾದೀ ಡ್ರೇಸ್ ಬೇಕಾಗುತ್ತದೆ" ಎಂಬ ಚಾಣಾಕ್ಷತನದಿಂದ ಒಂದು ಸೆಟ್ ಒಟು ಖಾದಿಯ ವೇಷಭೂಷಣವೂ ಸಿದ್ಧವಾಗಿತ್ತು.

ಈಗ ಸದ್ಯಕ್ಕೆ ಚೌಡಪ್ಪನವರು ವಿಧುರರು. ನಾಲ್ಕು ಜನ ಮಕ್ಕಳಿದ್ದಾರೆ ಅವರಿಗೆ. ಅವರಲ್ಲಿ ಒಬ್ಬನು ಪ್ರಬುದ್ಧನಾಗಿ ತಂದೆ ಮಾಡಿದ ವ್ಯವಸಾಯ ಸಾಗಿಸಿಕೊಂಡು ನಡೆದಿದ್ದಾನೆ. ಎರಡನೆಯವನು ಕಾಲೇಜು ಕಲಿಯುತ್ತಿ

ದ್ದಾನೆ. ಅವನಿಗಿನ್ನೂ ಮದುವೆಯಾಗಿಲ್ಲ. ಉಳಿದವರೂ ಸಾಲೆಗೆ ಮಣ್ಣು ಹೊರುತ್ತ ಇದ್ದಾರೆ. ಚೌಡಪ್ಪನವರ ಮಡದಿ ತೀರಿಕೊಳ್ಳುವ ಕಾಲಕ್ಕೆ ಅವರ ಹಿರಿಯ ಮಗನ ಮದುವೆಯಾಗಿತ್ತು. ಎರಡನೆಯ ಮಗನ ಮದುವೆಯ ತಯಾರಿಯೂ ನಡೆದಿತ್ತು. ಅವರ ಮಡದಿ ಸತ್ತು ಇಂದಿಗೆ ಆರು ವರ್ಷಗಳಾಗಿವೆ. ಅವಳು ಸಾಯುವ ಮೊದಲು ಒಂದು ವರ್ಷ ಅನಾರೋಗ್ಯದಿಂದ ಹಾಸಿಗೆ ಹಿಡಿದಿದ್ದಳು. ಹೀಗಾಗಿ ಚೌಡಪ್ಪನವರ ಪಾಲಿಗೆ ಅವಳು ಸತ್ತು ಇಂದಿಗೆ ಏಳು ವರುಷಗಳಾದವೆನ್ನಲು ಅಡ್ಡಿಯಿಲ್ಲ. ಯಾಕಂದರೆ, ಅವಳು ಹಾಸಿಗೆ ಹಿಡಿದು ಕ್ಷಯದಿಂದ ಬಳಲುತ್ತಿರುವಾಗಲೇ ಅವರು ಆ ಸುಂದರಿಯು ಈಗ ಇರುವ ಮನೆಯನ್ನು ಕಂಪೌಂಡುಸಮೇತ ಖರೀದಿ ಮಾಡಬೇಕಾಯಿತು. ಒಂದು-ಒಂದುವರೆ ವರ್ಷದ ಪರ್ಯಂತ ಅವರು ಅದನ್ನು ಯಾಕೆ ಖರೀದಿ ಮಾಡಿದರೆಂದು ಮಕ್ಕಳಿಗೆ ತಿಳಿಯಲಿಲ್ಲ. ಅಲ್ಲದೆ ಹಾಗೆ ಊರಲ್ಲಿಯ ಅಂಗಡಿ, ಜಾಗೆ, ಅಲ್ಲಿ ಇಲ್ಲಿಯ ಪ್ಲಾಟು ಮೊದಲಾದವುಗಳನ್ನು ಕೊಳ್ಳುವ-ಮಾರುವ ವ್ಯವಹಾರವನ್ನು ಮಾಡುವುದು ಅವರ ಹವ್ಯಾಸ. ಕಾರಣ ಮಕ್ಕಳು ಆ ಬಗ್ಗೆ ಹೆಚ್ಚಿನ ವಿಚಾರ ಮಾಡಲು ಮುಂದುವರಿಯಲಿಲ್ಲ. ಆದರೆ ತಾಯಿ ತೀರಿಕೊಂಡು ಐದಾರು ತಿಂಗಳಾದ ಮೇಲೆ ಮಾತ್ರ ಕಿವಿಯಿಂದ ಕಿವಿಗೆ ಬಿದ್ದು ಬಿದ್ದು, ಅವರ ಕಿವಿಗೂ ಸುಂದರಿಯ ಸುದ್ದಿ ಬಿತ್ತು. ಅಷ್ಟರಲ್ಲಿ ಆ ಜಾಗೆಯ ಹಕ್ಕೂ ಅವಳ ಹೆಸರಿಗೆ ರಜಿಸ್ಟರ್ ಮಾಡಲ್ಪಟ್ಟಿತ್ತು. ಆದ್ದರಿಂದ ಮಕ್ಕಳಿಗೆ ಯಾವ ಮಾರ್ಗವೂ ಉಳಿಯಲಿಲ್ಲ. ತಂದೆಗೆ ಬುದ್ಧಿ ಹೇಳುವ ಧೈರ್ಯವೂ ಅವರಿಗೆ ಕಡಿಮೆ. ನಾಲ್ವರೂ ಒಟ್ಟುಗೂಡಿದ್ದರೆ ಹಾಗೆ ಮಾಡಬಹುದಾಗಿತ್ತು. ಆದರೆ ನಾಲ್ಕು ಜನರ ಮುಖಗಳು ನಾಲ್ಕು ದಿಕ್ಕಿಗೆ ಸದಾ ಇರುವುದರಿಂದ ಆ ರೀತಿಯ ಒಕ್ಕಟ್ಟು ಸಾಧ್ಯವಿರಲಿಲ್ಲ. ಅಲ್ಲದೆ ನಾಲ್ವರಿಗೂ ನಾಲ್ಕು ಧಂದೆಗಳು ಇದ್ದವು. ಅಂತೇ ನಾಲ್ಕು ಜನರಿಗೆ ಸಾಕಾಗುವಷ್ಟು ದೊಡ್ಡ ಬಂಗಲೆಯು ಹೊರಗೆ ನೋಡಲಿಕ್ಕೆ ಒಂದೇ ಆಗಿ ಕಾಣುತ್ತಿತ್ತು. ಆದರೆ ಒಳಗೆ ಪ್ರತ್ಯೇಕ ನಾಲ್ಕು ಮನೆಗಳು ತಾವಾಗಿಯೇ ಬೇರೆ ಬೇರೆಯಾಗಿ ನಿಂತಿದ್ದವು. ಹಲವಾರು ಆಳುಗಳು, ಆ ಆಳುಗಳಿಗೆ ಮತ್ತೆ ಆಳುಗಳು-ಹೀಗೆ ಅಲ್ಲಿ ಸಿಪಾಯಿ ಜನಕ್ಕೆ ಕೊರತೆಯೇ ಇರಲಿಲ್ಲ. ಸಾಲದ್ದಕ್ಕೆ ಮುನಸಿಪಾಲ್ಟಿಯ ನಾಲ್ಕು ಜನ ಸಿಪಾಯಿಗಳು ದಿವಸಾಗಲೂ ಪಾಳಿಯ ಪ್ರಕಾರ ಮನೆ ಕಾಯುತ್ತಿದ್ದರು.

ಚೌಡಪ್ಪನವರು ಮುನಸಿಪಾಲ್ಟಿಯ ಅಧ್ಯಕ್ಷರಲ್ಲವೇ?

ಅಂಥ ಬಂಗ್ಲೆಯಲ್ಲಿ ಪ್ರತಿಯೊಬ್ಬರಿಗೂ ಸ್ವಾತಂತ್ರ್ಯವಿತ್ತು. ಯಾರು ಯಾವಾಗ ಬರುತ್ತಾರೆ, ಹೋಗುತ್ತಾರೆ ಎಂಬುದು ತಿಳಿಯುವುದು ಕಷ್ಟ. ಶ್ರೀಮಂತರ ಮನೆಯಲ್ಲವೇ ಅದು? ಎಷ್ಟು ಜನ ಬರಲಿ, ಹೋಗಲಿ, ಅಲ್ಲಿ ಶಾಂತತೆ ಸದಾ ನೆಲಸಿರುತ್ತದೆ. ಅಂತೇ ಮಕ್ಕಳು ತಮಗೆ ಮನಸ್ಸಿಗೆ ಬಂದಾಗ ಮನೆಗೆ ಬರುತ್ತಿದ್ದರು, ಹೋಗುತ್ತಿದ್ದರು. ಚೌಡಪ್ಪನವರ ಪರಿಪಾಠವಾದರೂ ಅದೇ ರೀತಿಯದು. ಅವರಿಗೇ ಎಂದು ಒಂದು ಪರಭಾರೆಯಾದ ಕೋಣೆಯ ಏರ್ಪಾಡಾಗಿತ್ತು. ಅಲ್ಲಿಯೇ ಅವರ ವಸತಿ. ಆರಾಮು ತೆಗೆದುಕೊಳ್ಳುವುದೂ ಅಲ್ಲಿಯೇ. ಅದರ ಮುಂದೆ ಸಿಪಾಯಿಯೂ ಹಾಜರಿರುತ್ತಿದ್ದ—ಸದಾ ಸರ್ವದಾ.

ಮುನಸಿಪಾಲ್ಟಿಯ ಕೆಲಸಗಳಾದರೂ ಚೌಡಪ್ಪನವರ ಸೌಡಿಗೆ ಸರಿಯಾಗಿ ನಡೆಯುತ್ತಿದ್ದವು. ಚೌಡಪ್ಪ ಹೇಳಿದಂತೆಯೇ ಮುನಸಿಪಾಲ್ಟಿ ಹೊರತು ಅದರ ಅಪ್ಪಣೆಯಂತೆ ಇವರಲ್ಲ. ಅದೇನೇ ಇದ್ದರೂ, ಚೌಡಪ್ಪನವರ ಆ ಜೀವನ ಸುಂದರಿಯ ಬಾಳಿನ ಬಗ್ಗೆ ಹೆಚ್ಚಿನ ಪರಿಣಾಮವನ್ನುಂಟು ಮಾಡಿರಲಿಲ್ಲ. ಅವರಿಬ್ಬರ ನಡುವಿನ ಸಂಬಂಧಕ್ಕೆ ಆ ಕಚರಾ ಮುನಸಿಪಾಲ್ಟಿಯ ಹಾಳು ರಾಜಕಾರಣಗಳಾವುವೂ ಧಕ್ಕೆ ತರುವಂಥವುಗಳು ಅಲ್ಲ. ಬದಲು, ಅಲ್ಲಿಯ ವೋಟಿಂಗ-ಗೀಟಿಂಗಗಳ ತಾಪದಿಂದ ತಲೆ ಕೆಡಿಸಿಕೊಂಡು ಮನೆಗೆ ಬಂದ ಚೌಡಪ್ಪನವರಿಗೆ ಸುಂದರಿಯಿಂದ ಸಿಗುತ್ತಿದ್ದ ಸಹಾನುಭೂತಿ, ಸುಖ, ಶಾಂತಿಗಳು ಅಪಾರವಾದವುಗಳೇ. ಅಂಥ ಸುಖ ಕೊಡುವ ಸುಂದರಿ ಇದ್ದುದರಿಂದಲೇ ಅವರು ಇಲ್ಲಿಯವರೆಗೆ ಬದುಕಿದ್ದಾರೆ. ಇಲ್ಲದಿದ್ದರೆ, ಅಂದು ಅವರ ಹೆಂಡತಿ ತೀರಿಕೊಂಡಾಗಲೇ ಅವರೂ ಆಕೆಯ ಹಿಂದೆ ಹೋಗುತ್ತಿದ್ದರಂತೆ. ಹಿಂದಿನ ಮಾತೇ ಬೇರೆ. ಆಗ ಯಾವ ಹೊತ್ತಿಗೆ ಹೋದರೂ ಚೌಡಪ್ಪನವರಿಗೆ ಸುಂದರಿಯಿಂದ ದೊರೆಯುತ್ತಿದ್ದ ಸ್ವಾಗತವೆಂತಹದ್ದು! ಆಕೆ ಇವರನ್ನು "ಬನ್ನಿ ರಾಜಾ" ಎಂದು ಮುಗುಳುನಗೆಯಿಂದ ಕರೆಯುತ್ತಿದ್ದಳು.

"ಬಾ ರಾಣೀ" ಎಂಬ ಪ್ರತ್ಯುತ್ತರ ಚೌಡಪ್ಪನವರ ತುಟಿ ದಾಟಿ ಆ ಕ್ಷಣಕ್ಕೇ ಹೊರಬೀಳುತ್ತಿತ್ತು.

ಕೂಡಲೇ ಒಳಗಿನ ಪಡಸಾಲೆಯಲ್ಲಿ ಬರಿದಾಗಿರುವ ಕುರ್ಚಿಗಳ ಮೇಲೆ ಇಬ್ಬರೂ ಆಸನ ಹಾಕುತ್ತಿದ್ದರು.

ಆಮೇಲೆ ಸುಂದರಿ ಕೊಡುವ ವೀಳ್ಯವನ್ನು ಚೌಡಪ್ಪ ಮೆಲ್ಲುವ ಭಂಗಿಯಂತಹದ್ದು ! "ನೀನು ನಿಜಕ್ಕೂ ರಾಣೀ ನೋಡೇ" ಎನ್ನುತ್ತ ತಾಂಬೂಲ ಮೆಲ್ಲುತ್ತಿದ್ದರು ಚೌಡಪ್ಪ.

"ನಿಮ್ಮಂತವರು ರಾಜರಾದಾಗ ನನಗೇನು !" ಎನ್ನುತ್ತ ಸುಂದರಿ ಅವರ ಬಳಿಯೇ ವೈಯಾರ ಮಾಡಿ ನಿಲ್ಲುತ್ತಿದ್ದಳು...............

ಆಗ ಚೌಡಪ್ಪ ಎದ್ದು ಹೋಗಿ ತಾವಾಗಿಯೇ ಬಾಟ್ಲಿ ತರುತ್ತಿದ್ದರು. ತಂದವರೇ, ಎರಡೂ ಗ್ಲಾಸುಗಳಲ್ಲಿ ಅದರೊಳಗಿನ ಪೇಯ ಸುರಿದು, "ರಾಣೀ, ತಕೋ ಈ ಅಮೃತ" ಎಂದು ಸುಂದರಿಯನ್ನು ತನ್ನ ಬಳಿಗೆ ಕರೆಯುತ್ತಿದ್ದರು.

"ನಿಮ್ಮದು ಆಗಲಿ ರಾಜಾ" ಎನ್ನುತ್ತ ಆಕೆ ತನ್ನ ಒನಪಿನ ವೈಯ್ಯಾರವನ್ನೇ ನಟಿಸುತ್ತಿದ್ದಳು.

"ಇದು ಸ್ವರ್ಗ ಲೋಕ ರಾಣೀ"

"ಹಾಗಾದರೆ ಅದು ಅಮೃತವೇ ಸರಿ"

"ಈಗಿನ ಕಾಲದ ಅಮೃತ ಇದೇ !" ಎಂದು ಕ್ಷಣದಲ್ಲೇ ಗ್ಲಾಸು ಖಾಲಿ ಮಾಡಿ ಪುನಃ ಅದನ್ನು ತುಂಬಿಸಿ, "ತಕೊಳ್ಳೇ" ಎನ್ನುತ್ತ ಅವಳನ್ನು ಕರೆಯುತ್ತಿದ್ದರು. ತರುವಾಯ ಅವಳೂ ಅದನ್ನು ಸ್ವೀಕರಿಸುತ್ತಿದ್ದಳು.

ಆಗ ಅವಳನ್ನು ನೋಡಿದಷ್ಟೂ ಚೌಡಪ್ಪನವರಿಗೆ ತೃಪ್ತಿ ಇರಲಿಲ್ಲ........ ಇಂಥ ಎಲ್ಲ ರಸಪೂರ್ಣ ಸನ್ನಿವೇಶಗಳು ಹಿಂದಿನವು. ಅಂದರೆ ಸುಂದರಿಯ ಮಗಳು ಗೋದಿ ಇದ್ದಾಳಲ್ಲ, ಈಕೆ ಆಗ ಇನ್ನೂ ನಾಲ್ಕೋ, ಐದೋ, ಆರೋ ತಿಂಗಳಿನ ಕೂಸಿದ್ದಾಗಿನ ಸುದ್ದಿಗಳವು.

ಹಿಂದೆಯಾದರೂ ಚೌಡಪ್ಪನವರು ಸುಂದರಿಯ ಮನೆಗೆ ಯಾವಾಗ ಬೇಕೋ ಆವಾಗ ಹೋಗುತ್ತಿದ್ದರು. "ಹೊತ್ತು ವೇಳೆ ಇಲ್ಲದೆ ನೀವು ಬರುತ್ತೀರಿ" ಎಂದು ಸುಂದರಿಯೂ ಅವರಿಗೆ ಮೂದಲಿಸಿದುದಕ್ಕೆ ಲೆಕ್ಕವೇ ಇಲ್ಲ.

ಮಧ್ಯರಾತ್ರಿ, ಮಧ್ಯಾಹ್ನ, ಬೆಳಿಗ್ಗೆ—ಎಲ್ಲವೂ ಚೌಡಪ್ಪನವರ ಮಟ್ಟಿಗೆ ಒಂದೇ ಆಗಿದ್ದವು ಅಂತೇ ಅವರ ಸವಾರಿ, ಸುಂದರಿ ಹೇಳುವಂತೆ, ಹೊತ್ತುವೇಳೆ ಇಲ್ಲದೆಯೇ ಅವಳ ಮನೆಗೆ ಬರುತ್ತಿತ್ತು.

ಒಮ್ಮೆ ಚೌಡಪ್ಪ ಬೆಳಿಗ್ಗೆಯೇ ಸುಂದರಿಯನ್ನು ಕಾಣಲು ಬಂದರು. ಅದು ಅವರಿಬ್ಬರ ನಡುವಿನ ಶೃಂಗಾರ ಚೇಷ್ಟೆಗಳು ಪರಮಾವಧಿಯನ್ನು ಮುಟ್ಟಿದ ಕಾಲ. ಆ ದಿನಗಳಲ್ಲಿ ಚೌಡಪ್ಪ ದಿನಕ್ಕೆ ಹತ್ತಾರು ಸಲವೂ ಸುಂದರಿಯ ಮನೆಗೆ ಬಂದು ಹೋದದ್ದು ಇದೆ. ಅಂದು ಅವರು ಬರುವಾಗ ಸುಂದರಿ ಬಚ್ಚಲು ಮನೆಯಲ್ಲಿ ಸ್ನಾನ ನಡೆಯಿಸಿದ್ದಳು. ಹೊರಗಿನ ಬಾಗಿಲನ್ನು ಚಿಲಕ ಹಾಕದೆ ಮುಂದೆ ಮಾಡಿದ್ದಳು. ಅವಳ ಮಗಳು ಗೋದಿಗೆ ಆಗ ಎರಡು ವರುಷ ಪ್ರಾಯವಾಗಿರಬಹುದು. ಅವಳನ್ನು ಸ್ನಾನ ಮಾಡಿಸಿ ಮಲಗಿಸಿದ್ದಳು. ಅವಳಿಗೆ ಚೆನ್ನಾಗಿ ನಿದ್ದೆ ಹತ್ತಿತ್ತು. ಚೌಡಪ್ಪ ಮೆಲ್ಲನೆ ಹೆಜ್ಜೆ ಇಡುತ್ತ ಇಡುತ್ತ ಬಚ್ಚಲು ಮನೆಗೂ ಬಂದರು. ವೈಮೇಲಿನ ಉಣ್ಣೆಯ ಕೋಟನ್ನು ಹೊರಗೇ ಬಿಟ್ಟು ಬಂದಿದ್ದರು. ಅವರ ಮನಸ್ಸು ಉಲ್ಲಾಸದಿಂದ ಹತ್ತಿಯಷ್ಟು ಹಗುರವಾಗಿತ್ತು. ಸ್ನಾನ ಮಾಡುತ್ತಿರುವ ತನ್ನ ಸೌಂದರ್ಯ ದೇವಿಯನ್ನು ನೋಡಿದ ಅವರಿಗೆ ಹುಚ್ಚೇ ಹಿಡಿದಂತಾಗಿತ್ತು. ಅವಳನ್ನು ಹೇಗೆ ಮಾತಾಡಿಸಬೇಕೆಂದೂ ಅವರಿಗೆ ತಿಳಿಯಲಿಲ್ಲ. ಆದ್ದರಿಂದ ಕುರುಡರಂತೆ, ಮೂಕರಂತೆ—ಅವರು ಕಳ್ಳ ಹೆಜ್ಜೆ ಹಾಕುತ್ತ ಮುನ್ನಡೆದರು. ಆಗ ಸುಂದರಿ ವೈಗೆ ಚೆನ್ನಾಗಿ ' ಹಮಾಮ್ ' ಸೋಪು ಹಚ್ಚಿಕೊಂಡು ಬುರುಗಿನಿಂದ ತುಂಬಿ ಹೋಗಿದ್ದಳು. ಅಂತೇ ಆಕೆ ಹೊರಗಿನಿಂದ ಬರುವ ಚೌಡಪ್ಪನವರನ್ನು ನೋಡದೆಯೂ ಬಿಟ್ಟಿರಲಿಲ್ಲ. ಆದರೆ ನೋಡದವರಂತೆ ನಟಿಸಿ, ಮುಂದಿರುವ ಹಂಡೆಯ ಅಡ್ಡ ಸರಿದು ವೈಯುಜ್ಜುತ್ತ ಮತ್ತಷ್ಟು ನೊರೆ ಎಬ್ಬಿಸಿದಳು. ಎರಡೂ ಬೊಗಸೆಯಲ್ಲಿ ತುಂಬ ಆ ಸಾಬೂನಿನ ಬುರುಗು ತುಂಬಿಸಿ ಹಿಡಿದುಕೊಂಡಳು. ಚೌಡಪ್ಪನವರಿಗೆ ಕಾಣದಂತೆ ಆಕೆ ಅತ್ತ ಇತ್ತ ಸರಿದಳು. ಆದರೆ ಚೌಡಪ್ಪನವರಿಗೆ ಅವಳ ಆ ಸ್ನಾನಸೌಂದರ್ಯವನ್ನು ನೋಡುವ ಹುಚ್ಚು ಹಿಡಿದಿತ್ತಷ್ಟೇ. ಉಳಿದ ಜಗತ್ತನ್ನೇ ಅವರು ಮರೆತು ಬಿಟ್ಟರು. ತೋಯ್ದ ಅರಿವೆಯಿಂದ ಎದ್ದು ಕಾಣುವ ಸುಂದರಿಯ ದೇಹವನ್ನು ನೋಡುವ ಆಶೆ ಉತ್ಕಟವಾಯಿತು. ಮನಸ್ಸು ಅವಳಿರುವ ಬಚ್ಚಲಿಗೆ

ಇಳಿದಾಗಿತ್ತು. ದೇಹ ಮಾತ್ರ ಹಿಂದೆ ಬರತೊಡಗಿತ್ತು. ಅವಳಿರುವಲ್ಲಿಗೆ ಹೋಗಲು ಅವರು ಬಹಳ ಹೊತ್ತು ಕಳೆಯಲಿಲ್ಲ. ಅವಳ ಸಮೀಪ ಸಮೀಪಕ್ಕೆ ಹೋಗುತ್ತಲೇ ಅವರ ವೇಗ ಇಮ್ಮಡಿಸಿತು. ಹೆಜ್ಜೆಯ ಅಳತೆ ದೀರ್ಘವಾಗುತ್ತ ಬಂತು.

ಬಿಸಿನೀರಿನ ಹಂಡೆಯ ಹಿಂದೆ ಹೋದೊಡನೆ ಸ್ವಲ್ಪ ಹೊತ್ತು ಹಾಗೇ ನಿಂತರು. ಆಮೇಲೆ ಚಿಕ್ಕನೆ ಎದ್ದು ಆಕೆಯನ್ನು ಕಣ್ಣು ಅರಳಿಸಿ ನೋಡಿ, ಕೈ ಮುಂದೆ ಮಾಡಿದರು. ಆಗ 'ಪಸಕ್ಕನೆ' ಕೈಯಲ್ಲಿರುವ ಸಾಬೂನಿನ ನೊರೆಯನ್ನು ಅವಳು ಅವರ ದುಂಡು ಮುಖಕ್ಕೆ ಎಸೆದುಬಿಟ್ಟಳು. "ಹಹ್ಹಾ!" ಎಂದು ನಕ್ಕೇ ನಕ್ಕಳು.

"ಆ! ಹೂ!" ಎಂದು, "ವ್ಯಾಕ್" ಎನ್ನುತ್ತ ಬಾಯಿಯೊಳಗೆ ಸೇರಿದ ಖಾರ ಖಾರ ನೊರೆಯನ್ನು ಎಲ್ಲಿ ಉಗುಳಬೇಕೆಂದು ಅವರಿಗೆ ತಿಳಿಯಲಿಲ್ಲ. ಬಾಯಿ ತೆರೆದು ಕೈ ಮುಂದೆ ಮಾಡಿದುದರಿಂದ ಸಾಬೂನಿನ ಬುರುಗು ಅವರ ಆತುರತೆಯಿಂದ ಬಳಲುತ್ತಿರುವ ಅದಕ್ಕೂ ಮೇಜವಾನಿ ಮಾಡಿತು. ಕಣ್ಣಿನೊಳಗೂ ಆ ನೊರೆ ಸೇರದೆ ಬಿಡಲಿಲ್ಲ. ಹೀಗಾಗಿ ಅವರಿಗೆ ಎಲ್ಲಿ ಹೋಗಬೇಕೆಂದು ತಿಳಿಯಲಿಲ್ಲ. "ಥೂ, ಥೂ" ಎಂದು ಉಗುಳಿಯೇ ಉಗುಳಿದರು. "ನೀರು ಸುಂದರೀ ನೀರು" ಎಂದು ತೇಗುತ್ತ ಅವಸರ ಅವಸರವಾಗಿ ಕೇಳಿದರು.

ಸುಂದರಿ ಬೇಗ ಬೇಗನೆ ಮೈ ತೊಳೆದುಕೊಂಡು ಮೇಲೆ ಬಂದಳು. ನಿಮಿಷದಲ್ಲೇ ಆಕೆ ಒಣಸೀರೆಯನ್ನು ಉಟ್ಟುಕೊಂಡು ಬಂದಾಯಿತು. ಅವಳು ಬಚ್ಚಲಿಂದ ಮೇಲೆ ಹೋದದ್ದು ಚೌಡಪ್ಪನವರಿಗೆ ತಿಳಿದಿರಲಿಲ್ಲ. ಅವರು ಅಲ್ಲಿಯೇ ನಿಂತು ಹಂಡೆಯೊಳಗೆ ಕೈಹಾಕಲು ಹವಣಿಸುತ್ತಿದ್ದರು. ಆದರೆ ಅದರಲ್ಲಿ ನೀರೇ ಇರಲಿಲ್ಲ. ಕಾರಣ ಅವರು ಅಲ್ಲಿಯೇ ನಿಲ್ಲಬೇಕಾಯಿತು.

ನಗುನಗುತ್ತ "ಹೂಂ, ಬನ್ನಿ ಬಚ್ಚಲಿಗೆ" ಎಂದು ಸುಂದರಿ ಅವರ ಕೈ ಹಿಡಿದಳು. ಮರುಮಾತಾಡದೆ ಅವರು ಅವಳು ಕರೆದೊಯ್ದಂತೆ ಹೋದರು. ಅವಳನ್ನು ಹಿಂಬಾಲಿಸಿ ಬಚ್ಚಲಿಗೆ ಇಳಿಯುವಾಗ ಅವರ ಮೈಗೆ ಅವಳ ಮೈ ತಾಗಿತು. "ನೀನು ಸ್ನಾನ ಮುಗಿಸಿಯೂ ಬಿಟ್ಟೆಯಾ?" ಎಂದು ಪ್ರಶ್ನಿಸಿದರು ಅವರು. "ಹೌದು" ಎನ್ನುತ್ತ ಸುಂದರಿ ಒಂದು

ಬಕೇಟು ನೀರು ಅವರ ಮುಂದೆ ಇಟ್ಟಳು. ಆ ನೀರಿನಿಂದ ಅವರ ಪಾಪ ಪರಿಹಾರವಾಯಿತು! ಅಲ್ಲಿಯೇ ಮುಖ ಒರಸಿಕೊಳ್ಳಲು ಟವೆಲು ತಯಾರಿತ್ತು. ಸುಂದರಿಗೆ ನಗುವಿನಿಂದ ಅಲ್ಲಿ ನಿಲ್ಲಲಿಕ್ಕಾಗಲಿಲ್ಲ. ಆಕೆಯ ಮುಖದ ಮೇಲಿನ ನಗುವನ್ನು ನೋಡಿ "ಯಾಕೆ ನಗುತ್ತಿಯೇ?" ಎಂದರು ಚೌಡಪ್ಪ ನಗುತ್ತಲೇ.

"ಯಾಕಿಲ್ಲ" ಎನ್ನುತ್ತ ಮತ್ತೂ ನಕ್ಕಳು ಸುಂದರಿ.

"ನೀವು ಹೆಂಗಸರು ನಿಸರ್ಗ ನಿಪುಣರು!"

"ಹೇಗಾಯಿತು?"

"ಅದೇ ಹೇಳಿದೆನಲ್ಲ ನಿಮ್ಮ ಜಾತಿಯ ಸ್ವಭಾವ"

"ಹೆಂಗಸರನ್ನು ಹಾಗೆ ಸ್ನಾನಗೃಹದಲ್ಲಿ ನೋಡಬಾರದು."

"ಬಿಡೇ ನಿನ್ನ ಶಾಸ್ತ್ರ ನೀತಿಯೆಲ್ಲ"

"ನಾನು ಬೇಕೆಂದೇ ಹಾಗೆ ಮಾಡಿದೆ"

"ಹಾಗೆ ಯಾವಾಗಲಾದರೂ ಅಂಥ ಮೋಜು ಮಾಡುತ್ತಿರು."

"ಅದು ಮೋಜೇ?"

"ಆದರಿಂದಲೂ ಸುಖವಿದೆ ಬಿಡೇ. ಆದರೆ ಇನ್ನು ಮುಂದೆ ಮಾತ್ರ ನೀನು ಬಚ್ಚಲಲ್ಲಿ ಇರುವಾಗ ಅಲ್ಲಿಗೆ ಬರುವುದಿಲ್ಲ"

"ಅಷ್ಟೇ ನನಗೂ ಬೇಕಾಗಿತ್ತು."

"ನಿನ್ನಲ್ಲಿ ಹುಡುಗಾಟಿಕೆ ಬಹಳ ಸುಂದರೀ ಅದರಿಂದಲೇ ನಾನು ನಿನ್ನನ್ನು ಮೆಚ್ಚಿದ್ದು. ನೀನು ಹುಚ್ಚು ಹುಡುಗಿ. ನೀನು ರಾಣಿ ನೋಡೇ. ರಾಣಿಯ ಮುಂದೆ ರಾಜ್ಯದ ರಾಜನೂ ಸೋಲುವುದು ಸಹಜ............ಮತ್ತು ಇವತ್ತು ರಾತ್ರಿ ಸ್ಪೇಶಲ್ ಅಮಲೇಟ್ ತರಿಸುತ್ತೇನೆ. ಇವತ್ತು ಒಂದು ರಾತ್ರಿ ಸುಖವಾಗಿ ಕಳೆಯೋಣಂತೆ" ಎಂದು ಚೌಡಪ್ಪ ವಿಷಯಾಂತರ ಮಾಡಿ ಸುಂದರಿಯ ಮನೆ ಬಿಟ್ಟರು. ಅಂತೇ ಅಂದಿನಿಂದ ಅವರು ಆಕೆಯ ಮನೆಗೆ ಬೆಳಗ್ಗೆ ಸವಾರಿ ಬಿಡುವುದನ್ನು ನಿಲ್ಲಿಸಿದರು. ಸುಂದರಿ ಅವರು ಹೋಗುತ್ತಿರುವಾಗ ಮನಸ್ಸಿನಲ್ಲಿಯೇ ನಕ್ಕಿದ್ದಳು.

ರಾತ್ರಿಯೂ, ಹೇಳಿ ಹೋದಂತೆ—ಚೌಡಪ್ಪ ಹಾಜರಾದರು. ಅಂದು

ಅವರು ಸವಿದ ಅವೃತಕ್ಕೆ ಎಣೆಯೇ ಇಲ್ಲ. ಸುಂದರಿಗೂ ಗಂಟಲಿನವರೆಗೆ ಅದನ್ನು ತುಂಬಿಸಿದರು. ತೇಗು ಬರುವ ತನಕವೂ ಅವ್ಲೇಟ್ಟಿನ ಸಮಾರಾಧನೆಯಾಗಿತ್ತು. ಚೌಡಪ್ಪನವರಿಗೆ ಅವೃತದ ಅಮಲು ಏರಿತ್ತೇನೋ ಹೌದು. ಆದರೆ ಅವರಿಗೆ ಎಷ್ಟು ಅಮಲೇರಿದರೂ ಮನಸ್ಸಿನ ತೂಕ ತಪ್ಪುತ್ತಿರಲಿಲ್ಲ. ಅಂತೇ ದೇಹವನ್ನು ಹಿಡಿತದಲ್ಲಿ ಇಡುವಷ್ಟು ಶಕ್ತಿಯೂ ಅವರಿಗಿತ್ತು. ಆದರೆ ಸುಂದರಿಗೆ ಮಾತ್ರ ಅಷ್ಟು ತಾಕತ್ತಿರಲಿಲ್ಲ. ಅವಳು ಅದನ್ನು ಸೇವಿಸಲೂ ಹೇಸುತ್ತಿದ್ದಳು. ಬಲವಂತದಿಂದ ಚೌಡಪ್ಪ ಆಕೆಗೆ ಆ ಚಟವನ್ನು ಕಲಿಸಿದ್ದಾಗಿತ್ತು. ಕೆಲವೊವ್ಮೆ ತನ್ನ ಅಳತೆ ಮೀರಿಯೂ ಆಕೆ ಕುಡಿಯಬೇಕಾಗುತ್ತಿತ್ತು. ಅಂದು ರಾತ್ರಿಯೂ ಅವಳ ಪಾಡು ಹಾಗೇ ಆಯಿತು. ಅವೃತದ ಅಮಲು ಹಾಗೂ ವಿಷಯ ಲಾಲಸೆ ಎರಡೂ ಕೂಡಿ ಚೌಡಪ್ಪನವರನ್ನು ಸ್ವರ್ಗಕ್ಕೇರಿಸಿದ್ದವು. ಬಾಯಿಯಿಂದ ಕಿನ್ನರ ಗಾನವೇ ಹೊರಬೀಳತೊಡಗಿತ್ತು.

"ಏನೇ ರಾಣೀ, ನೀನೆಷ್ಟು ಚೆಲುವೆ?"

"ನಾನೇ! ನಾನು ಬಲು ಚೆಲುವೆ"

"ನಿನ್ನ ಜಾತಿಯೇ ಹಾಗೆನೇ"

"ನನ್ನ ಜಾತಿಯೆಂದರೆ?"

"ಹೆಣ್ಣು ಜಾತಿ"

"ಕುರೂಪಿಯರು ಇರುವುದಿಲ್ಲವೇ"

"ಛೇ! ಹೆಣ್ಣು ಎಂದೂ ಕುರೂಪಿಯಾಗಿರುವುದಿಲ್ಲ"

"ಮತ್ತೆ?"

"ಒಂದು ಹೆಣ್ಣಿಗಿಂತ ಮತ್ತೊಂದು ಚೆಂದ!"

"ನಿಮ್ಮ ತಲೆ!" ಎಂದು ಸುಂದರಿ ಅಮಲಿನಲ್ಲೇ ಚೌಡಪ್ಪನವರನ್ನು ಮೂದಲಿಸಿದಳು. ಅವಳ ಪಕ್ಕದಲ್ಲೇ ಅವರೂ ಕೂತಿದ್ದರು. "ನಿಮ್ಮ ತಲೆ" ಎಂದು ಸುಂದರಿ ಹೇಳಿದೊಡನೆ ಅವರು ಕೈಯಿಂದ ಅಲ್ಲಿರುವ ಗ್ಲಾಸು, ಪ್ಲೇಟು, ಬಾಟ್ಲಿಗಳನ್ನೆಲ್ಲ ಸರಿಸಿ ಮೂಲೆಗೊತ್ತಿದರು. ಕೂಡಲೆ "ನನ್ನ ತಲೆ ನಿನ್ನ ತೊಡೆಯ ಮೇಲೆ" ಎಂದು ಹೇಳಿದಂತೆ ಮಾಡಿದರು.

ಆಕೆ ಅವರ ತಲೆಯ ಮೇಲೆ ಪ್ರೇಮದಿಂದ ಕೈ ಸವರಿದಳು.

"ಹಾ! ನಿನ್ನ ಸ್ಪರ್ಶಸುಖವೇ ಸುಂದರಿ" ಎನ್ನುತ್ತ ಅವಳ ಕೈಗಳನ್ನು ತನ್ನ ಕಣ್ಣುಗಳಿಗೆ ಒತ್ತಿಕೊಂಡರು. ಅದಕ್ಕೆ ಮುದ್ದಿಟ್ಟೂ ಆಯಿತು. "ನೀನು ಸುಂದರಿ....ಸ್ವರ್ಗಲೋಕದ ಸುಂದರಿ" ಎನ್ನುವಾಗ ಗಡಿಯಾರ 'ಢಂಯ್' ಎನ್ನುತ್ತ ಹನ್ನೆರಡು ಬಡೆಯಿತು!

"ಅಮ್ಮಾ, ಅಮ್ಮಾ" ಎಂದು ತೊದಲು ಮಾತಿನಲ್ಲೇ ಒದರುತ್ತ ಗೋದಿ ಅಲ್ಲಿಗೆ ಒಳಗಿನಿಂದ ಓಡಿ ಬಂದಳು. ಮಗು ಬಂದದ್ದು ಅವರ ಅರಿವಿಗೇ ಬರಲಿಲ್ಲ. ಚೌಡಪ್ಪ ಸುಂದರಿಯ ತೊಡೆಯ ಮೇಲೆ ಹಾಯಾಗಿ ಮಲಗಿದ್ದರು. ಸುಂದರಿ ಗೋಡೆಗೆ ಒರಗಿಯೇ ಕೂತಿದ್ದಳು. ತನ್ನ ತಾಯಿಯ ತೊಡೆಯ ಮೇಲೆ ಮಲಗಿದ ಆಗಂತುಕನನ್ನು ಕಂಡ ಮಗುವಿಗೂ ದ್ವೇಷ ಹುಟ್ಟಿತು. ಸ್ವಲ್ಪ ಹೊತ್ತು ಅವರನ್ನೇ ನೋಡುತ್ತ ನಿಂತಿತು. ಆಮೇಲೆ ತಕ್ಷಣ ಓಡಿ ಬಂದು ಚೌಡಪ್ಪನವರನ್ನು ಕೈಯಿಂದ ಪರಚಿ, ಬಾಯಿಯಿಂದ ಕಡಿಯುವುದಕ್ಕೂ ಹಿಂಜರಿಯಲಿಲ್ಲ. ಎಷ್ಟೋ ಹೊತ್ತಿನವರೆಗೆ ಚೌಡಪ್ಪ ಸುಮ್ಮನೆ ಇದ್ದರೋ ಅಥವಾ ಅವರಿಗೆ ನೋವಿನ ತಿಳಿವು ಆಗಲಿಲ್ಲವೋ ತಿಳಿಯದು. ಆದರೆ ಮಗು ಅತ್ತು ರಂಬಾಟ ಮಾಡುತ್ತ "ಅಮ್ಮಾ ಅಮ್ಮಾ" ಎನ್ನುತ್ತ ಅವರನ್ನು ಕಾಲಿನಿಂದ ಒದಿಯುವಾಗ ಮಾತ್ರ ಚೌಡಪ್ಪನವರ ಅಭಿಮಾನ ಕೆರಳಿತು. "ಇದು ಎಲ್ಲಿಂದ ಬಂತು ಬಿಕಣೇಶಿ!" ಎಂದು ಚೌಡಪ್ಪ ಒಂದೇಟು ಕೊಟ್ಟರು ಮೆಲ್ಲನೆ. ಅತ್ತ ಸರಿಸಿಯೂ ಬಿಟ್ಟರು. ಆದರೆ ಅದು ಪುನಃ ಅಲ್ಲಿಗೆ ಬಂದು "ಅಮ್ಮಾ" ಎಂದು ಕೂಗಿತು. ಆಗ ಸುಂದರಿ, "ಹೋಗಿ ಮಲಗೂ ಗೋದಾ, ನಿದ್ದೆ ಬರುವುದಿಲ್ಲವೋ ನಿನಗೆ?" ಎನ್ನುತ್ತಿದ್ದಳು. ಅಷ್ಟರಲ್ಲಿ ಚೌಡಪ್ಪ ಹತ್ತಿರದಿಂದ ಅಮೃತ ಕುಡಿದಿಟ್ಟ ತೆಳ್ಳಗಾದ ಕಾಜಿನ ಗ್ಲಾಸು ತೆಗೆದು 'ಚಟ್ಟನೆ' ಆ ಮಗುವಿನ ಹಣೆಗೊಂದು ಬಿಟ್ಟರು. "ಅಯ್ಯೋ!" ಎಂದು ಸುಂದರಿ ಹಾಗೂ ಅವಳ ಮಗಳ ಕ್ರಂದನ ಧ್ವನಿ ಒಮ್ಮೆಲೇ ಕೇಳಿಸಿತು. ಚೌಡಪ್ಪನವರ ತಲೆಯನ್ನು ನೆಲಕ್ಕೆ ಜಜ್ಜಿ ಸುಂದರಿ ಎದ್ದಳು. "ಕೊಂದಿರಿ ಮಗುವನ್ನು!" ಎಂದು ಕಿರಚುತ್ತ ಮಗುವಿನ ಹಣೆಯಿಂದ ಸುರಿಯುತ್ತಿರುವ ನೆತ್ತರಿಗೆ ತನ್ನ ಸೆರಗು ಮುದ್ದೆ ಮಾಡಿ ಒತ್ತಿದಳು. "ಸಾಯಲಿ ಬಿಡೇ ಅದೊಂದು!" ಎಂದು ಚೌಡಪ್ಪ ಹಾಗೇ ಮಲಗಿದ್ದರು.

ಕಾಮಾವೇಶದಲ್ಲಿ ವೈರಿಯು ವಯಸ್ಸು ಕಾಮಿಯ ಮನಸ್ಸಿನಲ್ಲಿ ಕಾಣದು. ಮಗುವಿರಲಿ, ಮುದುಕಿಯಿರಲಿ ವೈರಿಯೇ. ಆದರೆ ಇತ್ತ ಸುಂದರಿಯ ಕರುಳು ಕರಗಿತು. ಅಮಲು ಇಳಿಯಿತು. ಆಗಲೂ ಚೌಡಪ್ಪ "ಬಾರೇ" ಎಂದು ರಾಗ ಎಳೆದರು. ಸುಂದರಿಗೆ ಕೋಪವೇನೋ ಬಂತು. ಆದರೆ ಅದನ್ನು ವ್ಯಕ್ತಪಡಿಸಲು ಅವಳು ಅನರ್ಹಳಾದಳು. ಆದರೂ "ನಿಮ್ಮ ಕಾಮದ ದಾದಿಯಾಗುವ ಮೊದಲು ನಾನು ಈ ಮಗುವಿನ ತಾಯಿಯಾಗಿದ್ದೆ" ಎಂದು ಎನ್ನಲು ಬಾಯಿ ತೆರೆದಳು. ಆದರೆ ಶಬ್ದ ಹೊರಡಲಿಲ್ಲ. ಸ್ವಲ್ಪ ಹೊತ್ತಿನ ಮೇಲೆ, ಸುಂದರಿಯ ಅಳುವನ್ನು ಕೇಳಿ ಅವರು ಏಳಬೇಕಾಯಿತು. "ಸುಖವಾಗಿ ರಾತ್ರಿ ಕಳೆಯಬೇಕೆಂದಿದ್ದರೆ ಹಣೆಬರಹ ಹೀಗೆ!" ಎಂದು ದೋತರ ಝಾಡಿಸಿಕೊಂಡು ಎದ್ದರು ಚೌಡಪ್ಪ. ಆಗ ಅವರ ಕಣ್ಣಿಗೆ ಸುಂದರಿಯ ಬಿಳಿಯ ಸೀರೆಯ ಸೆರಗು ರಕ್ತದಿಂದ ತೋಯ್ದುದ್ದು ಕಂಡಿತು. "ರಕ್ತ ಬಂತೇ?" ಎಂದು ಗಾಬರಿಯಿಂದ ಕೇಳಿದರು. ಸುಂದರಿ ಮಾತೆತ್ತಲಿಲ್ಲ. ಆಮೇಲೆ ತಾವೂ ಮಗುವಿನ ಹಣೆಗೆ ಪಟ್ಟಿ ಕಟ್ಟುವ ಕೆಲಸದಲ್ಲಿ ನೆರವಾದರು. "ಏನಿಲ್ಲ, ಅಮಲೇರಿದಾಗ ಒಂದು ಗ್ಲಾಸಿನ ಚೂರು ತಾಗಿರಬೇಕು" ಎಂದು ಏನೋ ಹೇಳುತ್ತ ಸುಂದರಿಯನ್ನು ಸಮಾಧಾನಿಸುತ್ತಿದ್ದರು.

ಮುಂದೆ ಕೆಲವು ದಿವಸಗಳ ಮೇಲೆ ಹಣೆಯ ಗಾಯ ತುಂಬಿ ಬಂದು ಗುಣವಾಯಿತು. ಆದರೆ ಕಲೆ ಹಾಗೇ ಕಪ್ಪಾಗಿ ಉಳಿದಿತ್ತು. ಅಂತೇ ಆ ಕಲೆ ಸುಂದರಿಯ ಮನೋಮಂದಿರದಲ್ಲಿ ನೋವು ಸಮೇತವಾಗಿ ನೆಲೆಗೊಂಡಿತು. ಒಮ್ಮೊಮ್ಮೆ ಆ ಕರಿಯ ಸ್ಥಳವನ್ನು ಕಂಡೊಡನೆ ಅವಳಿಗೆ ದುಃಖ ತಡೆಯುವುದಕ್ಕಾಗುತ್ತಿರಲಿಲ್ಲ. "ಇನ್ನೂ ಮುಂದೇನೇನು ಆಗುವುದಿದೆಯೋ" ಎಂದು ಆಕೆ ಚಿಂತಿಸುತ್ತ ಕೂಡುತ್ತಲೂ ಇದ್ದಳು. ಆದರೆ ತನ್ನ ಪ್ರಿಯರಾದ ಚೌಡಪ್ಪನವರನ್ನು ಆರಾಧಿಸುವುದನ್ನು ಬಿಡಲಿಲ್ಲ. ಅದಿಲ್ಲದಿದ್ದರೆ ಅವಳ ಜೀವನ ಸಾಗುವುದು ಕಷ್ಟವಷ್ಟೆ. ಅವಳ ಹೃದಯವೆಂಬುದು ಅಂದಿನಿಂದ ದುಃಖದ ಬಾವಿಯಾಯಿತು. ಅದರಲ್ಲಿ ಯಾವಾಗಲೂ ದುಃಖದ ನೀರು ಆರುತ್ತಲೇ ಇರಲಿಲ್ಲ.

ಇತ್ತ ಚೌಡಪ್ಪನವರು ಆಮೇಲೆ ಕೆಲವು ವ್ಯವಸ್ಥೆಗಳನ್ನು ಕೈಕೊಂಡರು. ಅಲ್ಲಿಯೇ ಬದಿಗೊಂದು ಮನೆ ಕಟ್ಟಿಸಿ, ಅದರಲ್ಲಿ ಒಂದು ಹಳೆಯ ಮುದುಕಿ

ಯನ್ನು ತಂದಿಟ್ಟರು. ಆ ಮುದುಕಿಗೆ ಈ ಮಗುವಿನ ಪೋಷಣೆಯನ್ನು ಒಪ್ಪಿಸಿದರು. ಅದರಿಂದ ಅವರ ಕಾರ್ಯಕ್ಕೆ ಬರುವ ಅಡ್ಡಿ ಕಡಿಮೆಯಾಯಿತು. ಅದೇ ಪ್ರಕಾರ ಆ ಮುದುಕಿಗೂ "ಈ ಮಗುವಿನ ಸಂರಕ್ಷಣೆ ನಿನ್ನದು. ನಾನು ಬರುವ ಹೊತ್ತಿಗೆ ನೀನು ಅದನ್ನು ಇತ್ತ ಬರಗೊಡಬಾರದು. ನಾನು ಬರುವ ಹೊತ್ತು ನಿನಗೆ ಗೊತ್ತಿದೆಯಲ್ಲಾ ?" ಎಂದು ಆಜ್ಞೆ ಮಾಡಲಾಗಿತ್ತು. ಆದರೆ ತಿಂಗಳಿಗೆ ನಾಲ್ಕಾರು ದಿನ ಆ ಮುದುಕಿ ಊರಿಗೆ ಹೋಗುವ ಹವ್ಯಾಸ ಇಟ್ಟಿದ್ದಳು. ಹೀಗಾಗಿ ತಿಂಗಳಲ್ಲಿ ಮೂರು ನಾಲ್ಕು ದಿನ ಚೌಡಪ್ಪ ಅತ್ತ ಹೋಗುವುದನ್ನೇ ನಿಲ್ಲಿಸಿ, ಮುನಸಿಪಾಲ್ಟಿಯ ಕಾರಕೂನರಿಗೆ ಸಾಕಷ್ಟು ಪೂಜೆ ಮಾಡತೊಡಗಿದರು.

ಈ ಹೊಸ ವ್ಯವಸ್ಥೆಯನ್ನು ಸುಂದರಿ ಒಪ್ಪಲೇ ಬೇಕಿತ್ತು. ಆಕೆ ಮರು ನುಡಿಯದೆ ಒಪ್ಪಿದಳು. ಚೌಡಪ್ಪನವರು ಅವಳಿಗೆ ನೀತಿಯನ್ನೂ ಬೋಧಿಸಿದ್ದರು "ಈಗಿನಿಂದಲೇ ಅವಳನ್ನು ಬಿಗಿ ಹಿಡಿದುಕೊಂಡು ಬಾ. ಮುಂದೆ ಅಡ್ಡ ಹಾದಿಗೆ ಬಿದ್ದಾಳು. ಹಾದಿಯಿಂದ ಹಳ್ಳಕ್ಕೆ ಬೀಳಲಿಕ್ಕೆ ತಡವಿಲ್ಲ. ಆದರೆ ಹಳ್ಳದಿಂದ ಹಾದಿಗೆ ಹೋಗುವುದು ಸುಲಭವಲ್ಲ. ಆದ್ದರಿಂದ ಅವಳಿಗೂ ಕೆಟ್ಟ ಚಟ ಹತ್ತಬಾರದು ಅಂತ ನಾನು ಈ ವ್ಯವಸ್ಥೆ ಮಾಡಿದ್ದೇನೆ. ನಾವಿಬ್ಬರೂ ಸುಖವಾಗಿ ಕೂತಿರುವಾಗ ಅವಳು ನೋಡಿ ಕೆಡಬಹುದು. ಹೇಗೆ ನಾನು ಹೇಳಿದ್ದು ನಿನಗೆ ತಿಳಿಯಿತೇ ?" ಎಂದು ಚೌಡಪ್ಪ ಸುಂದರಿಗೊಮ್ಮೆ ಕೇಳಿದ್ದರು.

"ನೀವು ಹೇಳುವುದು ಸರಿ" ಎಂದು ಸುಂದರಿಯೂ ಉತ್ತರಿಸಿದ್ದಳು. ಅಂತೇ ಚೌಡಪ್ಪ ಆ ಮುದುಕಿಗೂ, "ನೋಡು ಮುದುಕೀ, ಸೂಳೆಯ ಮಗಳು ಸೂಳೆಯಾಗದಂತೆ ನೀನು ನೋಡಿಕೊಳ್ಳಬೇಕು. ನಾನು ಹೇಳುವುದು ಒಳ್ಳೆಯದ್ದಕ್ಕೆ. ನನ್ನದೂ ಸುಂದರಿದೂ ಹೇಗಾದರೂ ನಡಿಯುತ್ತದೆ. ಆದರೆ ಮುಂದಿನ ಮರಿ ಹಾಳಾಗಬಾರದಲ್ಲ. ಅದಕ್ಕಾಗಿ ಮುದುಕೀ, ನೀನು ಒಂದು ಕೆಲಸ ಮಾಡಬೇಕು" ಎಂದು ಹೇಳಿದ್ದರು.

"ನೀವು ಹೇಳಿದ ಹಾಗೆ ನಾನು ಮಾಡುತ್ತೇನೆ" ಎಂದು ಮುದುಕಿ ಭರವಸೆಯನ್ನು ಇತ್ತಿದ್ದಳು.

“ ಹಾಗಾದರೆ ನೋಡು, ಆ ಗೋದಿಗೆ ಈ ಕಾಮಪ್ರೇಮದ ಗಾಳಿ ಬಡೆಯದ ಹಾಗೆ ಬಹಳ ಜಾಗ್ರತೆಯಿಂದ ನೋಡಿಕೊಂಡು ಸಾಕಬೇಕು. ಈಗ ಅವಳಿಗೆ ಮೂರು ವರ್ಷ ಎಂದು ಕಾಣುತ್ತೆ. ”

“ ಇದು ಮೂರು ನಡೆಯುತ್ತಾ ಇದೆಯಂತೆ- ಆದರೆ ಶಹರದ ಊರಲ್ಲಿ ಹಾಗೆ ಕಾಯ್ದುಕೊಂಡು ಒಯ್ಯುವುದು ಕಠಿಣ. ಈಗ ಸದ್ಯಕ್ಕೆ ಯಾವ ತಕರಾರೂ ಬಾರದು. ಆದರೆ ಅವಳು ಸಾಲೆಗೆ ಹೋಗಲಿಕ್ಕೆ ಹತ್ತಿದಳೆಂದರೆ ಸ್ವಲ್ಪ ತ್ರಾಸುದಾಯಕ. ಆದ್ದರಿಂದ ಸಾಲೆ ಮಾತ್ರ ಕಲಿಸಬೇಕೋ ಬಿಡಬೇಕೋ ಎನ್ನುವುದು ನಿಮ್ಮ ಖುಷಿ. ”

“ ಅಲ್ಲಾ ಮತ್ತು ಹಳ್ಳಿಯ ಸಾಲೆಗೆ ಹಾಕಿದರೆ ಹೇಗೆ ? ”

“ ಅದನ್ನೇ ನಾನು ಹೇಳುವುದು. ಹೇಗಾದರೂ ನಾನು ಒಬ್ಬವಳು ಇದ್ದೇನೆ. ಅಲ್ಲಿಯೇ ಈ ಹುಡುಗಿಯನ್ನು ಕರೆದುಕೊಂಡು ಜೋಪಾನ ಮಾಡುತ್ತ ಇರುತ್ತೇನೆ ಅತ್ತ ಸಾಲೆಯೂ ಆಗುತ್ತದೆ ಇತ್ತ ನಿಮ್ಮ ತಲೆನೂ ಸರಿಯಾಗಿ ಉಳಿಯುತ್ತದೆ. ಇನ್ನೇನು ? ಸೂಟಿ ಬಂದಾಗ ಕೆಲವು ದಿವಸ ಇಲ್ಲಿಗೆ ಕರೆದು ತಂದರಾಯಿತು. ಇಲ್ಲಿ ಬರುವ ಖರ್ಚಿನಲ್ಲೇ ನಾನು ಆ ಹಳ್ಳಿಯೊಳಗೂ ಸುಧಾರಿಸಿಕೊಂಡು ಒಯ್ಯುತ್ತೇನೆ ” ಎಂದು ಆ ಮುದುಕಿ ತನ್ನ ಲಾಭವನ್ನೇ ಒಂದು ಕೈಯಲ್ಲಿ ಹಿಡಿದುಕೊಂಡು ಮಾತಾಡಿದಳು.

“ ಆದರೆ ಸುಂದರಿ ಏನು ಹೇಳುತ್ತಾಳೋ ? ” ಎಂದು ಚೌಡಪ್ಪ ಸಂಶಯದಿಂದಲೇ ಮುದುಕಿಯೊಡನೆ ಮಾತು ಕೊನೆಗೊಳಿಸಿದರು. “ ಇನ್ನೂ ಒಂದೆರಡು–ಮೂರು ವರುಷ ದಾಟಬೇಕಲ್ಲ. ಈಗ ಯಾಕೆ ಆ ಮಾತು ? ” ಎಂದು ಮರುಕ್ಷಣಕ್ಕೆ ನೆನೆದು ಮನೆ ಸೇರಿದ್ದರು.

ಗೋದಿಯ ಬಗ್ಗೆ ನಡೆದ ಪ್ರಕರಣ ಹಳೆಯದಾಯಿತು. ವರುಷಗಳು ಓಡಿದವು. ಗೋದಿ ಸಾಲೆಗೆ ಹೋಗುವ ಪ್ರಾಯದವಳಾದಳು. ಆಗ ಆ ಮುದುಕಿಯೂ ತಿಂಗಳಲ್ಲಿ ಹತ್ತಿಪ್ಪತ್ತು ದಿನ ಮಾತ್ರ ಇತ್ತ ಬರುತ್ತಿದ್ದಳು. ಅಂತೇ ಸುಂದರಿ ಚೌಡಪ್ಪನವರಿಗೆ ಹೇಳಿಯೇ ಹತ್ತಿರದ ಒಂದು ಕನ್ನಡ ಪ್ರಾಥಮಿಕ ಸಾಲೆಗೆ ಗೋದಿಯನ್ನು ಕಳುಹಿಸತೊಡಗಿದಳು.

ಮೂರನೆಯ ಅಧ್ಯಾಯ

ಆವಳ ಹಣೆಗೆ ತಾಗಿದ ಪೆಟ್ಟಿನಿಂದ ಎಷ್ಟೋ ರಕ್ತ ಹೋಗಿತ್ತು. ಅದರ ಆಯಾಸದಿಂದ ಕಣ್ಣು ತೆರೆಯುವುದೂ ಕಷ್ಟವೆನಿಸಿರಬಹುದು. ನಿದ್ದೆಯೂ ಹತ್ತಿತ್ತು. "ಗೋದೀ, ಗೋದಾ, ಕಂದಾ" ಎಂದು ಕರೆದರೂ ಅವಳಿಗೆ ಎಚ್ಚರವಾಗಲಿಲ್ಲ. ಮಗಳು ಸುಖನಿದ್ರೆಯಲ್ಲಿರುವುದನ್ನು ನೋಡಿ ಸುಂದರಿಗೂ ಸ್ವಲ್ಪ ಸಮಾಧಾನವಾಯಿತು. "ಪಾಪ ಮಲಗಲಿ. ತುಂಬ ದಣಿದಿರ ಬಹುದು. ತಲೆಯ ಗಾಯದಿಂದ ರಕ್ತವೆಷ್ಟು ಹೋಗಿದೆಯೋ ಏನೋ!" ಎಂದು ಮರಗುತ್ತ ಅವಳು ಹಿಂದೆ ನೋಡಿದಳು. ಆಗ ಅವಳ ಮೈಯಲ್ಲಿ ಎಚ್ಚರ ಬಂದಿರಬೇಕು. ಯಾಕಂದರೆ ಅವಳು ಹಾಗೆ ಹಿಂದೆ ನೋಡುವು ದಕ್ಕೂ ಗಡಿಯಾರ ಹನ್ನೊಂದು ಸಲ ಘಣತ್ಕಾರ ಮಾಡುವುದಕ್ಕೂ ಸರಿ ಹೊಂದಿತು ರಾತ್ರಿಯ ಹನ್ನೊಂದು ಗಂಟೆಯದು. ಆಕೆಯ ಊಟವಾಗಿ ರಲಿಲ್ಲ. ಒಲೆಯೊಳಗೆ ಬೆಂಕಿಯೂ ಇರಲಿಲ್ಲ. ಹಿಂದಿನ ಬಾಗಿಲುಗಳನ್ನು ಮುಚ್ಚಿದ್ದೇನೊ ಇಲ್ಲವೋ ಎಂದು ಪರೀಕ್ಷಿಸಲು ಅತ್ತ ಹೋಗಿ ಬಂದಳು. ಅಲ್ಲಿಯ ಬಾಗಿಲುಗಳನ್ನು ಮುಚ್ಚಿದ್ದು ಅವಳಿಗೇ ನೆನಪಿರಲಿಲ್ಲ ಅಂತೇ ಮುಂದಿನ ಬಾಗಿಲನ್ನು ನೋಡಿಕೊಂಡು ಬಂದಳು. ಅದೂ ಮುಚ್ಚಲ್ಪ ಟ್ಟಿತ್ತು. ಮನೆತುಂಬ ವಿದ್ಯುತ್ ದೀಪಗಳು ಬೆಳಗುತ್ತಿದ್ದವು. ಕೆಲವನ್ನು ಆರಿಸಿದಳು. ಪುನಃ ಬಂದು ಮಗಳ ಮೇಲೆ ಹೊದಿಸಿದ ಚಾದರವನ್ನು ಸರಿ ಪಡಿಸಿ ಅವಳ ಪಲ್ಲಂಗದ ಬದಿಯಲ್ಲೇ ಸ್ವಲ್ಪ ದೂರದಲ್ಲಿರುವ ಕುರ್ಚಿಯಮೇಲೆ ಮೂಕಳಾಗಿ ಕೂತಳು. ಆದರೆ ಅವಳ ಮನಸ್ಸು ಒಳಗಿಂದ ತಾನೇ ಎರಡು ಪಾತ್ರ ವಹಿಸಿ ಮಾತಾಡಿಕೊಳ್ಳುತ್ತಿತ್ತು.

"ರಾತ್ರಿ ಬರುತ್ತೇನೆ ಎಂದಿದ್ದರು. ಇನ್ನೂ ಯಾಕೆ ಬರಲಿಲ್ಲ?"

"ಬರುತ್ತಾರೆ."

"ಇಲ್ಲ"

"ಯಾಕೆ?"

"ನೀನು ಅವರನ್ನು ಅಪಮಾನಿಸಿದಿ."

" ಹಾಗಾದರೆ ನೋಡು, ಆ ಗೋದಿಗೆ ಈ ಕಾಮಪ್ರೇಮದ ಗಾಳಿ ಬಡೆಯದ ಹಾಗೆ ಬಹಳ ಜಾಗ್ರತೆಯಿಂದ ನೋಡಿಕೊಂಡು ಸಾಕಬೇಕು. ಈಗ ಅವಳಿಗೆ ಮೂರು ವರ್ಷ ಎಂದು ಕಾಣುತ್ತೆ."

" ಇದು ಮೂರು ನಡೆಯುತ್ತಾ ಇದೆಯಂತೆ- ಆದರೆ ಶಹರದ ಊರಲ್ಲಿ ಹಾಗೆ ಕಾಯ್ದುಕೊಂಡು ಒಯ್ಯುವುದು ಕಠಿಣ. ಈಗ ಸದ್ಯಕ್ಕೆ ಯಾವ ತಕರಾರೂ ಬಾರದು. ಆದರೆ ಅವಳು ಸಾಲೆಗೆ ಹೋಗಲಿಕ್ಕೆ ಹತ್ತಿದಳೆಂದರೆ ಸ್ವಲ್ಪ ತ್ರಾಸುದಾಯಕ. ಆದ್ದರಿಂದ ಸಾಲೆ ಮಾತ್ರ ಕಲಿಸಬೇಕೋ ಬಿಡಬೇಕೋ ಎನ್ನುವುದು ನಿಮ್ಮ ಖುಷಿ."

" ಅಲ್ಲಾ ಮತ್ತು ಹಳ್ಳಿಯ ಸಾಲೆಗೆ ಹಾಕಿದರೆ ಹೇಗೆ ? "

" ಅದನ್ನೇ ನಾನು ಹೇಳುವುದು. ಹೇಗಾದರೂ ನಾನು ಒಬ್ಬವಳು ಇದ್ದೇನೆ. ಅಲ್ಲಿಯೇ ಈ ಹುಡುಗಿಯನ್ನು ಕರೆದುಕೊಂಡು ಜೋಪಾನ ಮಾಡುತ್ತ ಇರುತ್ತೇನೆ ಅತ್ತ ಸಾಲೆಯೂ ಆಗುತ್ತದೆ ಇತ್ತ ನಿಮ್ಮ ತಲೆನೂ ಸರಿಯಾಗಿ ಉಳಿಯುತ್ತದೆ. ಇನ್ನೇನು ? ಸೂಟಿ ಬಂದಾಗ ಕೆಲವು ದಿವಸ ಇಲ್ಲಿಗೆ ಕರೆದು ತಂದರಾಯಿತು. ಇಲ್ಲಿ ಬರುವ ಖರ್ಚಿನಲ್ಲೇ ನಾನು ಆ ಹಳ್ಳಿಯೊಳಗೂ ಸುಧಾರಿಸಿಕೊಂಡು ಒಯ್ಯುತ್ತೇನೆ " ಎಂದು ಆ ಮುದುಕಿ ತನ್ನ ಲಾಭವನ್ನೇ ಒಂದು ಕೈಯಲ್ಲಿ ಹಿಡಿದುಕೊಂಡು ಮಾತಾಡಿದಳು.

" ಆದರೆ ಸುಂದರಿ ಏನು ಹೇಳುತ್ತಾಳೋ ? " ಎಂದು ಚೌಡಪ್ಪ ಸಂಶಯದಿಂದಲೇ ಮುದುಕಿಯೊಡನೆ ಮಾತು ಕೊನೆಗೊಳಿಸಿದರು. " ಇನ್ನೂ ಒಂದೆರಡು–ಮೂರು ವರುಷ ದಾಟಬೇಕಲ್ಲ. ಈಗ ಯಾಕೆ ಆ ಮಾತು ? " ಎಂದು ಮರುಕ್ಷಣಕ್ಕೆ ನೆನೆದು ಮನೆ ಸೇರಿದ್ದರು.

ಗೋದಿಯ ಬಗ್ಗೆ ನಡೆದ ಪ್ರಕರಣ ಹಳೆಯದಾಯಿತು. ವರುಷಗಳು ಓಡಿದವು. ಗೋದಿ ಸಾಲೆಗೆ ಹೋಗುವ ಪ್ರಾಯದವಳಾದಳು. ಆಗ ಆ ಮುದುಕಿಯೂ ತಿಂಗಳಲ್ಲಿ ಹತ್ತಿಪ್ಪತ್ತು ದಿನ ಮಾತ್ರ ಇತ್ತ ಬರುತ್ತಿದ್ದಳು. ಅಂತೇ ಸುಂದರಿ ಚೌಡಪ್ಪನವರಿಗೆ ಹೇಳಿಯೇ ಹತ್ತಿರದ ಒಂದು ಕನ್ನಡ ಪ್ರಾಥಮಿಕ ಸಾಲೆಗೆ ಗೋದಿಯನ್ನು ಕಳುಹಿಸತೊಡಗಿದಳು.

ಮೂರನೆಯ ಅಧ್ಯಾಯ

ಅವಳ ಹಣೆಗೆ ತಾಗಿದ ಪೆಟ್ಟಿನಿಂದ ಎಷ್ಟೋ ರಕ್ತ ಹೋಗಿತ್ತು. ಅದರ ಆಯಾಸದಿಂದ ಕಣ್ಣು ತೆರೆಯುವುದೂ ಕಷ್ಟವೆನಿಸಿರಬಹುದು. ನಿದ್ದೆಯೂ ಹತ್ತಿತ್ತು. "ಗೋದೀ, ಗೋದಾ, ಕಂದಾ" ಎಂದು ಕರೆದರೂ ಅವಳಿಗೆ ಎಚ್ಚರವಾಗಲಿಲ್ಲ. ಮಗಳು ಸುಖನಿದ್ರೆಯಲ್ಲಿರುವುದನ್ನು ನೋಡಿ ಸುಂದರಿಗೂ ಸ್ವಲ್ಪ ಸಮಾಧಾನವಾಯಿತು. "ಪಾಪ ಮಲಗಲಿ. ತುಂಬ ದಣಿದಿರ ಬಹುದು. ತಲೆಯ ಗಾಯದಿಂದ ರಕ್ತವೆಷ್ಟು ಹೋಗಿದೆಯೋ ಏನೋ!" ಎಂದು ಮರಗುತ್ತ ಅವಳು ಹಿಂದೆ ನೋಡಿದಳು. ಆಗ ಅವಳ ಮೈಯಲ್ಲಿ ಎಚ್ಚರ ಬಂದಿರಬೇಕು. ಯಾಕಂದರೆ ಅವಳು ಹಾಗೆ ಹಿಂದೆ ನೋಡುವು ದಕ್ಕೂ ಗಡಿಯಾರ ಹನ್ನೊಂದು ಸಲ ಥಣತ್ಕಾರ ಮಾಡುವುದಕ್ಕೂ ಸರಿ ಹೊಂದಿತು ರಾತ್ರಿಯ ಹನ್ನೊಂದು ಗಂಟೆಯದು. ಆಕೆಯ ಊಟವಾಗಿ ರಲಿಲ್ಲ. ಒಲೆಯೊಳಗೆ ಬೆಂಕಿಯೂ ಇರಲಿಲ್ಲ. ಹಿಂದಿನ ಬಾಗಿಲುಗಳನ್ನು ಮುಚ್ಚಿದ್ದೇನೊ ಇಲ್ಲವೋ ಎಂದು ಪರೀಕ್ಷಿಸಲು ಅತ್ತ ಹೋಗಿ ಬಂದಳು. ಅಲ್ಲಿಯ ಬಾಗಿಲುಗಳನ್ನು ಮುಚ್ಚಿದ್ದು ಅವಳಿಗೇ ನೆನಪಿರಲಿಲ್ಲ ಅಂತೇ ಮುಂದಿನ ಬಾಗಿಲನ್ನು ನೋಡಿಕೊಂಡು ಬಂದಳು. ಅದೂ ಮುಚ್ಚಲ್ಪ ಟ್ಟಿತ್ತು. ಮನೆತುಂಬ ವಿದ್ಯುತ್ ದೀಪಗಳು ಬೆಳಗುತ್ತಿದ್ದವು. ಕೆಲವನ್ನು ಆರಿಸಿದಳು. ಪುನಃ ಬಂದು ಮಗಳ ಮೇಲೆ ಹೊದಿಸಿದ ಚಾದರವನ್ನು ಸರಿ ಪಡಿಸಿ ಅವಳ ಪಲ್ಲಂಗದ ಬದಿಯಲ್ಲೇ ಸ್ವಲ್ಪ ದೂರದಲ್ಲಿರುವ ಕುರ್ಚಿಯಮೇಲೆ ಮೂಕಳಾಗಿ ಕೂತಳು. ಆದರೆ ಅವಳ ಮನಸ್ಸು ಒಳಗಿಂದ ತಾನೇ ಎರಡು ಪಾತ್ರ ವಹಿಸಿ ಮಾತಾಡಿಕೊಳ್ಳುತ್ತಿತ್ತು.

"ರಾತ್ರಿ ಬರುತ್ತೇನೆ ಎಂದಿದ್ದರು. ಇನ್ನೂ ಯಾಕೆ ಬರಲಿಲ್ಲ?"

"ಬರುತ್ತಾರೆ."

"ಇಲ್ಲ"

"ಯಾಕೆ?"

"ನೀನು ಅವರನ್ನು ಅಪಮಾನಿಸಿದಿ."

"ನಾನೇ ?"

"ಹೌದು ನೀನೇ! ಸುಂದರಿ, ನೀನೇ. ನೀನು ಎಷ್ಟೆಂದರೂ ಅವರ ಸೊತ್ತು. ನಿನ್ನ ದೇಹವನ್ನೇ ಅವರು ಕ್ರಯಕ್ಕೆ ಕೊಂಡಂತಾಗಿದೆ. ನೀನು ಅವರು ಹೇಳಿದಂತೆ ಕೇಳಬೇಕು. ಅವರ ಹಸಿವನ್ನು ನೀನು ತಣಿಸುವುದು ನಿನ್ನ ಕರ್ತವ್ಯ. ಅವರ ಆ ಕಾಮದ ಹಸಿವಿಗೆ ನೀನು ಆಹಾರವಲ್ಲವೇ ? ನೀನೂ ಒಂದು ಆಹಾರ ಅವರಿಗೆ. ಯಾಕಂದರೆ ನಿನ್ನನ್ನು ಅವರು ಬೆಲೆ ಗೊಟ್ಟು ಕೊಂಡಿಲ್ಲವೇ ? ಬೆಲೆ ಕೊಟ್ಟು ಕೊಂಡ ವಸ್ತುವಿನ ಅಧಿಕಾರ ಒಡೆಯನಿಗಲ್ಲವೇ ? ನೀನು ಅವರನ್ನು ಹಾಗೆ ತಿರಸ್ಕರಿಸಿ ಕಳುಹಿಸಬಾರದಿತ್ತು. ಹಿಂದೆ ಎಷ್ಟೋ ಸಲ ನಿನ್ನಿಂದ ಅವರಿಗೆ ಮುಖಭಂಗವಾಗಿದೆ. ಅವರು ಅವುಗಳನ್ನೆಲ್ಲ ಸಹಿಸಿದ್ದರು. ಈಗ ಅವರಿಗೆ ಸಹನೆ ಸಾಲದು. ನಿನ್ನನ್ನು ಅವರೂ ತಿರಸ್ಕರಿಸಿ ಹೊರದೂಡಿ ಬಿಟ್ಟರೆ ನೀನು ಎಲ್ಲಿ ಹೋಗುತ್ತೀ ? ನಿನಗೆ ಈ ಜಗತ್ತಿನಲ್ಲಿ ಯಾರಿದ್ದಾರೆ ? ಎಲ್ಲಿ ಹೋಗಿ ಬಾಳುವೆ ಮಾಡುತ್ತಿ ? ನಿನ್ನ ಮಗಳನ್ನು ಏನು ಮಾಡುವಿ ? ನಿನ್ನ ಜೀವನ ಹಾಳಾಗುತ್ತದೆ. ಏಳು, ಎದ್ದೇಳು, ಓಡು; ಅವರ ಕಾಲು ಹಿಡಿದು ಕರೆದು ತಾ. 'ನನ್ನದು ತಪ್ಪಾಯಿತು' ಎಂದು ಅವರ ಕಾಲಬುಡದಲ್ಲಿ ಬೀಳು. ಹೋಗು, ಹೋಗು."

"ಇಲ್ಲ ನಾನೆಂದಿಗೂ ಅವರೊಡನೆ ಕ್ಷಮೆ ಕೇಳುವುದಿಲ್ಲ. ಅಂಥ ಅಪರಾಧವಾದರೂ ನಾನು ಮಾಡಿದ್ದೇನು ? ನನ್ನನ್ನೇ ಒದ್ದು ಅವರು ಹೋಗಿದ್ದಾರೆ. ಅವರಿಗೆ ಮನಸ್ಸು ಎಂಬುದು ದೇವರು ಕೊಟ್ಟಿದ್ದರೆ, ಹೃದಯವೆಂಬುದು ಇದ್ದರೆ—ಅವರು ಬರುತ್ತಾರೆ. ಇಲ್ಲವಾದರೆ ಇಲ್ಲ. ಬಾರದಿದ್ದರೆ ಬಿಡಲಿ. ನಾನು ಹೋಗಿ ಬಾವಿಗೆ ಬೀಳುತ್ತೇನೆ. ನನಗೆ ಈ ಜನ್ಮ ಬೇಡ. ಸೂಳೆಯೆಂದು ನನ್ನನ್ನು ಜನ ಬೇಕಾಬಷ್ಟು ನಿಂದಿಸಿ, ಪ್ರತಿಭಟಿಸಿಯೂ ಆಯಿತು. ಇನ್ನು ನನ್ನ ಜನ್ಮಕ್ಕೇ ಬೇಕು ಆದರೂ ಏನು ? ಈಗ ಒಬ್ಬರ ಸೂಳೆ. ಇನ್ನು ಅವರು ಬಿಟ್ಟರೆ ಬಿಡುಸೂಳೆಯಾಗಿ ಕಂಡವರನ್ನೆಲ್ಲ ಮೋಹಿಸಬೇಕೇ ? ಬೇಡ ಆ ಹೀನ ಜೀವನ ಬೇಡ. ಇಷ್ಟಕ್ಕೇ ಸಾಕು ಮಾಡುತ್ತೇನೆ ನನ್ನ ಬಾಳನ್ನು. ಈಗಲೇ ಹೋಗಿ ಜೀವ ತೆಗೆದುಕೊಳ್ಳುತ್ತೇನೆ. ಇವರು ತೊರೆದರೆ ಕ್ರೂರ ಜನ ನನ್ನನ್ನು ಬಿಟ್ಟೀತೇ ? ದಿನಕ್ಕೊಬ್ಬರೋ.......... ಇಬ್ಬರೋ........ಹತ್ತು ಜನವೋ........ನನ್ನನ್ನು ಹಾಳು ಮಾಡಲಾರರೇ ?

ನನ್ನೀ ಮುದ್ದು ಕಂದನಿಗೆ........ಅದೋ ಆ ಸಣ್ಣ ಮಗುವೇ ಕಲ್ಲು ಹೊಡೆಯಿತಂತೆ! ಯಾಕೆ? ನನ್ನ ಮಗಳು ಅವಳೆಂದೇ? ನಾನು ಸೂಳೆಯಾದರೆ ನನ್ನ ಮಗಳೂ ಸೂಳೆಯೇ? ಬೇಡ, ಈ ಬಾಳೇ ಬೇಡ. ನಾನು ನನ್ನ ಜೀವ ಕಳೆದುಕೊಳ್ಳುತ್ತೇನೆ. ಇಷ್ಟೆಲ್ಲ ಮಾಡಿದ ಜನ ನನ್ನನ್ನು ಏನು ಮಾಡುತ್ತದೋ ಗೊತ್ತಿಲ್ಲ. ಅವರು ಕೊಲ್ಲುವುದಕ್ಕಿಂತ ನಾನೇ ಸತ್ತರೆ ಲೇಸು."

"ನೀನು ಸತ್ತರೆ ಸಾಯು. ಆದರೆ ನಿನ್ನ ಮುದ್ದು ಕಂದನ ಗತಿ?"

"ಹುಟ್ಟಿಸಿದ ದೇವ ಹುಲ್ಲು ಮೇಯಿಸಿಯಾನೆ? ಅವಳನ್ನು ಯಾವನಾದರೂ ಒಬ್ಬ ಪುಣ್ಯವಂತ ಮದುವೆಯಾದಾನು? ಇಂದು ಇದ್ದ ಹಾಗೆಯೇ ಜಗತ್ತು ನಾಳೆ ಇರುವುದಿಲ್ಲವಲ್ಲ. ದೇವರು ಯಾವನಾದರೊಬ್ಬನನ್ನು ಕಳುಹಿಸಬಹುದು ನನ್ನ ಮಗಳನ್ನು ಮದುವೆಯಾಗಲಿಕ್ಕೆ."

"ನೀನು ಸೂಳೆ! ನಿನ್ನ ಮಗಳನ್ನು ಯಾರುಮದುವೆಯಾಗುತ್ತಾರೆ?"

"ಬಿಡಲಿ. ಬೇಡ, ಅವಳೂ ನನ್ನೊಡನೆ ಸಾಯಲಿ. ಅವಳನ್ನು ಕಟ್ಟಿಕೊಂಡೇ ನಾನು ಸಾಯುತ್ತೇನೆ. ಇನ್ನಾದರೂ ಲೋಕಕ್ಕೆ ಸುಖವಾದೀತೆ? ಜನತ್ತಿನ ಕೊಳಕು ಹೋದೀತೇ? ನಾನು, ನನ್ನ ಮಗಳು, ಇಬ್ಬರೂ ಆತ್ಮಾರ್ಪಣೆ ಮಾಡುತ್ತೇವೆ."

"ನಿನ್ನದು ಮತ್ತು ನಿನ್ನ ಮಗಳದು—ಇಬ್ಬರದೂ ಕೇವಲ ಆತ್ಮಾರ್ಪಣೆಯಾಗುತ್ತದೆಯೇ ಹೊರತು ಜಗತ್ತಿನ ಕೊಳಕು ಸರಿದು ಬೆಳಕು ಬರುವುದಿಲ್ಲ. ನೀನು ಅಷ್ಟು ದಿಟ್ಟೆಯಾದರೆ, ನಿನ್ನ ಮತ್ತು ನಿನ್ನ ಮಗಳ ಬಲಿದಾನ ಕೊಟ್ಟರೆ, ಎಲ್ಲೋ ಒಂದು ಸಮುದ್ರದ ಉಸುಕಿನ ರಾಶಿಯಿಂದ ಒಂದು ಹರಳು ಉಸುಕು ಸರಿದು ಹೋದಂತೆ ತಿಳಿಯಿತೇ? ಹಳ್ಳದಿಂದ ಒಂದೇ ಹನಿ ಹರಿದು ಹೋದಂತೆ!"

"ಹಾಗಾದರೆ ನಾನು ಮಾಡಬೇಕಾದುದಾದರೂ ಏನು? ಅತ್ತ ಸತ್ತರೂ ಸುಖವಿಲ್ಲ, ಇತ್ತ ಬದುಕಲೂ ಎಡೆ ಇಲ್ಲ. ನನ್ನ ಪಾಡು ಇಷ್ಟು ಬೇಗನೇ ಹೀಗಾಗಿದೆ! ಇನ್ನು ನನ್ನ ಮುದ್ದು ಕಂದ ಬೆಳೆದು ವಯಸ್ಸಿಗೆ ಬಂದಾಗ ನನ್ನ ಗತಿಯೇನು?"

"ಮುಂದಿನದನ್ನೆಲ್ಲ ಚಿಂತಿಸುತ್ತ ಕೂಡಬೇಡ. ಇಂದು ದಾಟಿದ ಮೇಲೆಯೇ ನಾಳೆ ಬರುತ್ತದೆ. ಮೊದಲು ಇವತ್ತಿನ ದಿವಸವನ್ನು ದಾಟಿಸು."

"ಈ ತಂಗಳು ತತ್ವಜ್ಞಾನ ನನಗೆ ಬೇಡ. ನಾನೂ ನನ್ನ ಮಗಳೂ ಒಮ್ಮೆಲೇ ಜೀವದಾನ ಮಾಡುವುದೇ ನನಗೆ ಕೊನೆಗೆ ಉಳಿದ ಉಪಾಯ. ಕಬ್ಬಿಣದ ಮಂಚದಲ್ಲಿ ಮುದ್ದು ಕಂದ ಹೇಗೂ ನಿದ್ದೆಯಲ್ಲೇ ಇದ್ದಾಳೆ. ನಾನೂ ಅದರ ಮೇಲೆ ಹೋಗಿ ನಿದ್ದೆ ಮಾಡುತ್ತೇನೆ. ಅದೋ ಅಲ್ಲಿ ಕಾಣುವ ವಿದ್ಯುತ್ ಬಳ್ಳಿಯನ್ನು ತಂದು ಕಬ್ಬಿಣದ ಕಾಲಿಗೆ ಕಟ್ಟಿದರಾಯಿತು. ಜೀವ ತಾನಾಗಿಯೇ ಹೋಗದೇ ?" ಎಂದು ಸುಂದರಿ ಅಲ್ಲಿಂದ ಥಟ್ಟನೆ ಎದ್ದಳು. ಯಾವ ನಿರ್ಧಾರದಿಂದ ಎದ್ದಳೋ ಯಾರಿಗೆ ಗೊತ್ತು ? ಅಲ್ಲಿಯೇ ಹೊರಗೆ ಹಾಸಿಟ್ಟ ಬಿಳಿಯ ಹಾಸಿಗೆ ಕಂಡಿತು ಅವಳಿಗೆ. ಅಲ್ಲಿಗೂ ತಲುಪಿದಳು.

"ಕಡ್, ಕಡ್, ಕಡಪ್" ಎಂದು ಮುಂದಿನ ಬಾಗಿಲು ಬಡಿಯುವ ಸಪ್ಪಳ ಆಕೆಯ ಕಿವಿಯಲ್ಲಿ ಕೊರೆಯತೊಡಗಿತು. "ಹೋ! ಬಂದರು" ಎಂದು ಹೊರಗೆ ಓಡಿದಳು. ಬಾಗಿಲು ತೆರೆದೂ ಆಯಿತು. ಆದರೆ ಹೊರಗೆ ಯಾರೂ ಇಲ್ಲ. ಕತ್ತಲಲ್ಲಿ ಕಣ್ಣಿಗೆ ಬೆಟ್ಟು ಚುಚ್ಚಿದರೂ ಕಾಣುವ ಹಾಗಿರ ಲಿಲ್ಲ. ಎಲ್ಲೆಲ್ಲೂ ಕತ್ತಲೆ ಹರಡಿತ್ತು. ಒಂದು ನರಹುಳದ ಸುಳಿವೂ ಇರ ಲಿಲ್ಲ. ಅಂಥ ಭೀಕರ ಕತ್ತಲೆಯನ್ನು ಆಕೆ ಇದುವರೆಗೆ ನೋಡಿರಲಿಲ್ಲ. ಕಾರಣ, ಆಕೆಯ ಮೈ ಬೆವರಿತು. ಬೆದರಿ ಕೈಕಾಲುಗಳೆಲ್ಲ ಒಮ್ಮೆಲೇ ಮರ ಕಟ್ಟಿದಂತಾದವು. ಅತ್ತ ಇತ್ತ ಸರಿಯಲು ಪ್ರಯತ್ನಿಸಿದಳು. ಪ್ರಯತ್ನ ನಿಷ್ಫಲವಾಯಿತು. "ಅಯ್ಯೋ" ಎಂದು ಒದರ ಹೋದಳು. ಅದೂ ಸಾಧ್ಯವಾಗಲಿಲ್ಲ. ಅಷ್ಟರಲ್ಲೇ ಆಕೆಯ ಮೈ ಬೆವರಿನಿಂದ ತೊಯ್ದುಹೋಗಿತ್ತು. ಬಾಗಿಲಿನ ಚೌಕಟ್ಟಿಗೆ ಹಿಡಿದ ಕೈಯನ್ನು ಎಳೆಯಲು ಯತ್ನಿಸಿದಳು. ಅದೂ ಕಠಿಣವಾಯಿತು. ಹೀಗೆ ಅಲ್ಲಿಯೇ ಹತ್ತೆಂಟು ನಿಮಿಷ ನಿಂತಿದ್ದಳು. ಆಗ ಅವಳ ಮನೆಯಿಂದ ಕೂಗಳತೆಯ ದೂರದಲ್ಲಿ ಬಳಸಿಕೊಂಡು ಹೋದ ರಸ್ತೆ ಯಿಂದ ಟಾಂಗಾ ಎಳೆಯುವ ಕುದುರೆಯ ಕೊರಳಿನ ಗೆಜ್ಜೆಯ ನಾದ ಕೇಳ ಬಂತು. ಸ್ವಲ್ಪ ಹೊತ್ತಿನಲ್ಲೇ ಅವಳ ಕಣ್ಣಿಗೆ ಆ ಟಾಂಗೆಯ ದೀಪವೂ ದೂರದಿಂದ ಕಾಣಿಸಿತು. ಅಷ್ಟರಿಂದಲೇ ಮನಸ್ಸಿಗೆ ಧೈರ್ಯ ತಂದುಕೊಂ ಡಳು. ಬಲವಂತದಿಂದ ಹಿಂದೆ ಸರಿದಳು. ಸಟ್ಟನೆ ಬಾಗಿಲು ಮುಚ್ಚಿಯಾ ಯಿತು. "ಥೂ ನನ್ನ ಭ್ರಮೆಯೇ!" ಎಂದು ಒಳಗೆ ಹೊರಟಳು. ಆಗ ಪುನಃ ಮೊದಲಿನಂತೆ ಬಾಗಿಲು ಬಡೆಯುವ ಶಬ್ದ ಕೇಳಿಸಿತಾಕೆಗೆ. ಅಲ್ಲಿಯೇ

ನಿಂತಳು. “ ಬಾಗಿಲು ತೆರೆ...........ತೆರೆ...........” ಎಂಬ ಅಸ್ಪಷ್ಟವಾದ ಮಾತೂ ಆಡಿದಂತಾಯಿತು ಹೊರಗಿನಿಂದ. “ ಇದು ನನ್ನ ಭ್ರಮೆ ಇರ ಬಹುದೇ ? ” ಎಂದು ಆಲೋಚಿಸುತ್ತ ಸ್ವಲ್ಪ ಸಮಯ ನಿಂತುಕೊಂಡಳು. ಆದರೂ ಆ ಶಬ್ದ ಹಾಗೇ ಕೇಳಬರುತ್ತಿತ್ತು. ಆಗ ಆಕೆಯ ಕೈಕಾಲುಗಳು ಚೆನ್ನಾಗಿ ಚಲಿಸುವ ಸ್ಥಿತಿಗೆ ಬಂದಿದ್ದವು. “ ಯಾರೇ ಆಗಲಿ, ಬಾಗಿಲು ತೆಗೆದೇ ಬಿಡುತ್ತೇನೆ. ಬಹುಶಃ ಅವರೇ ಇರಬೇಕು. ಸಿನೇಮಾಕ್ಕೆ ಹೋಗಿ ದ್ದರೋ ಏನೋ. ಈಗ ಬಂದಿದ್ದಾರೆ. ಖಂಡಿತಕ್ಕೂ ಅವರೇ. ಒಮ್ಮೆ ಬಾಗಿಲು ಬಡೆದು ಅತ್ತ ಟಾಂಗಾದವನಿದ್ದಲ್ಲಿಗೆ—ಹೋಗಿರಲೂ ಬಹುದು. ಅಥವಾ ಯಾರೊಡನೆಯಾದರೂ ಮಾತಾಡುತ್ತ ನಿಂತಿರಬಹುದು. ಈಗ ಪುನಃ ಬಂದಿದ್ದಾರೆ. ನನ್ನ ರಾಯರು ಹಾಗೆಂದೂ ನನ್ನ ಮೇಲೆ ಸಿಟ್ಟಗೇಳು ವವರಲ್ಲ ” ಎಂದು ನೆನೆದು ಬಾಗಿಲು ತೆರೆದೇ ಬಿಟ್ಟಳು.

ಸುಂದರಿಗೆ ಬಾಗಿಲು ತೆಗೆದೊಡನೆ ಯಾರೋ ಮೂವರು ಆ ಕತ್ತಲಲ್ಲಿ ಒಂದೆಡೆ ನಿಂತದ್ದು ಕಪ್ಪಾಗಿ ಕಂಡಿತು. ಅವರಲ್ಲಿ ಒಬ್ಬಳು ಹೆಣ್ಣು ಎಂಬುದು ಅವಳಿಗೆ ತಿಳಿಯದೆ ಬಿಡಲಿಲ್ಲ. ಆದರೆ ಅವರ ಪರಿಚಯ ಇವಳಿಗೆ ಆಗಲಿಲ್ಲ. ಅಷ್ಟರಲ್ಲಿ ಆ ಒಂದು ಹೆಣ್ಣು ಮತ್ತು ಗಂಡು ಕತ್ತಲಲ್ಲೇ ಥರಥರನೆ ನಡೆದು ದೂರ ಹೋಗಿ ಬಿಟ್ಟರು. ಒಬ್ಬವನು ಮಾತ್ರ ಸುಂದರಿಯ ಮನೆಯ ಅಂಗ ಳಕ್ಕೆ ಬಂದ. ಆ ಹೋದವರು ಇವನಿಗೆ ಏನೋ ಹೇಳುತ್ತ ನಿಂತಂತೆ ಸುಂದ ರಿಗೆ ಅನಿಸಿತು.

ಆತ ಧೈರ್ಯದಿಂದ ಸುಂದರಿಯ ಮನೆಯೊಳಗೆ ಪ್ರವೇಶಿಸಿಯೇ ಬಿಟ್ಟ. ಅವನನ್ನು ಕಂಡೊಡನೆ ಸುಂದರಿಗೆ ಎಲ್ಲಿಂದಿಲ್ಲದ ಬೆದರಿಕೆಯೂ ಆಯಿತು. ಯಾಕಂದರೆ ಆ ವ್ಯಕ್ತಿಯನ್ನು ಆಕೆ ಹಲವಾರು ಸಲ ಕಂಡಿದ್ದಳು. ಅವನ ಹೆಸರೂ ಆಕೆಗೆ ಗೊತ್ತಿತ್ತು. “ ಇವನು ಈ ರಾತ್ರಿಯಲ್ಲಿ ಬಂದನೇ ? ” ಎಂದು ಆಕೆ ಗದಗದ ನಡುಗಿದಳು. ಆತ ಹಲವಾರು ಸಲ ಚೌಡಪ್ಪನವ ರೊಡನೆ ಇದ್ದದ್ದೂ ಆಕೆ ನೋಡಿದ್ದಳು. ಆದರೆ ಇಲ್ಲಿಯ ವರೆಗೆ ಅವನು ಈಕೆಯ ಮೇಲೆ ಯಾವ ಅನ್ಯಾಯವನ್ನೂ ಮಾಡಿರಲಿಲ್ಲ. ಹಾಗೆಂದು ಅವನ ದೃಷ್ಟಿಯಲ್ಲಿ ಈಕೆ ಅಂಥ ಅವ್ಯಾಪಾರವನ್ನೂ ಕಾಣದೆಯೂ ಇಲ್ಲ. ಅವನು ಚೌಡಪ್ಪನವರ ಪರಮ ಸ್ನೇಹಿತನೆಂದು ಇವಳಿಗೆ ಎಂದೋ ಗೊತ್ತಿತ್ತು. ಆದರೆ

ಅವರು ಆತನನ್ನು ಇವಳ ಮನೆಗೆ ಇದುವರೆಗೆ ಒಮ್ಮೆಯೋ ಏನೋ ಕರೆತಂದು ಕೂಡಲೇ ಹಿಂದೆ ಕರೆದೊಯ್ದಿದ್ದರು. ಈಗ ಅವನ ನಡತೆಯನ್ನು ನೋಡಿ ದೊಡನೆ ಸುಂದರಿ ಭೂಮಿಗಿಳಿದು ಬಿಟ್ಟಳು. "ಇವನನ್ನು ಅವರೇ ಕಳು ಹಿಸಿರಬಹುದು" ಎಂದು ನಂಬಿ ಆಕೆ, "ಕೂಡು ಸಿದ್ದಪ್ಪಾ" ಎಂದು ಉಪಚರಿಸಿದಳು.

"ಹೂಂ" ಎನ್ನುತ್ತ ಆತ ಕೈಯಲ್ಲಿರುವ ಚೀಲವನ್ನು ಅಲ್ಲಿಯೇ ಒಂದು ಬದಿಗಿಟ್ಟ. ತನ್ನ ಕೋಟು ಕಳೆದು ಗೂಟಕ್ಕೆ ಹಾಕಿದ. "ಹಾ, ಹಾ, ಏನು ಸೆಕೆ" ಎನ್ನುತ್ತ ಅಂಗಿಯನ್ನೂ ತೆಗೆದು ಅಲ್ಲಿಯೇ ಇಟ್ಟು ಬಂದ. ಕಿಸೆ ಯೊಳಗಿಂದ ಸಿಲ್ಕಿನ ಕರವಸ್ತ್ರ ತೆಗೆದು ಗಾಳಿ ಹಾಕಿಕೊಳ್ಳುವವನಂತೆ ನಟಿಸಿದ. ಆತ ಅಲ್ಲಿ ಕಾಲಿಟ್ಟೊಡನೆ ಅಲ್ಲಿ ಎಲ್ಲೆಲ್ಲೂ ಅತ್ತರಿನ ಸೌರಭ ಹಬ್ಬಿತ್ತು. ಈಗ ಅವನು ಕರವಸ್ತ್ರ ತೆಗೆದೊಡನೆ ಸುಗಂಧದ ವಾಸನೆ ಮತ್ತೂ ಪ್ರಬಲವಾ ಯಿತು.

"ಆ ಕದಾ ಮುಂದಕ್ಕೆ ಮಾಡು" ಎಂದನಾತ ಆಕೆಯನ್ನು ನೋಡುತ್ತ. ಅವನ ದೃಷ್ಟಿಯಲ್ಲಿ ಅನೀತಿ ತುಂಬಿತ್ತು.

"ಗಾಳಿ ಬರಲಿಯಲ್ಲ. ಹೇಗೂ ನಿನಗೆ ಸೆಕೆಯಾಗುತ್ತದೆ"

"ಚೌಡಪ್ಪಣ್ಣ ಈ ಮನೆಗೊಂದು ಫ್ಯಾನ್ ಹಾಕಿಸಿಲ್ಲ!"

"ಅವರು ಊರಲ್ಲಿ ಇಲ್ಲವೇ ?"

"ಇಲ್ಲ"

"ಇವತ್ತು ಮಧ್ಯಾಹ್ನ ಇಲ್ಲಿಗೆ ಬಂದಿದ್ದರಲ್ಲ ?"

"ಮುನ್ಸಿಪಾಲ್ಟಿಯ ಕೆಲಸದ ಮೇಲೆ ಪರವೂರಿಗೆ ಹೋಗಿದ್ದಾರೆ"

"ಯಾವಾಗ ?"

"ಸಂಜೆ."

"ಬರುವುದು ?"

"ಇನ್ನೊಂದು ಏಳೆಂಟು ದಿನ ಬರುವುದಿಲ್ಲ ಅಂತ ಹೇಳಿದ್ದಾರೆ"

"ಸುಳ್ಳಲ್ಲವೇ ಇದು ?"

"ಅಲ್ಲ" ಎಂದು ಮುಗುಳುನಗೆ ನಗುತ್ತ ಸಿದ್ದಪ್ಪ ಎದ್ದು ಹೋಗಿ ಬಾಗಿಲು ಮುಚ್ಚಿ ಬಂದ. ಚಿಲಕವನ್ನೂ ಹಾಕಿದ. ಸುಂದರಿಯ ಹಾವ

ಭಾವಗಳನ್ನು ಪರೀಕ್ಷಿಸುತ್ತಲೇ ಇದ್ದನಾತ. ಅವಳಲ್ಲಿ ಯಾವ ಬದಲಾವಣೆಯೂ ಅವನಿಗೆ ಕಾಣಲಿಲ್ಲ. ಆಕೆ ಅವನಿಗಿಂತ ನಾಲ್ಕಾರು ಮಾರು ದೂರದಲ್ಲಿ ನಿಂತಿದ್ದಳು. ಅವನು ಬಾಗಿಲು ಮುಚ್ಚುವಾಗಲೂ ಅವಳು ಸುಮ್ಮನಿದ್ದಳು. ಬಾಗಿಲು ಮುಚ್ಚಿ ಬಂದ ಮೇಲೆ ಆತ ತನ್ನ ಆಸನದ ಮೇಲೆ ಕೂಡಲಿಲ್ಲ. ಅಲ್ಲಿಯೇ ಶತಪಥ ನಡೆಸಿದ್ದ. ಒಳಗೆ ನೋಡುತ್ತ "ಅಲ್ಲಿ ಆ ಕೋಣೆಯೊಳಗೆ ದೀಪ ಉರಿಯುತ್ತಿದೆಯಲ್ಲ ?" ಎಂದು ಕೇಳಿದ.

"ಹೌದು" ಎಂದಳು ಸುಂದರಿ.

"ಅಲ್ಲಿ ಯಾರು ಇದ್ದಾರೆ ?"

"ನನ್ನ ಮಗಳು."

"ಎಷ್ಟು ದೊಡ್ಡವಳು ?"

"ನಿನಗೇಕೆ ಅದೆಲ್ಲ ?"

"ಯಾಕಿಲ್ಲ ಸುಮ್ಮನೆ ಕೇಳಿದೆ. ನೀನು ಸಿಟ್ಟಾಗಬೇಡ" ಎನ್ನುತ್ತ ಸಿದ್ದಪ್ಪ ದೇಶಾವರಿ ನಗೆ ಬೀರಿದ. ಆತ ಬಾಯಿ ತೆರೆದೊಡನೆ ಅವನ ಬಾಯಿಯ ಮದಿರೆಯ ವಾಸನೆ ಸುಂದರಿಯ ಮೂಗಿನವರೆಗೂ ಒಮ್ಮೆ ಬಂದು ಮುಟ್ಟಿ ಹೋಯಿತು. ಆಕೆ ಮನಸ್ಸಿನಲ್ಲೇ ಏನೋ ವಿಚಾರ ಮಾಡುತ ಅಲ್ಲಿಯೇ ಹತ್ತಿರ ಇರುವ ಒಂದು ಮೊಳ ಉದ್ದದ ಹಾರೇಕೋಲನ್ನು ನೋಡುತ್ತ ನಿಂತಿದ್ದಳು. ಅವಳು ಹಾಗೆ ನಿಂತಲ್ಲಿಗೆ ಸಿದ್ದಪ್ಪ ಒಮ್ಮೆ ಬಂದೂ ಹಿಂದೆ ಹೋದ

"ನೀನು ಯಾಕೆ ಈ ಹೊತ್ತಿಗೆ ಇಲ್ಲಿ ಬಂದೆ ?" ಎಂದು ಧೈರ್ಯದಿಂದ ಪ್ರಶ್ನಿಸಿದಳು ಸುಂದರಿ.

"ಚೌಡಪ್ಪ ಊರಲ್ಲಿ ಇಲ್ಲವೆಂದು ಬಂದೆ. ನಿನ್ನೊಡನೆ ಸ್ವಲ್ಪ ಕೆಲಸವಿತ್ತು."

"ಚೌಡಪ್ಪನವರು ಏನಾದರೂ ಹೇಳಿ ಹೋಗಿದ್ದಾರೆಯೋ ?"

"ಇಲ್ಲ."

"ಹಾಗಾದರೆ ಮತ್ತೆ ಯಾವ ಕೆಲಸ ?"

"ಚೌಡಪ್ಪನವರಿಗೂ ನನಗೂ ಬಹು ದೂರ ಈಗ. ಅವರೊಡನೆ ನಾನು ಜಗಳಾಡಿದ್ದೇನೆ. ನಿನಗೆ ಗೊತ್ತೇ ಇಲ್ಲವೋ ?"

"ಹಾಗಾದರೆ ನಿನಗೆ ಅವರು ಪರವೂರಿಗೆ ಹೋದದ್ದು ಹೇಗೆ ತಿಳಿಯಿತು?"

"ಅದನ್ನು ಪ್ರಯತ್ನಪಟ್ಟು ತಿಳಿದೇ ಇಲ್ಲಿಗೆ ಬಂದದ್ದು. ಪರಭಾರೆಯಿಂದ ಅದನ್ನೆಲ್ಲ ಅರಿತುಕೊಂಡೆ. ಅವರು ಬರುತ್ತಾರೆಂದು ನೀನು ಹೆದರಬೇಡ. ಒಂದು ವೇಳೆ ಅವರು ಬಂದರೂ ನಾನು ಅವರನ್ನು ಎದುರಿಸಲು ಸಿದ್ಧನಿದ್ದೇನೆ. ಅಕೋ ಆ ಮೂಲೆಯಲ್ಲಿ ಇಟ್ಟ ಚೀಲದೊಳಗೆ ಒಂದು ವಾಯಿನ್ ಬಾಟ್ಲಿ ಇದೆ. ನಿನಗೆ ಬೇಕಿದ್ದರೆ ಕುಡಿ. ಇಲ್ಲವಾದರೆ ನನ್ನದೇನೂ ಒತ್ತಾಯವಿಲ್ಲ. ಸುಮ್ಮನೆ ಯಾಕೆ ಹೊತ್ತು ಕಳೆಯುವುದು?" ಎಂದು ಮಾತಾಡುತ್ತ ಸಿದ್ದಪ್ಪ ಸುಂದರಿಯ ಹತ್ತಿರ ಬಂದು ಆಕೆಯನ್ನು ಬರಸೆಳೆಯಲು ಹೊಂಚು ಹಾಕುತ್ತಿದ್ದ. ಅಷ್ಟರಲ್ಲಿ ಅವನ ಎದೆಯ ಮೇಲೆ ಆ ಕಬ್ಬಿಣದ ಹಾರೆಕೋಲು ಸಡ್ಡನೆ ಬಿತ್ತು! ನೆಟ್ಟಗೆ ಅವನ ಎದೆಗೆ ಚುಚ್ಚಲೆಂದು ಆಕೆ ಅದನ್ನು ಎಸೆದಿದ್ದಳು. ಆದರೆ ಅದು ಅಡ್ಡ ಬಂದು ಅವನೆದೆಗೆ ಬಡೆಯಿತು. ನೆಲಕ್ಕೆ ಬಿದ್ದೊಡನೆ ಆತ ಅದನ್ನು ತನ್ನ ಕಾಲಿನಿಂದ ತುಳಿದು ಹಿಡಿದುಕೊಂಡ. "ಹಹ್ಹಾ!" ಎಂದು ನಕ್ಕ. "ಇನ್ನೇನು ಮಾಡುತ್ತಿ? ಆ ಹಾರೆಯಕೋಲಿನ ಬದಲು ನೀನೇ ಬಂದು ನನ್ನ ಎದೆಯ ಮೇಲೆ ಬೀಳಬಾರದಿತ್ತೇ? ನಾನು ನಿನ್ನ ಕೈಯೇ ಬಂದು ಬಿತ್ತೆಂದು ತಿಳಿದೆ!" ಎಂದು ಸರ್ರನೆ ಅವಳ ಎರಡೂ ಕೈಗಳನ್ನು ಹಿಡಿದೇಬಿಟ್ಟ. ಆಕೆ ಅವನ ಕೈಗಳನ್ನು ಕಚ್ಚಹೋದಳು. ಆದರೆ ಆತ ಬಿಡಲಿಲ್ಲ. "ಲೈಟ್ ಆರಿಸುತ್ತೇನೆ" ಎಂದು ಹೇಳಿದಂತೆ ಮಾಡಿದ. ಅವಳು ನಿಸ್ಸಹಾಯ ಸ್ಥಿತಿಯಲ್ಲಿ ಅವನು ಎಳೆದತ್ತ ಹೋಗಬೇಕಾಯಿತು. ಒದರಲು ಶತಪ್ರಯತ್ನ ಮಾಡಿದಳು. "ನಾಲಗೆಯ ಮೇಲಿನ ತುತ್ತು ಗಂಟಲಿಗೆ ಇಳಿಯದೆ ಹೋದೀತೇ?" ಎಂದೆಣಿಸಿ ಸಿದ್ದಪ್ಪ ಆಕೆಯನ್ನು ಎಳೆದುಕೊಂಡು ಒಳಗಿನ ಕೋಣೆಗೆ ಒಯ್ದ. "ಅಯ್ಯೋ ನನ್ನ ಕಂದಾ!" ಎಂದು ಅತ್ತಳು ಆಕೆ. ಆದರೆ ಅವನು ಗೋದಿ ಮಲಗಿರುವ ಕೋಣೆಯ ದೀಪವನ್ನೂ ಆರಿಸಿ ಆಯಿತು. "ಅಯ್ಯೋ! ಅಯ್ಯೋ!" ಎನ್ನುತ್ತಿದ್ದಳು ಆಕೆ. ಅವಳ ಮನಸ್ಸು ಅವನನ್ನು ಬಿಟ್ಟು ಮೇರೆಯಿಲ್ಲದ ಮುಗಿಲಂಚಿಗೆ ಓಡುತ್ತಿತ್ತು. ದೇಹ ಮಾತ್ರ ಸಿದ್ದಪ್ಪನ ವಶವಾಗಿತ್ತು. "ನೀನು ನಮ್ಮ ಚೌಡಪ್ಪಣ್ಣನವರ ವಶಕ್ಕೆ ಬಂದಾಗಲೇ ನನಗೆ

ನಿನ್ನ ಆಶೆ ಹಿಡಿದಿತ್ತು. ಆದರೆ ಇದುವರೆಗೂ ನೀನು ನನಗೆ ಸಿಗಲಿಲ್ಲ. ಇವತ್ತು ನೀನಾಗಿಯೇ ನನ್ನ ಕೈಗೆ ಸಿಗುವ ಸಂಧಿಯು ಒದಗಿತು. ನಾನು ಬಿಡುತ್ತೇನೆಯೇ? ಅವರೇ ನಿನ್ನನ್ನು ನನಗೆ ಒಪ್ಪಿಸಿದಾಗ ನಾನು ಕೇಳುತ್ತೇನೆಯೇ?" ಎಂದು ಅವನ ಮನಸ್ಸು ಮೌನವಾಗಿಯೇ ತನ್ನ ಅಧೀನದಲ್ಲಿರುವ ಸುಂದರಿಯೊಡನೆ ಮಾತಾಡುತ್ತಿತ್ತು. ಕಟುಕನ ಕತ್ತಿಗೆ ಸಿಕ್ಕ ಪ್ರಾಣಿಯಂತೆ ಸುಂದರಿಯ ಪಾಡು ಅವನ ಸ್ವಾಧೀನದಲ್ಲಿದ್ದಾಗ ಆಯಿತು. ಸ್ವಚ್ಛಂದವಾದ ಅವಳ ಮನಸ್ಸು ಸಿದ್ದಪ್ಪನನ್ನು ಅಬಲೆಯಾದ ಅವಳ ಮಾಂಸದ ಮುದ್ದೆಯ ಮೇಲೆ ಬಿಟ್ಟು ಓಡಿತ್ತು—ಬಹು ದೂರ.

………………ಸಿದ್ದಪ್ಪ ಎದ್ದು ಹೊರಗೆ ಹೋಗುವಾಗ ತನ್ನ ಕೈಗಡಿಯಾರ ನೋಡಿದ. ಅದರಲ್ಲಿ 'ಎರಡು ಗಂಟೆಯಾಗಿತ್ತು. ಹೋಗುವಾಗ ಅವನ ಮನಸ್ಸು ಪ್ರಫುಲ್ಲವಾಗಿತ್ತು. ಸುಂದರಿಯ ಮನೆಯ ಕಂಪೌಂಡು ಬಿಟ್ಟು ಹೊರಗೆ ಬಂದು ಅತ್ತ ಇತ್ತ ನೋಡುತ್ತಲೇ ಇದ್ದ ಅವನಿಗೆ ಅಲ್ಲಿ ಯಾರೂ ಕಾಣಿಸಲಿಲ್ಲ. "ಎಲ್ಲಿ ಸಾಯಲಿಕ್ಕೆ ಹೋದರಪ್ಪಾ ಇವರು" ಎಂದು ಮನಸ್ಸಿನಲ್ಲೇ ಬೈಯುತ್ತ ರಸ್ತೆಯತ್ತ ಹೊರಟ ಸ್ವಲ್ಪ ಹೊತ್ತಿನಲ್ಲೇ ರಸ್ತೆಗೆ ತಲಪಿಯಾಯಿತು ಅಲ್ಲಿಯೂ ಯಾರೂ ಅವನ ಕಣ್ಣಿಗೆ ಕಾಣಲಿಲ್ಲ. ಇನ್ನೂ ಸ್ವಲ್ಪ ಮುಂದೆ ಹೋದ. ಆಗ ರಸ್ತೆಯ ಎಡಸಕ್ಕದಲ್ಲಿ ಯಾರದೋ ಕಾರು ನಿಂತಿತ್ತು. ಅದು ಚೌಡಪ್ಪನವರ ಕಾರು ಎಂದು ಗುರುತಿಸಲಿಕ್ಕೂ ಅವನಿಗೆ ಬಹಳ ಹೊತ್ತು ಹಿಡಿಯಲಿಲ್ಲ. ಅದನ್ನು ಕಂಡೊಡನೆ ಸಿದ್ದಪ್ಪ ಜೋರಿನಿಂದ ಹೆಜ್ಜೆ ಹಾಕುತ್ತ ಅಲ್ಲಿಗೆ ಹೋದ. ಕೂಡಲೆ ಒಳಗೆ ಇಣಿಕಿಯೂ ನೋಡಿದ. ಮುಂದಿನ ಸೀಟಿನಲ್ಲಿ ಚೌಡಪ್ಪ ಕೂತಲ್ಲೇ ನಿದ್ದೆ ಹೋಗಿದ್ದು ಅವನಿಗೆ ಕಂಡಿತು. ಅಂತೇ ಹಿಂದಿನ ಸೀಟಿನಲ್ಲಿ ಆ ಮುದುಕಿಯೂ ಮುದುಡಿಕೊಂಡು ಮಲಗಿದ್ದನ್ನು ಸಿದ್ದಪ್ಪ ಕಂಡ. "ಅವಸರ ಯಾಕೆ ಮಾಡುವುದು?" ಎಂದು ನಿಶ್ಚಯಿಸಿ ಕಿಸೆಯೊಳಗಿಂದ ಗೋಲ್ಡ್‌ಫ್ಲ್ಯಾಕ್ ಸಿಗರೇಟು ತೆಗೆದು ಸೇದುತ್ತ ಕುಳಿತ. ಸುಂದರಿಯ ಮನೆಗೆ ಒಯ್ದ ಬಾಟಲಿಯನ್ನು ತಾನೇ ಖಾಲಿ ಮಾಡಿದ. ಮತ್ತೊಂದು ಸಿಗರೇಟು ಹೊತ್ತಿಸಿ ಹಾಯಾಗಿ ಹೊಗೆ ಬಿಡುತ್ತ ಆ ಕಾರಿನ ಮಡ್‌ಗಾರ್ಡಿನ ಮೇಲೆ ವಿಶ್ರಾಂತಿ ತೆಗೆದುಕೊಳ್ಳ ಹತ್ತಿದ. ಎಷ್ಟೋ ಹೊತ್ತು ಕಳೆಯಿತು. ಆದರೂ ಚೌಡಪ್ಪ ಏಳಲಿಲ್ಲ.

ಕಿಸೆಯೊಳಗಿನ ಸಿಗರೇಟಿನ ಪ್ಯಾಕು ಬರಿದಾಯಿತು. ಕಾರಣ "ಇನ್ನೇನು ಮಾಡುವುದು ?" ಎಂದು ಅವನಿಗೆ ತಿಳಿಯಲಿಲ್ಲ. ಹಾಗೇ ಕೈಗಡಿಯಾರ ನೋಡಿದ. ಮೂರು ಗಂಟೆಯಾಗಿತ್ತು ಆದರಲ್ಲಿ. "ಇನ್ನು ಬಹಳ ಹೊತ್ತು ಕೂತು ಪ್ರಯೋಜನವಿಲ್ಲ" ಎಂದು ನಿರ್ಧರಿಸಿ ಚೌಡಪ್ಪನವರನ್ನು ಎಬ್ಬಿಸುವ ಉಪಾಯ ಹೂಡಿದ. ಆತ ಹತ್ತು ನಿಮಿಷಗಳ ವರೆಗೆ ಒಂದೇಸವನೆ ಹಾರ್ನ ಮಾಡಿದರೂ ಚೌಡಪ್ಪನವರ ನಿದ್ದೆ ಬಿಡಲಿಲ್ಲ. ಆಮೇಲೆ ಮತ್ತೊಂದು ಹಾರ್ನನ್ನು "ಪೋಂಕ್" "ಪೋಂಕ್" ಎಂದು ಒದರಾಡಿಸಿದ. ಆಗ ಮಾತ್ರ ಚೌಡಪ್ಪ "ಮುದುಕೀ, ಮುದುಕೀ" ಎಂದು ಕಣ್ಣು ತೆರೆದು ಹಿಂದೆಮುಂದೆಲ್ಲ ನೋಡಿದರು.

"ಯಾರು ಸಿದ್ದನೇ ?" ಎಂದು ಆಕಳಿಸುತ್ತ ಕೇಳಿದರು.

"ಹೌದು"

"ಹೋದ ಕೆಲಸವೇನಾಯಿತು ?"

"ಮೊದಲು ಆ ಮುದುಕಿಯನ್ನು ಎಬ್ಬಿಸೋಣ. ಅಬ್ಬ! ಅವಳಿಗೆ ನಿದ್ದೆ ಹಿಡಿದದ್ದೆ !" ಎಂದು ಅವಳನ್ನು ಎಬ್ಬಿಸಿಯಾಯಿತು.

"ಡ್ರಾಯ್ವರ್ ?" ಎಂದನು ಸಿದ್ದಪ್ಪ.

"ಅವನನ್ನು ಮನೆಗೆ ಕಳುಹಿಸಿದ್ದೇನೆ."

"ಈಗ ಟೀಮು (Time) ಏನಾಯಿತೋ ಸಿದ್ದಣ್ಣಾ ?" ಎಂದು ಆಕಳಿಸುತ್ತ ಮುದುಕಿ ಕೇಳಿದಳು "ಅಯ್ಯೋ ಚಳಿಯೇ" ಎನ್ನುತ್ತ ಆಕೆ ನಡುಗುತ್ತಲೂ ಇದ್ದಳು.

"ಮೂರೂಕಾಲು ದಾಟಿತು" ಎಂದನು ಸಿದ್ದಪ್ಪ.

"ಆ ಬಾಟ್ಲಿಯೊಳಗೇನಾದರೂ ಉಳಿದಿದ್ದರೆ ಅವಳಿಗೆ ಕೊಡು ಸಿದ್ದ. ಚಳಿಯೆಲ್ಲ ಓಡಿ ಹೋಗುತ್ತದೆ. ಉಂಟೋ ?" ಎಂದರು ಚೌಡಪ್ಪ. "ಹೌದಣ್ಣಾ ಸಿದ್ದಣ್ಣಾ ಉಂಟೇ ? ಇದ್ದರೆ ತಾ ಇಲ್ಲಿ" ಎಂದು ಮುದುಕಿಯೂ ನಾಲಗೆ ಉದ್ದ ಮಾಡಿಯೇ ಕೇಳಿದಳು. "ಬಾಟ್ಲಿಯೊಳಗಿರೋದು ಬಿಟ್ಟು ಬಾಟ್ಲಿ ಸಹಿತ ಉಳಿಯಲಿಲ್ಲ" ಎಂದು ನಿರುತ್ಸಾಹದಿಂದಲೇ ಹೇಳಿದ ಸಿದ್ದಪ್ಪ.

"ಇಲ್ಲದಿದ್ದರೆ ಸಾಯಲಿ ಬಿಡು. ನೀನು ಹೋದ ಕೆಲಸ ಏನಾಯಿತು ?" ಎಂದು ಮುದುಕಿ ಆತುರತೆಯಿಂದ ಕೇಳಿದಳು. "ಹೌದಪ್ಪಾ ಸಿದ್ಧಾ, ಅದನ್ನು ಹೇಳೋ ಮೊದಲು" ಎಂದು ಚೌಡಪ್ಪನವರೂ ಅವಸರ ಮಾಡಿದರು.

"ಏನೆಂದು ಹೇಳುವುದು ಅದನ್ನೆಲ್ಲ ? ನನ್ನ ನಸೀಬ ನೆಟ್ಟಗೆ ಇದ್ದುದರಿಂದ ಪಾರಾಗಿ ಬಂದೆ. ದೊಡ್ಡ ಒಂದು ಕಥೆನೇ ಹೇಳಬಹುದು ಆ ವಿಷಯದ ಬಗ್ಗೆ" ಎನ್ನುತ್ತ ಸಿದ್ದಪ್ಪ ಸ್ಟೇರಿಂಗ ಚಕ್ರದ ಹತ್ತಿರ ಕುಳಿತುಕೊಂಡು ಕಾರಿನ ಬಾಗಿಲು ಮುಚ್ಚಿದ. ಅವನ ಬದಿಯಲ್ಲಿಯೇ ಚೌಡಪ್ಪನವರು ಆಸನ ಹಾಕಿದ್ದರು. ಮುದುಕಿ ಹಿಂದಿನ ಸೀಟಿನಲ್ಲೇ ಮುಂದೆ ಬಗ್ಗಿ "ಏನೋ ಸಿದ್ದಣ್ಣಾ ?" ಎನ್ನುತ್ತ ಅಧಿಕಪ್ರಸಂಗತನ ಮಾಡಿದಳು.

"ಹನ್ನೆರಡು ಗಂಟೆಗೆ ಹೋದವನು ಇಷ್ಟುರವರೆಗೆ ಅಲ್ಲೇನು ಮಾಡಿದಿ?" ಎಂದು ಚೌಡಪ್ಪ ಕೇಳಿದರು—ಕಾರಿನಲ್ಲಿ ಕೂತಲ್ಲಿಂದಲೇ.

"ಅದನ್ನೆಲ್ಲ ಸಾವಕಾಶ ಹೇಳುತ್ತೇನೆ. ಮೊದಲು ಹೇಗಾದರೂ ಹೋಗಿ ಮನೆಗೆ ಬೀಳುವ—ಸುರಕ್ಷಿತವಾಗಿ. ನನಗೆ ಎದೆ ನೋವಿನಿಂದ ಮಾತಾಡಲಿಕ್ಕೂ ಚೆನ್ನಾಗಿ ಬರುವುದಿಲ್ಲ. ಸಾವಕಾಶ ಆದ ಕಥೆಯನ್ನೆಲ್ಲ ಹೇಳುತ್ತೇನೆ. ನೋಡಿರಿ ನನ್ನ ಎದೆ !" ಎನ್ನುತ್ತ ಅಂಗಿಯ ಗುಂಡಿ ಬಿಚ್ಚಿ ತನ್ನ ಎದೆಯನ್ನು ತೋರಿಸಿದ. ಅವನೆದೆಗೆ ಒಂದು ಇಡ್ಡಲಿಯಷ್ಟು ದೊಡ್ಡ ಬೊಕ್ಕೆ ಬಂದಿತ್ತು. ಅದನ್ನು ನೋಡಿ ಚೌಡಪ್ಪನವರಿಗೂ ಮುದುಕಿಗೂ ಅವನ ಮೇಲೆ ಕರುಣೆ ಹುಟ್ಟಿತು.

"ಅದೇನಾದದ್ದು ?" ಎಂದು ಚೌಡಪ್ಪ ಗಾಬರಿಪಟ್ಟೇ ಕೇಳಿದರು.

"ಏನೆಂದು ಹೇಳುವುದು ? ಎಲ್ಲ ಮನೆಗೆ ಹೋದ ಮೇಲೆ ಹೇಳುತ್ತೇನೆ. ಒಟ್ಟಿಗೆ ನನ್ನ ನಸೀಬದಿಂದಲೇ ನಾನು ಬದುಕಿದೆ ! ....ಡ್ರಾಯ್ವರಿಲ್ಲದಿದ್ದರೆ ನಾನೇ ಗಾಡಿ ಹೊಡೆಯುತ್ತೇನೆ" ಎಂದು ಸಿದ್ದಪ್ಪ ಇಂಜನ್ ಸ್ಟಾರ್ಟ್ ಮಾಡಲು ಬಟನ್ ಒತ್ತಿದ.

"ಛೇ ಛೇ, ತಡಿ. ನಿನಗೆ ಡ್ರಾಯ್ವ ಮಾಡಲಿಕ್ಕೆ ತ್ರಾಸಾಗಬಹುದು. ಮತ್ತೆ ಎಲ್ಲಿಯಾದರೂ ಹಾರ್ಟ್ ಫೇಯಿಲ್ ಆದರೆ ನಮ್ಮ ಗತಿಯೇನು ?" ಎನ್ನುತ್ತ ಚೌಡಪ್ಪ ಅವನನ್ನು ತಡೆದರು.

"ನೀವೇನು ಹೆದರುವುದು ಬೇಡ. ನನಗೆ ಅಷ್ಟೇನು ಭಾರೀ ಪೆಟ್ಟಾಗಿಲ್ಲ. ಹಾಗೆಲ್ಲ ಪೆಟ್ಟು....ಆ....ಹೆಣ್ಣಿನಿಂದ ಹೊಡೆಯಿಸಿಕೊಳ್ಳುವ ಗಂಡಸೇ ನಾನು? ನಾನು ಕಾರ್ ಹೊಡೆಯುತ್ತೇನೆ ಬಿಡಿ."

"ಅವಸರ ಏನು? ಮೊದಲು ಹೋದ ಕೆಲಸ ಏನಾಯಿತು ಹೇಳು. ನಿನಗೆ ತ್ರಾಸಾಗದಂತೆ ಸಾವಕಾಶವಾಗಿ ಎಲ್ಲ ಸಂಗತಿ ವಿವರಿಸು" ಎಂದು ಚೌಡಪ್ಪ ಹೇಳಿದರು. "ಹೌದಪ್ಪಾ ಮೊದಲು ಆ ಸುದ್ದಿ ಹೇಳು" ಎನ್ನುತ್ತ ಮುದುಕಿಯೂ ಅವನನ್ನು ಬಲವಂತ ಪಡಿಸಿದಳು. ಆಗ ಸಿದ್ದಪ್ಪ ತನ್ನ ಸಾಹಸಗಳನ್ನು ಬಣ್ಣಿಸಬೇಕಾಯಿತು. ತಾನು ಮಾಡಿದ ಕಾರ್ಯವನ್ನು ಮುಚ್ಚಿ, ಬೇರೆಯೇ ಒಂದು ಕಥೆ ಹೆಣೆದು ಹೇಳಲಿಕ್ಕೆ ಪ್ರಾರಂಭಿಸಿದ:

"ಅವಳು ಬಾಗಿಲು ತೆರೆಯುವ ತನಕ ನೀವು ಅಲ್ಲಿಯೇ ಇದ್ದಿರಿ. ಆಮೇಲೆ ನೀವು ಹೋದಿರೇನೋ ಹೌದು. ಆದರೆ ಆಕೆ ನಿಮ್ಮನ್ನು ನೋಡುತ್ತ ಸ್ವಲ್ಪ ಹೊತ್ತು ನಿಂತಿದ್ದಳು. ಅವಳಿಗೆ ನಿಮ್ಮ ಗುರ್ತು ಸಿಕ್ಕಿರಲಿಕ್ಕಿಲ್ಲ. ಯಾಕಂದರೆ ಸಿನೇಮಾ ಬಿಡುವ ಹೊತ್ತಲ್ಲವೇ ಅದು? ಆದ್ದರಿಂದ ಸಿನೇಮಾದ ಮಂದಿಯೆಂದು ತಿಳಿದಿರಬಹುದು ಅವಳು. ಆಮೇಲೆ ನಾನು ಅವಳನ್ನು ಕರೆದು ಇಂಥಾ ಸಂಗತಿ ಹೀಗೆ ಹೀಗೆ ಎಂದು ವಿವರಿಸಿದೆ. ಅಂದರೆ ನನಗೂ ನಿಮಗೂ ಜಗಳಾಗಿತ್ತು. ಆದ್ದರಿಂದ ನೀವು ಅಲ್ಲಿ ಬರುತ್ತೀರೆಂದು ಹೆದರುವುದು ಬೇಡ. ಒಂದುವೇಳೆ ಬಂದರೂ ನಾನು ನಿಮಗೆ ಬುದ್ಧಿ ಕಲಿಸುತ್ತೇನೆ. ಅಲ್ಲದೆ ನೀವು ಮುನಸಿಪಾಲ್ಟಿಯ ಕೆಲಸದ ಮೇಲೆ ಪ್ರವಾಸಕ್ಕೆ ಹೋಗಿದ್ದೀರೆಂದು ಹೇಳಿದೆ. ಆಮೇಲೆ ನಾನು ಮೆಲ್ಲಕೆ ಎದ್ದು ಹೋಗಿ ಮುಂದಿನ ಕದಾ ಹಾಕಿಕೊಂಡು ಬಂದೆ. ಆಗ ಅವಳು ಸುಮ್ಮನೆ ಇದ್ದಳು. ಅವಳ ಆಗಿನ ಹಾವ ಭಾವ ನೋಡಿ ಅವಳು ನಿಜಕ್ಕೂ ನನ್ನೊಡನೆ ಪ್ರೀತಿ ಮಾಡುತ್ತಾಳೆಂದೇ ನನಗೆ ಧೈರ್ಯವಿತ್ತು. ಮೊದಮೊದಲು ಒಂದಿಷ್ಟು ನಕರಾ ಮಾಡಿದರೂ ಆಮೇಲೆ ಮಾತ್ರ ಖರೇ ಸಾನಿಯ ಹಾಗೆ ನನ್ನನ್ನು ನೋಡುತ್ತ ನಿಂತಿದ್ದಳು. ನಾನೂ ಅವಳ ಹತ್ತಿರ ಆಗಾಗ ಹೋಗಿ ನಿಂತು, ಪುನಃ ಬರುತ್ತಿದ್ದೆ. ಆದರೆ ಅವಳ ಬದಿಯಲ್ಲಿ ಏನಿದೆಯೆಂಬುದನ್ನು ನಾನು ನೋಡಲಿಕ್ಕೆ ಹೋಗಲಿಲ್ಲ. ಆದರಿಂದಲೇ ಇಷ್ಟೆಲ್ಲ ಪರಿಸ್ಥಿತಿ ವಿಕೋಪಕ್ಕೆ ಮುಟ್ಟಿತೆನ್ನಬೇಕು.

" ನಾನು ಆಮೇಲೆ ನೀವು ಕೊಟ್ಟ ಆ ನೂರರ ನೋಟು ಒಯ್ದು ಅವಳಿಗೆ ಕೊಟ್ಟು ಅವಳ ಹತ್ತಿರವೇ ನಿಂತೆ! 'ರಮಣೀ' ಎಂದು ಕರೆದೆ. ಆಗ ಮಹಾರಾಯರೇ! ಅವಳು ಎಲ್ಲಿಂದ ಆ ಹಾರೇಕೋಲು ತೆಗೆದಳೋ ದೇವ ರಿಗೆ ಗೊತ್ತು! ಬಡ್ ಬಡ್ ಎಂದು ನನ್ನ ಎದೆಗೆ ಎರಡು ಸಲ ಬಿಟ್ಟಳು. ನೋಟನ್ನು ಹರಿದು ಚಲ್ಲಿದಳು. ನಾನು ಒಯ್ದ ಬಾಟ್ಲಿಯನ್ನು ಹೊರಗೆ ತೂರಿಬಿಟ್ಟಳು ಬಾಯಿಗೆ ಬಂದಂತೆ ಬಯ್ಯುತ್ತಿದ್ದಳು. ಆದರೆ ಅವಳು ಕೊಟ್ಟ ಪೆಟ್ಟಿನಿಂದ ನನಗೆ ಒಮ್ಮೆಲೇ ಜೀವ ಯಮಲೋಕಕ್ಕೆ ಹೋದ ಹಾಗಾ ಯಿತು! ಅಲ್ಲಿಯೇ ಅವಳ ಕಾಲುಬುಡದಲ್ಲಿ ಕುಸಿದು ಬಿದ್ದೆ. ಆಗ ಅವಳು ತನ್ನ ಎಡಕಾಲಿನಿಂದ ನನ್ನನ್ನು ಒದೆಯಹೋದಳು. ಆದರೆ ಆಗ ಮಾತ್ರ ನನ್ನ ಗಂಡಸುತನ ಕೆರಳಿತು. 'ಒದ್ದರೆ ನಿನ್ನನ್ನು ಸೀಳಿ ತಿನ್ನುತ್ತೇನೆ ಸೂಳೇ ಮಗಳೇ' ಎಂದು ಎಲ್ಲಿಂದಿಲ್ಲದ ತ್ರಾಣ ಎಳೆದು ತಂದು ಹೇಳಿ ಏಳಹೋದೆ. ಅವಳಿಗೂ ಸ್ವಲ್ಪ ಹೆದರಿಕೆಯಾಗಿರಬಹುದು. ಪುಣ್ಯಕ್ಕೆ ಅವಳು ಒದಿಯುವು ದನ್ನೊಂದು ಮಾಡಲಿಲ್ಲ. ಆಮೇಲೆಯಾದರೂ ಸುಮ್ಮನೆ ಬಿಟ್ಟಳೋ? ಇಲ್ಲ. ಒಂದೇಟು ಅದೇ ಹಾರೆಕೋಲಿನಿಂದ ಬಿಗಿದು—ಒಳಗೆ ಹೊರಟಳು. 'ಅಯ್ಯೋ ಒಂದು ವಾಟೆ ನೀರಾದರೂ ಕೊಡು' ಎಂದು ನಾನು ಅಂಗಾತ ಮಲಗಿದಲ್ಲಿಂದಲೇ ಕೇಳಿಕೊಂಡೆ. 'ಅಯ್ಯೋ ಅಯ್ಯೋ' ಎಂದು ನರಳು ತ್ತಿದ್ದೆ. ಅವಳು ಸಿಕ್ಕಂತೆ ಬಯ್ಯುತ್ತ ನಾನಿರುವ ಪಡಸಾಲೆಯ ಬಾಗಿಲು ಹಾಕಿ ಒಳಗೆ ಹೋಗಿಬಿಟ್ಟಳು. ನನ್ನ ಜನ್ಮದಲ್ಲೇ ನಾನು ಹೀಗೆ ಎಂದೂ ಹೆಂಗಸರಿಂದ ಏಟು ತಿಂದವನಲ್ಲ. ನೋಡಿ ಚೌಡಪ್ಪಣ್ಣಾ, ನಿಮ್ಮ ಸಲುವಾಗಿ ಹೀಗಾಯಿತು.

" ಅವಳು ಬಾಗಿಲು ಹಾಕಿ ಒಳಗೆ ಹೋದವಳು ಆಮೇಲೆ ಹೊರಗೆ ಬರಲಿಲ್ಲ. ನನ್ನ ಜೀವ ಉಳಿಯುವುದಿಲ್ಲವೆಂದೇ ನನಗೆ ಅನಿಸಿತು. ಎದೆ ಯಲ್ಲಿ ಅಷ್ಟು ಸಂಕಟವಾಗತೊಡಗಿತ್ತು. ಒದರಲಿಕ್ಕೆ ಹೋದರೂ ಬಾಯಿಗೆ ಶಕ್ತಿ ಸಾಲದಾಯಿತು. ಏಳಲಿಕ್ಕೆ ಹೋದರೂ ತ್ರಾಣ ಬರಲಿಲ್ಲ. ಹೆಣ್ಣು ನನ್ನನ್ನು ಕೊಂದಿತೆಂದೇ ನಿರ್ಧರಿಸಿದೆ. ಆ ಸಿಮೆಂಟಿನ ನೆಲದ ಮೇಲೆ ಹಾಗೇ ಮಲಗಿದೆ. ಯಾರ ಸದ್ದೂ ಕೇಳಲಿಲ್ಲ. ಎರಡು ಗಂಟೆ ಹಾಗೇ ಕಳೆಯಿತು. ಆಗ ಸ್ವಲ್ಪ ಮೈಯಲ್ಲಿ ಬಲ ಬಂದಂತೆ ಅನಿಸಿತು. ಪ್ರಯತ್ನಪೂರ್ವಕವಾಗಿ

ಎದ್ದು ನಿಂತೆ. 'ಇನ್ನು ಇಲ್ಲಿ ನಿಂತು ಪ್ರಯೋಜನವಿಲ್ಲ' ಎಂದು ಬಗೆದು ಹೇಗಾದರೂ ನೀವು ಇದ್ದಲ್ಲಿಗೆ ಬಂದು ಬಿದ್ದರೆ ಸಾಕು ಎಂದು ಯೋಚಿಸಿ ಮೆಲ್ಲನೆ ಅಲ್ಲಿಂದ ಹೊರಟೆ. ದಾರಿಯಲ್ಲಿ ಕೂಡುತ್ತ ಕೂಡುತ್ತ ಬಂದುದರಿಂದ ಇಷ್ಟು ಹೊತ್ತಾಯಿತು. ರಸ್ತೆಗೆ ಬರುವಾಗ ಈ ಕಾರೂ ಕಾಣಿಸಲಿಲ್ಲ. ಇನ್ನು ನಡೆದುಕೊಂಡೇ ಹೋಗುವುದೆಂದು ಎಣಿಸಿ ಹಾಗೇ ಹೆಜ್ಜೆಯ ಮೇಲೆ ಹೆಜ್ಜೆ ಇಡುತ್ತ ಬಂದೆ. ದೇವರ ಪುಣ್ಯದಿಂದ ಕಾರು ಕಾಣಿಸಿತು. ಇನ್ನು ಬದುಕಿದೆಯೆಂದು ಧೈರ್ಯ ಬಂತು. ಆದರೆ ಕಾರಿನ ಹತ್ತಿರ ಬಂದು ನಿಮ್ಮನ್ನು ಎಬ್ಬಿಸಲು ಒದರಲಿಕ್ಕೂ ನನಗೆ ಶಕ್ತಿ ಸಾಕಷ್ಟು ಇರಲಿಲ್ಲ. ಅದಕ್ಕಾಗಿಯೇ ಹಾರ್ನ ಮಾಡಿದೆ. ಹಾರ್ನ ಮಾಡುವ ಮೊದಲು ಎಷ್ಟೋ ಹೊತ್ತು ಈ ಮಡ್ಗಾರ್ಡಿನ ಮೇಲೆ ಕೂತಿದ್ದೆ............ಒಟ್ಟಾರೆ ಅವಳು ನನ್ನನ್ನು ಕೊಲ್ಲದೆ ಬಿಟ್ಟದ್ದು ನನ್ನ ದೇವರ ಪುಣ್ಯವೇ............ ನಿಮ್ಮ ಸಲುವಾಗಿ ನಾನು ಇಷು ಕೆಲಸ ಮಾಡಿದೆನೇ ಹೊರತಾಗಿ—ಬೇರೆ ಯಾವ ಅಪ್ಪ ಹೇಳಿದ್ದರೂ ನಾನು ಮುಂದೆ ಹೆಜ್ಜೆ ಕೀಳುತ್ತಿರಲಿಲ್ಲ...............ಇದಿಷ್ಟು—ಸಣ್ಣದರಲ್ಲಿ—ನಾನು ಮಾಡಿದ ಸಾಹಸಗಳ ಕಥೆ ಚೌಡಪ್ಪಣ್ಣಾ" ಎಂದು ಸಿದ್ದಪ್ಪ ಬಾಯಿ ಮುಚ್ಚಿದೊಡನೆ ಮುದುಕಿ ತಟ್ಟನೆ, "ನಿನ್ನ ಹತ್ತಿರ ಬಂದು ಕೂತಾಗ ನೀನು ಅವಳನ್ನು ಬಿಡಬಾರದಿತ್ತು. ನೂರರ ನೋಟೂ ಬಾದ್ ಮಾಡಿದಳು ಭೋಸುಡಿ!" ಎಂದು ನೂರು ರೂಪಾಯಿ ನೀರಾದುದಕ್ಕೆ ವ್ಯಥೆ ವ್ಯಕ್ತಪಡಿಸಿದಳು.

"ಅಂತೂ ನಿನ್ನೊಡನೆ ಅವಳು ಪ್ರೀತಿಸಲಿಲ್ಲವೆನ್ನು" ಎಂದು ಚೌಡಪ್ಪ ತಲೆ ಹಾಕಿ, ಸ್ವಲ್ಪ ವಿಚಾರ ಮಾಡಿ, "ಎಂದ ಮೇಲೆ, ಅವಳು ಬೇರೆ ಯಾರನ್ನೂ ಇಟ್ಟುಕೊಂಡಿಲ್ಲ ಎಂದಂತಾಯಿತು. ಹೌದೋ ಅಲ್ಲವೋ ಸಿದ್ದಾ?" ಎಂದು ಪ್ರಶ್ನಿಸಿದರು.

"ಆ ಬಗ್ಗೆ ನಾನು ಎಲ್ಲಿ ಬೇಕಾದರೂ ಖಾತ್ರಿ ಕೊಡುತ್ತೇನೆ. ಅವಳು ಫಕ್ಕನೆ ಬೇರೆಯವರೊಡನೆ ಸಂಬಂಧ ಇಟ್ಟುಕೊಂಡಿದ್ದಳು ಎಂದಾದರೆ-ನನ್ನೊಡನೆ ಆಕೆ ಪ್ರೀತಿಸುತ್ತಿದ್ದಳು. ಯಾವಾಗ ಒಬ್ಬಳು ಶರೀರ ವ್ಯಾಪಾರಕ್ಕೆ ನಿಂತಳೆಂದ ಮೇಲೆ ಅವಳಿಗೆ ಯಾರಾದರೇನು? ನಾನು ಹೋದರೂ ಅವಳು 'ಬಾ ರಾಜಾ' ಎನ್ನುತ್ತಾಳೆ, ನೀವು ಹೋದರೂ 'ಬಾ ರಾಜಾ' ಎನ್ನುತ್ತಾ

ಳಿಯೇ. ಆದರೆ ಅವಳ ಆ ಹುಚ್ಚು ವರ್ತನೆ ನೋಡಿದರೆ, ನನಗೆ ನೀವು ಆಗ ಹೇಳಿದ್ದೀರಲ್ಲ—ಆ ವಿಷಯ ಅಲ್ಲವೇ ಅಲ್ಲ ಎಂದು ಎನಿಸುತ್ತದೆ" ಎಂದು ಸಿದ್ದಪ್ಪ ತನ್ನ ಪ್ರಾಮಾಣಿಕವಾದ ಅಭಿಪ್ರಾಯವನ್ನು ಅವರ ಮುಂದಿಟ್ಟ.

ಆಗ ಮುದುಕಿ, "ನನಗೆ ಮತ್ತೇನು ಅಲ್ಲ, ಆ ನೂರು ರೂಪಾಯಿ ನೋಟು ಯಾರಿಗೂ ಇಲ್ಲದೆ ಹಾಳಾಗಿ ಹೋಯಿತಲ್ಲಾ ಎಂದು ಬಹಳ ಕೆಡಕೆನಿಸುತ್ತದೆ" ಎಂದು ತನ್ನ ವ್ಯಥೆಯನ್ನೇ ಮುಂದೆ ಮಾಡಿದಳು.

"ನೀನು ಮತ್ತೆ ನಾಳೆ ಹೋಗಿ ಅವಳ ಮುಂದೆ ಈ ಸುದ್ದಿ ಹೇಳಿದರೆ ಜಾಗ್ರತೆ ನೋಡು ಮುದುಕೀ? ನೋಟಂತೆ ನೋಟು! ಅಂಥಾ ನೋಟು ಎಷ್ಟು ಬರುತ್ತಾವೋ ಎಷ್ಟು ಹೋಗುತ್ತಾವೋ?" ಎಂದು ಸಿದ್ದಪ್ಪ ಮುದುಕಿಗೆ ಬೆದರಿಸಿ ಅವಳ ಬಾಯಿ ಮುಚ್ಚಿಸಿದ. "ಇಲ್ಲಪ್ಪಾ ಇಲ್ಲ ನಾನು ತುಟಿ ಬಿಚ್ಚೋದಿಲ್ಲ" ಎಂದು ಮುದುಕಿ ಸುಮ್ಮನೆ ಕುಳಿತಳು. ಮುಂದೆ ಆಕೆ ನೂರರ ನೋಟಿಗಾಗಿ ಮರುಗಲಿಲ್ಲ.

"ಒಟ್ಟಿಗೆ ಇಷ್ಟೊಂದು ಖಾತ್ರಿಯಾಯಿತು ಸಿದ್ದಾ—ಅವಳು ಬೇರೆ ಯಾವ ಗೆಣೆಯನ್ನೂ ಗಂಟು ಹಾಕಿಕೊಂಡಿಲ್ಲ. ಎಂದ ಮೇಲೆ ಅವಳಿಗೆ ಏನೋ ಒಂದು ಮಿಸ್ಟೇಕ್ ಆಗಿರಬೇಕು..............ಬಹುಶಃ ಎಲ್ಲ ಆ ಸಣ್ಣ ಹುಡುಗಿಯಿಂದಲೇ ಇಷ್ಟೆಲ್ಲ ಕೆಲಸ ಕೆಡುವುದು" ಎಂದು ಹೇಳಿ ಚೌಡಪ್ಪ ಹೊರಗೆ ಉಗುಳಿದರು. "ಇನ್ನು ಹೋಗೋಣ" ಎಂದು ಸಿದ್ದಪ್ಪ ಮೋಟರ್ ಸ್ಟಾರ್ಟ್ ಮಾಡಿದ. ಮೋಟರು ಭರನಾಗಿ ಸಾಗಿತು. "ನೀನು ಬೇಕಾದರೆ ನಮ್ಮ ಮುನಿಸಿಪಾಲ್ಟಿ ದವಾಖಾನೆಯೊಳಗೆ ಟ್ರೀಟ್‌ಮೇಟ್ ತಕೋ. ನಾನು ಡಾಕ್ಟರನಿಗೆ ಚೀಟಿ ಕೊಡುತ್ತೇನೆ" ಎಂದು ಸಿದ್ದಪ್ಪನನ್ನು ಉಪಚರಿಸಿದರು ಚೌಡಪ್ಪ. ಅವರ ಮನೆಯೂ ಬಂದಿತು. ಚೌಡಪ್ಪ ಮನೆಗೆ ಹೋದರು. "ಮುದುಕಿಯನ್ನು ಕರೆದುಕೊಂಡು ನಿನ್ನ ಮನೆಗೆ ಒಯ್ಯು" ಎಂದು ಸಿದ್ದಪ್ಪನಿಗೆ ಆಜ್ಞೆಯಾಗಿತ್ತು. ಆತ ಹಾಗೆ ಮಾಡಿದ. ಚೌಡಪ್ಪನವರನ್ನು ಕಾಡಿಸುತ್ತಿದ್ದ ಪ್ರಬಲವಾದ ಒಂದು ಸಂಶಯ ಸಿದ್ದಪ್ಪನ ಮಾತಿನಿಂದ ಮಾಯವಾಯಿತು.

ನಾಲ್ಕನೆಯ ಅಧ್ಯಾಯ

ಹಾಸಿಗೆಯಿಂದ ಏಳಬೇಕಾದರೂ ಸುಂದರಿಗೆ ಕಷ್ಟವಾಯಿತು. ನೈನೋವು ಅಷ್ಟು ಇತ್ತು! "ಅಯ್ಯೋ ನೈನೋವೇ!" ಎನ್ನುತ್ತ ಬಹು ಪ್ರಯಾಸದಿಂದ ಎದ್ದಳಾಕೆ. ಇನ್ನೂ ಬೆಳಗಿನ ಆರು ಗಂಟೆಯಾಗಿರಲಿಲ್ಲ. ಹೊರಗೆ ಇರುವ ಒಂದೆರಡು ಮರಗಳಿಂದ ಕಾಗೆಗಳು ಒಂದೇಸವನೆ ಕೂಗುತ್ತಿದ್ದವು. ಪದ್ಧತಿಯಂತೆ ಹಾಸಿಗೆಯ ಮೇಲೆ ಕೂತೇ ತನ್ನ ಇಷ್ಟದೇವನಾದ ಹನುಮನಿಗೆ ಪ್ರಾರ್ಥನೆ ಸಲ್ಲಿಸಿದಳು. ಆದರೆ ಇವತ್ತಿನ ಪ್ರಾರ್ಥನೆಯಲ್ಲಿ ಒಂದು ಹೊಸ ವಾಕ್ಯವನ್ನು ಸೇರಿಸಿದ್ದಳು. "ಆ ಸಿದ್ಧ ಸತ್ತು ಮಣ್ಣಾಗಿಂದು ಹೋಗಲಿ!" ಎಂದು ಅವಳ ಬೇಡಿಕೆಯಿತ್ತು ಹನುಮನಿಗೆ. ಅಂತೇ ತನ್ನ ಮುಂದಿರುವ ರುದ್ರಹನುಮನ ಚಿತ್ರಕ್ಕೆ ನಮಸ್ಕಾರ ಮಾಡಿದಳು. ರವಿವರ್ಮನ ಆ ಅಪೂರ್ವದ ಹನುಮ ಸುಮ್ಮನೆ ಇದ್ದ. ಸರಿ, ಅಲ್ಲಿಂದ ಥಟ್ಟನೆ ಎದ್ದು ತನ್ನ ಮುದ್ದು ಕಂದನತ್ತ ತೆರಳ ಹೋದಳು. ಆದರೆ ಅವಳು ಬಯಸಿದಷ್ಟು ಬೇಗ ಅವಳ ಅವಯವಗಳು ಕೆಲಸ ಮಾಡದಾದವು. ನೈ ನೋಯತೊಡಗಿತು. ಆಗ ನಿನ್ನೆ ರಾತ್ರಿಯ ಘೋರ ಸನ್ನಿವೇಶ ಕಣ್ಣಾಮುಂದೆ ಕಟ್ಟಿತು. ಸಿಟ್ಟಿನಿಂದ ಕಿಡಿಕಿಡಿಯಾದಳಾಕೆ. "ಹನುಮನಿದ್ದರೆ ನೋಡಿಕೊಂಡಾನು!" ಎಂದು ಎಲ್ಲವನ್ನೂ ಅವನ ತಲೆಯ ಮೇಲೆ ಹೇರಿದಳು. ಆ ಕ್ರೂರ ಸನ್ನಿವೇಶವನ್ನು ನೆನೆಯುವಾಗ ಆಕೆ ಉಗ್ರಕೋಪಾಲಂಕೃತಳಾಗಿಯೇ ಇರುತ್ತಿದ್ದಳು. ಅವಳ ದೃಷ್ಟಿಯಲ್ಲಿ ಅಸೂಯೆ ತುಂಬಿರುತ್ತಿತ್ತು. ಆದರೆ ಆಕೆ ನಿಸ್ಸಹಾಯಳಾಗಿದ್ದಳು.

ಹೇಗಾದರೂ ಮಾಡಿ ಮಗಳ ಹತ್ತಿರ ಹೋಗಿ ನಿಂತಳು. ಅವಳು ಸುಖವಾಗಿ ನಿದ್ರಿಸುತ್ತಿರುವುದನ್ನು ನೋಡಿಯೇ ಸುಂದರಿಯ ನೈನೋವು ಕಡಿಮೆಯಾಯಿತು. ಕ್ಷಣಕಾಲವಾದರೂ ಮನಸ್ಸಿಗೆ ತೃಪ್ತಿ ತಂದುಕೊಂಡಳು. "ಮಲಗಲಿ" ಎಂದು ಅಲ್ಲಿಂದ ಹೊರಗೆ ಬಂದು ಮುಂದಿನ ಬಾಗಿಲು ತೆರೆದಳು. ಆಗ ಎದುರಿಗೇ ಚೌಡಪ್ಪ ಪ್ರಸನ್ನವದನರಾಗಿ ಅಂಗಳದಿಂದ ಬರತೊಡಗಿದ್ದರು. ಅವರನ್ನು ಹೇಗೆ ಸ್ವಾಗತಿಸಬೇಕೆಂದು ಸುಂದರಿಗೆ ತಿಳಿಯದ್ದಾ

ಯಿತು. ಮುಖದ ಮೇಲೆ ಎಲ್ಲಿಂದಿಲ್ಲದ ನಗು ತಂದುಕೊಂಡು ಅವರನ್ನು ನೋಡದೆ ಕೆಳಗೆ ಮುಖ ಹಾಕಿ ಬದಿಗೆ ಸರಿದು ನಿಂತು ಅವರಿಗೆ ದಾರಿಬಿಟ್ಟಳು. ಚೌಡಪ್ಪ ತಮ್ಮ ಸ್ಥಾನವನ್ನು ಸ್ವೀಕರಿಸಿದರು. ಒಳಗೆ ಹೋಗದೆ ಹೊರಗಿನ ಪಡಸಾಲೆಯಲ್ಲೇ ಕೂತರು.

ಅವರನ್ನು ನೋಡಿದೊಡನೆ ಸುಂದರಿಗೆ ಆ ನೀಚನ ನೆನಪಾಯಿತು ತಾನು ಅಪರಾಧ ಮಾಡಿದೆನೆಂದು ಸ್ವಲ್ಪ ಸಮಯ ಅವಳು ಕೊರಗಿದಳೇನೋ ಹೌದು. ಆದರೆ ಅವನ ಅತ್ಯಾಚಾರ ನೆನೆದು ಕ್ರೋಧಾಂಧಳಾಗದೆ ಬಿಡ ಲಿಲ್ಲ ಕೂಡಲೇ ತನ್ನದೇನೂ ತಪ್ಪು ಇಲ್ಲ ಎಂಬ ನಿರ್ಧಾರಕ್ಕೂ ಬಂದಾ ಯಿತು. ಆತ ಸುಳ್ಳು ಹೇಳಿ ಬಲಾತ್ಕಾರದಿಂದ ಪೀಡಿಸಿದನೆಂದು ಅವನ ಮೇಲೆಯೇ ಪಾಪ ಹೊರಿಸಿದಳು. ಆದರೂ ಅವಳ ಮನಸ್ಸಿನೊಳಗಿನ ಹೋರಾಟ ಮುಖದ ಮೇಲೆ ಪ್ರಕಟವಾಯಿತು. ಅದನ್ನು ಅರಿಯುವಷ್ಟು ಚಾಣಾಕ್ಷರು ಚೌಡಪ್ಪನವರಲ್ಲ. ಅವರ ತಲೆಯೊಳಗೆ ಇದ್ದ ವಿಚಾರವೇ ಬೇರೆ. ಕಾರಣ " ಈಗ ಇವಳೊಡನೆ ಹೇಗೆ ಮಾತಾಡಬೇಕು ? " ಎಂದು ಚಿಂತೆಗೊಳಗಾದರು ಅವರು.

" ಕೂತಿರಿ, ನಾನು ಈಗ ಬರುತ್ತೇನೆ " ಎಂದು ಚೌಡಪ್ಪನವರಿಗೆ ಹೇಳಿ ಒಳಗೆ ಹೋಗಿ ಸ್ಟೋವ್ ಹಚ್ಚಿ ಚಹಾ ಮಾಡಲು ನೀರು ಇಟ್ಟು, ಪ್ರಾತರ್ವಿಧಿ ಗಳನ್ನು ತೀರಿಸಹೋದಳು. ಆಗ ಅವಳ ಮನೆಯ ಹಿಂದೆ ಇರುವ ಆ ಮುದು ಕಿಯ ಮನೆಯ ಬಾಗಿಲು ತೆರೆದದ್ದು ಕಂಡಿತು. "ಇವಳು ಯಾವಾಗ ಬಂದಳು? ಎರಡು ತಿಂಗಳು ಬರುವುದಿಲ್ಲೆಂದು ಹೇಳಿ ಹೋದವಳು ಒಂದೇ ತಿಂಗಳಲ್ಲಿ ಬಂದಳಲ್ಲ! ಈಹೊತ್ತಿಗೆ ಹೇಗೆ ಬಂದಳು ? " ಎಂದು ವಿಚಾರಿಸುತ್ತ ಸುಂದರಿ ಆವಳ ಮನೆಯ ಜಗುಲಿಗೆ ತಲುಪಿಯಾಯಿತು.

" ಮುದುಕೀ " ಎಂದು ಕರೆದಳು ಸುಂದರಿ.

" ಯಾರು ? ಸುಂದರಿಯೋ ? " ಎನ್ನುತ್ತ ಹೊರಗೆ ಬಂದಳು ಆ ಮುದುಕಿ. ಆಕೆ ಒಳಗೆ ಕಸಗುಡಿಸುವ ಕೆಲಸ ನಡೆಸಿದ್ದಳು. ಒಂದು ತಿಂಗಳ ವರೆಗೆ ಮನೆಗೆ ಬೀಗ ಹಾಕಿ ಹೋದುದರಿಂದ ಒಳಗೆಲ್ಲ ಕಸ ಬಿದ್ದಿತ್ತು. ನೆಲದ ಮೇಲೆಲ್ಲ ಧೂಳಿನ ಹಾಸಿಗೆಯೇ ಹಾಸಿದಂತಾಗಿತ್ತು. ಅದನ್ನೆಲ್ಲ ಸ್ವಚ್ಛ ಮಾಡುತ್ತ ಆಕೆ ಇದ್ದಳಷ್ಟೆ.

“ ಯಾವಾಗ ಬಂದೆ ಮುದುಕೀ ? ” ಎಂದು ಮುದುಕಿಯನ್ನು ಕಂಡೊಡನೆ ಪ್ರಶ್ನಿಸಿದಳು ಸುಂದರಿ.

“ ನಿನ್ನೆ ರಾತ್ರಿ ಸುಂದರಿ ” ಎಂದು ಮುದುಕಿ ಸುಂದರಿಯನ್ನೇ ದಿಟ್ಟಿಸಿ ನೋಡತೊಡಗಿದಳು.

“ ನನ್ನನ್ನು ಎಬ್ಬಿಸಬಾರದಿತ್ತೇ ? ”

“ ರಾತ್ರಿಯೇ ಇಲ್ಲಿ ಬರಲಿಲ್ಲ. ಈಗ ಬೆಳಿಗ್ಗೆ ಇಲ್ಲಿಗೆ ಬಂದೆ. ರಾತ್ರಿ ಸಿದ್ದಪ್ಪನ ಮನೆಯಲ್ಲಿ ಇದ್ದೆ. ಬೆಳಿಗ್ಗೆ ಬೇಗ ನಸುಕಿನಲ್ಲೇ ಎದ್ದು ಓಡಿ ಬಂದೆ—ಇಲ್ಲಿಗೆ. ”

“ ನಿನ್ನ ಊರಿನಿಂದ ಇಲ್ಲಿಗೆ ರಾತ್ರಿ ಮೋಟರು ಇದೆಯೇ ? ”

“ ಇಲ್ಲ ”

“ ಮತ್ತು ಹೇಗೆ ಬಂದೆ ? ”

“ ಧನಿಗಳ ಕಾರು ಬಂದಿತ್ತು. ”

“ ನಿಮ್ಮ ಊರಿಗೇ ? ”

“ ಹೌದು ನಮ್ಮ ಮನೆಗೇ ! ನಿನ್ನ ಸಲುವಾಗಿಯೇ ನಾನು ಬರಬೇಕಾಯಿತು. ನಿನಗೇನೋ ಕಾಯಿಲೆಯಾಗಿದೆ ಎಂದು ಧನಿಯರು ನನ್ನನ್ನು ಹೆದರಿಸಿ ಕರೆತಂದರು. ”

“ ನನಗೇನೂ ಆಗಿಲ್ಲ ! ”

“ ಆಯಿತು, ಈಗ ನೀನು ಮನೆಗೆ ಹೋಗು............ಚೌಡಪ್ಪ ಧನಿ ಬಂದಮೇಲೆ ನಾನೂ ಬರುತ್ತೇನೆ. ಆಗ ಎಲ್ಲ ವಿಲಾವರಿ ಮಾಡೋಣ. ಅವರು ಈಗ ಬರುತ್ತೇನೆಂದು ಹೇಳಿದ್ದಾರೆ. ”

“ ಈಗ ಮನೆಯಲ್ಲೇ ಇದ್ದಾರಲ್ಲ ! ”

“ ಹೌದೇ ! ಹಾಗಾದರೆ ಓಡು ಓಡು, ನಾನು ಈಗ ಬಂದೆ. ಪಾಪ, ಇಷ್ಟು ಬೇಗ ಬಂದರೇ ? ನಾನು ಮನೆಗೆ ಕೀಲಿ ಹಾಕಿದವಳೇ ಬರುತ್ತೇನೆ” ಎಂದು ಮುದುಕಿ ಅವಸರ ಮಾಡಿ ಸುಂದರಿಯನ್ನು ಕಳುಹಿಸಿದಳು. “ಏನೇನು ಆಗುವುದಿದೆ ಅದೆಲ್ಲ ಆಗಲಿ” ಎಂದು ಗಟ್ಟಿ ಮನಸ್ಸು ಮಾಡಿಕೊಂಡು ಸುಂದರಿ ಮನೆಗೆ ಬಂದು ಚಹಾ ತಯಾರಿಸಿದಳು. ಮುದುಕಿ ಬಂದದ್ದನ್ನು ನೋಡಿದುದರಿಂದ ಆವಳಿಗೂ ಒಂದು ಕಪ್ಪು ಚಹಾ ತಯಾರಾಯಿತು.

ಚೌಡಪ್ಪ ಕುಳಿತಿರುವಲ್ಲಿಗೆ ಸುಂದರಿ ಚಹಾ, ಬಿಸ್ಕೀಟು ತಂದು ಇಟ್ಟಳು. "ನಿನಗೆ ?" ಎಂದರು ಚೌಡಪ್ಪ.

"ಒಳಗೆ ಇವೆ" ಎಂದು ಮೆಲ್ಲನೆ ಹೇಳಿದಳು ಸುಂದರಿ.

"ಇಲ್ಲಿಗೆ ತಾ ಅದನ್ನು"

"ನಿಮ್ಮದು ಆಗಲಿ. ಗೋದಾ ಇನ್ನೂ ಮಲಗಿದ್ದಾಳೆ. ಅವಳು ಎದ್ದಮೇಲೆ ಅವಳೊಡನೆಯೇ ಕುಡಿಯುತ್ತೇನೆ."

"ನೀನು ನನ್ನ ಮುಂದೆ ಚಹಾ ಕುಡಿಯದಿದ್ದರೆ ನನಗೂ ಬೇಡ. ಇದನ್ನು ಒಯ್ಯು ಅತ್ತ!" ಎಂದು ಚೌಡಪ್ಪ ಸ್ವಲ್ಪ ಬಿರುಸಾಗಿಯೇ ಹೇಳಿದರು. ಸುಂದರಿಗೆ ಏನು ಮಾಡಬೇಕೆಂದು ತಿಳಿಯದಾಯಿತು. ಒಳಗೆ ಹೋಗಿ ಎರಡು ಕಪ್ಪು ಚಹಾ ತಂದಳು. ಚೌಡಪ್ಪ ಕೂತಿರುವಲ್ಲಿಯೇ ಅದನ್ನು ಇಟ್ಟವಳೇ ಮುದುಕಿಯನ್ನು ಕರೆಯಲು ಹೊರಟಳು. ಅಷ್ಟರಲ್ಲೇ ಮುದುಕಿ ಅಲ್ಲಿಗೆ ತಾನಾಗಿಯೇ ಬಂದಾಯಿತು.

"ತಕೋ ಮುದುಕೀ" ಎಂದು ಮುದುಕಿಗೆ ಚಹ ಕುಡಿಯಲು ಚೌಡಪ್ಪ ಆಮಂತ್ರಿಸಿದರು. ಸುಂದರಿಯೂ ಆ ಕಪ್ಪಿನಲ್ಲಿಯ ಚಹವನ್ನು ಮುದುಕಿಗೆ ಕೊಟ್ಟಳು. "ನೀನೂ ತಕೋ" ಎನ್ನುತ್ತ ಮುದುಕಿಯೂ ಸುಂದರಿಗೆ ಉಪಚಾರದ ಮಾತಾಡಿದಳು. ಒಟ್ಟಿಗೆ ಮೂವರೂ ಚಹಾ ಕುಡಿಯುತ್ತ ಕುಳಿತಿದ್ದರು. ಯಾರೂ ಮಾತೆತ್ತಲಿಲ್ಲ.

"ನನ್ನ ನೋವೆಲ್ಲ ಹೋಯಿತಮ್ಮಾ" ಎಂದು ಕುಣಿಯುತ್ತ ಗೋದಿ ಹೊರಗೆ ಓಡಿ ಬಂದಳು! ಮುದುಕಿ ಚಹಾ ಕುಡಿದು ಮುಗಿಸಿದ್ದಳು. ಚೌಡಪ್ಪನವರ ಕಪ್ಪು ಬರಿದಾಗಿತ್ತು. ಆದರೆ ಸುಂದರಿಯ ಕಪ್ಪಿನಲ್ಲಿ ಇನ್ನೂ ಅರ್ಧ ಕಪ್ಪು ಚಹಾ ಹಾಗೇ ಉಳಿದಿತ್ತು. ಅವರನ್ನೆಲ್ಲ ನೋಡಿದೊಡನೆ ಗೋದಿಗೆ ಆಶ್ಚರ್ಯವಾಯಿತು. ಅದರಲ್ಲೂ ಆ ಮುದುಕಿಯನ್ನು ಕಂಡೊಡನೆ ಗೋದಿಗೆ ಸಂತೋಷವೂ ಆಯಿತು.

"ಅಜ್ಜಿ ಯಾವಾಗ ಬಂದಳಮ್ಮಾ?" ಎಂದು ಗೋದಿಯೇ ಪ್ರಶ್ನಿಸಿದಳು. ಆಗ ಆ ಮುದುಕಿ, "ಅಯ್ಯೋ! ನನ್ನ ಕಂದನಿಗೆ ಏನಾಯಿತೇ ಸುಂದರಿ!" ಎಂದು ಗೋದಿಯನ್ನು ತನ್ನ ತೊಡೆಯ ಮೇಲೆ ಕುಳ್ಳಿರಿಸಿ

ಕೊಂಡು ಆಶ್ಚರ್ಯದಿಂದ ಸುಂದರಿಯ ಮುಖ ನೋಡಿದಳು. ಸುಂದರಿ ಮಾತು ಎತ್ತಲಿಲ್ಲ. ಅವಳ ಕಣ್ಣಲ್ಲಿ ನೀರು ತುಂಬಿತು. ಬಲವಂತದಿಂದ ಬಂದ ಅಳುವನ್ನು ಅದುಮಿ ಹಿಡಿದಳು. "ಏನಾಯಿತೇ ಅವಳಿಗೆ?" ಎಂದು ಚೌಡಪ್ಪನವರೂ ಸುಂದರಿಗೆ ಕೇಳಿದರು. ಸುಂದರಿಗೆ ಮಾತೇ ಬರಲಿಲ್ಲ. ಆಕೆ ಅಲ್ಲಿರುವ ಬರಿದಾದ ಕಪ್ಪು ಬಸಿಗಳನ್ನು ಒಟ್ಟುಗೂಡಿಸಿ ಒಳಗೆ ಒಯ್ದಳು. ಒಳಗೆ ಹೋಗಿ ಅವುಗಳನ್ನು ತೊಳೆಯುತ್ತ ಉಕ್ಕಿ ಬಂದ ದುಃಖವನ್ನು ತೋಡಿಕೊಂಡಳು.

ಇತ್ತ ಹೊರಗೆ ಮುದುಕಿ ಮರುಕಪಟ್ಟು, "ಅಯ್ಯೋ ಪಾಪ! ಎಂಥಾ ಪಟ್ಟಿ ಕಟ್ಟಿದ್ದಾರೆ! ಏನಾಗಿದೆ ಕಂದಾ?" ಎಂದು ಗೋದಿಗೆ ಪ್ರಶ್ನಿಸಿದಳು. ಚೌಡಪ್ಪನವರು ಸುಮ್ಮನೆ ಕುಳಿತಿದ್ದರು. ಅವರೊಡನೆ ಗೋದಿಗೆ ಸಲಿಗೆ ಇರಲಿಲ್ಲ. ಅಲ್ಲದೆ ಅವರ ಕಣ್ಣಿಗೆ ಆ ಮಗು ಬಿದ್ದದ್ದೇ ಕಡಿಮೆ. ಅವರನ್ನು ಕಂಡೊಡನೆ ಇತ್ತೀಚೆಗೆ ಆಕೆ ದೂರ ಓಡಿಹೋಗಿ ಎಲ್ಲಿಯಾದರೂ ಒಂದು ಮೂಲೆಯಲ್ಲಿ ಅವಿತುಕೊಂಡು ಕೂಡುತ್ತಿದ್ದಳು. ಅಥವಾ ಯಾರನ್ನಾದರೂ—ಹೆಚ್ಚಾಗಿ ಆ ಮುದುಕಿಯನ್ನೇ—ಹೋಗಿ ಅಪ್ಪಿಕೊಂಡು ಕೂಡುವುದು ಗೋದಿಯ ರೂಢಿ. ಮೊದಲಿನಿಂದಲೂ ಅವರನ್ನು ಕಂಡೊಡನೆ ಆಕೆಗೆ ಬೆದರಿಕೆ. "ಅವರನ್ನು ನಮ್ಮ ಮನೆಗೆ ಬರಗೊಡಬೇಡ" ಎಂದು ಅವಳು ಸುಂದರಿಗೆ ಲೆಕ್ಕವಿಲ್ಲದಷ್ಟು ಸಲ ಹೇಳಿದ್ದಳು. ಅಂತೇ ಅವರ ಮುಂದೆ ನಿಲ್ಲಲಿಕ್ಕೂ ಅವಳು ಬೆದರುತ್ತಿದ್ದಳು. ಆದರೆ ಇಂದು ಅಲ್ಲಿ ಆ ಮುದುಕಿಯಿದ್ದುದರಿಂದಲೇ ಆಕೆ ಅಲ್ಲಿಗೆ ಹೋಗಿದ್ದಳು ಅಲ್ಲದೆ ಚೌಡಪ್ಪ ಅಲ್ಲಿ ಇದ್ದಾರೆಂಬುದೂ ಅವಳಿಗೆ ತಿಳಿದಿರಲಿಲ್ಲ. ಮುದುಕಿ ಮತ್ತು ತನ್ನ ತಾಯಿಯನ್ನು ಮಾತ್ರ ಮೊದಲು ಆಕೆ ಕಂಡಿದ್ದಳು. ಚೌಡಪ್ಪನವರನ್ನು ಕಂಡೊಡನೆ, ಮುದುಕಿಯ ಕೈ ಗಟ್ಟಿಯಾಗಿ ಹಿಡಿದುಕೊಂಡು ಅವರತ್ತ ನೋಡದೆ ಕಣ್ಣು ಮುಚ್ಚಿದಳು. ಸುಂದರಿ ಒಳಗೆ ಹೋಗುವಾಗ ತಾನೂ ಅವಳ ಹಿಂದೆ ಓಡಲು ಪ್ರಯತ್ನಿಸಿದಳು. ಆದರೆ ಮುದುಕಿ "ಅವಳೀಗ ಬರುತ್ತಾಳೆ. ಕೂಡು ಕಂದಾ........" ಎಂದು ರಮಿಸಿ ಅವಳನ್ನು ಬಿಡಲಿಲ್ಲ. ಆಗ ಚೌಡಪ್ಪ ಅಲ್ಲಿಂದ ಎದ್ದು ಪಡಸಾಲೆಯ ಮೂಲೆಯಲ್ಲಿರುವ ಕುರ್ಚಿಯ ಮೇಲೆ ಕೂತುಕೊಂಡು ಮುಖಕ್ಕೆ ಒಂದು ಹಳೆಯ ದಿನಪತ್ರಿಕೆಯನ್ನು ಅಡ್ಡಹಿಡಿದು ಓದತೊಡಗಿದರು! ಅದ

ರಲ್ಲಿ ಏನು ಓದುತ್ತಿದ್ದರೋ ತಿಳಿಯದು! ಆದರೆ ಅವರ ಕಿವಿ ಮಾತ್ರ ಮುದುಕಿ ಮತ್ತು ಗೋದಿಯವರು ಆಡುವ ಮಾತಿನತ್ತ ಇತ್ತು. ಅವರು ಅಲ್ಲಿ ಹೋಗಿ ಕೂಡುವವರೆಗೆ ಗೋದಿ ತುಟಿ ಬಿಚ್ಚಲಿಲ್ಲ. ಆಮೇಲೆ ಮಾತ್ರ ನಡೆದ ಸಂಗತಿಯನ್ನೆಲ್ಲ ವಿವರಿಸಿದಳು. "ನಾನು ಸೂಳೆಯ ಮಗಳಂತೆ!" ಎಂಬ ಅವಳ ಮಾತು ಪೇಪರನ್ನು ಭೇದಿಸಿ ಚೌಡಪ್ಪನವರ ಕರ್ಣಗಳಿಗೆ ನಾಟಿತು. "ಪಾಪ! ಪಾಪ! ಬೋಳಿಮಕ್ಕಳು ಹಾಳಾಗಲಿ" ಎಂದು ಮುದುಕಿಯೂ ಆ ಸಾಲೆಯ ಹುಡುಗರಿಗೆ ಬೈದಳು.

ಗೋದಿ ಹೇಳುವ ಕಥೆಯನ್ನೆಲ್ಲ ಚೌಡಪ್ಪನವರು ಏಕಚಿತ್ತದಿಂದ ಕೇಳುತ್ತಿದ್ದರು. ಆ ಮಗು ಹೇಳಿದುದನ್ನೆಲ್ಲ ಕೇಳಿದ ಮೇಲೆ ಅವರಿಗೂ "ಇಡೀ ಊರಿಗೇ ನನ್ನ ವ್ಯಭಿಚಾರದ ಸುದ್ದಿ ಹಬ್ಬಿತೇ! ಸುಂದರಿ ನನ್ನ ಸೂಳೆಯೇ! ಅವಳು ಸೂಳೆಯಾದರೆ ಗೋದಿಗೆ ಯಾಕೆ ಕಲ್ಲು ಎಸೆಯಬೇಕು?" ಎಂಬ ವಿಚಾರ ಹೊಳೆಯದೆ ಇಲ್ಲ. "ಇನ್ನೇನು ಮಾಡಬೇಕು?" ಎಂದು ತಮ್ಮ ತಲೆಯಲ್ಲೇ ವಿಚಾರ ನಡೆಸಿದರು. ಆ ಬಗ್ಗೆ ಮುದುಕಿ ಹೇಳಿದ್ದೇ 'ವೇದ ವಾಕ್ಯ' ಎಂದು ನಂಬುವದೆಂದು ನಿರ್ಧಾರ ಮಾಡಿಯೂ ಆಯಿತು.

ಸುಂದರಿ ಹೊರಗೆ ಬಂದು, "ಬಾ ಕಂದಾ" ಎಂದು ಗೋದಿಯನ್ನು ಕರೆದುಕೊಂಡು ಒಳಗೆ ಹೋದಳು. ಅವಳ ಮುಖ ತೊಳೆಯಲು ಹೋದಳು ಸುಂದರಿ. ಆದರೆ, "ನೀನು ಯಾಕೆ ತೊಳೆಯುತ್ತೀ ಅವ್ವಾ? ನಾನೇನು ಸಣ್ಣವಳೇ? ನನಗೇನಾಗಿದೆ?" ಎಂದು ಗೋದಿ ತಾಯಿಗೆ ಹೇಳಿ ತಾನೇ ಮುಖ ತೊಳೆದುಕೊಂಡಾಯಿತು. ಆಮೇಲೆ ಮಗಳ ಹತ್ತಿರ ಒಂದು ಕಪ್ಪು ಹಾಲು ಇಟ್ಟು, "ತಕೋ ಕಂದಾ—ಈ ಹಾಲು ಕುಡಿ, ಚಹಾ ಬೇಡ" ಎಂದಳು ಸುಂದರಿ. "ಅಯ್ಯೋ ಹುಚ್ಚೀ, ನೀನು ಯಾಕೆ ಹೆದರುತ್ತೀ? ನನಗೇನಾಗಿದೆ ಎಂದು ನೀನು ಹೀಗೆಲ್ಲ ಪತ್ತೇಪಾನ ಮಾಡಹತ್ತಿದಿ? ತಲೆಗೊಂದು ಕಲ್ಲು ತಾಗಿದರೆ ಏನಾಗುತ್ತದೆ? ರಾತ್ರಿಯ ನಿದ್ದೆ ಎಲ್ಲ ನೋವು ತೆಗೆದುಕೊಂಡು ಓಡಿತು" ಎಂದು ತಾಯಿಗೆ ಸಮಾಧಾನ ಹೇಳುತ್ತ ಗೋದಿ ಹಾಲನ್ನೇ ಕುಡಿಯುತ್ತಿದ್ದಳು. ಹಾಲು ಕುಡಿಯುತ್ತಿರುವಾಗಲೇ, "ಇಷ್ಟು ಬೇಗ ಹಾಲು ಯಾರು ತಂದುಕೊಟ್ಟರವ್ವಾ?" ಎಂದು ತಾಯಿಗೆ ಪ್ರಶ್ನಿಸಿದಳು ಗೋದಿ. "ಇದು ಬೇಗ ಅಲ್ಲ ಕಂದಾ, ಇವತ್ತು ನೀನೇ ಏಳಲಿಕ್ಕೆ ತಡ

ಮಾಡಿದಿ" ಎಂದು ತಿಳಿಸಿದಳು. ಹೀಗೆ ಮಾತಾಡುತ್ತ ಅವರಿಬ್ಬರೂ ಅಲ್ಲಿಯೇ ಕೂತಿದ್ದರು. ಆಗ "ಸುಂದರೀ..........ಸುಂದರೀ" ಎಂದು ಮುದುಕಿಯ ಕೂಗು ಕೇಳಿಸಿತು. "ನೀನು ಹೋಗಮ್ಮ, ನಾನು ಅವರು ಹೋಗುವ ತನಕ ಹೊರಗೆ ಬರುವುದಿಲ್ಲ" ಎಂದು ಗೋದಿ ಹಿಂದಿನ ಬಾಗಿಲಿಂದ ಹೊರಗೆ ಹೋದಳು. "ಮತ್ತೆಲ್ಲಿಯಾದರೂ ನೋವು ಮಾಡಿಕೊಳ್ಳಬೇಡ ಕಂದಾ" ಎಂದು ಜಾಗ್ರತೆ ಹೇಳಿ ಸುಂದರಿ ಹೊರಗೆ ಹೋದಳು.

"ಇಲ್ಲಿ ಕೂಡು" ಎಂದು ಮುದುಕಿ ತನ್ನ ಪಕ್ಕದಲ್ಲೇ ಸ್ವಲ್ಪ ದೂರ ಸುಂದರಿಗೆ ಸ್ಥಳ ಮಾಡಿ ಕೊಟ್ಟಳು. ಸುಂದರಿ ಅಲ್ಲಿ ಕೂತಾಯಿತು. ಚೌಡಪ್ಪನವರೂ ಆ ಮೂಲೆಯಿಂದ ಎದ್ದು ಅವರ ಹತ್ತಿರದಲ್ಲೇ ಕುರ್ಚಿ ಇಟ್ಟುಕೊಂಡು ಕುಳಿತುಕೊಂಡರು. "ಘೂಂ ಘುಕ್" ಎಂದು ಕೆಮ್ಮಿದರು.

"ಏನು ಸುಂದರೀ? ನಿನ್ನ ವಿಚಾರ ಏನು?" ಎಂದು ಮುದುಕಿಯೇ ಮಾತಿಗೆ ಪೀಠಿಕೆ ಹಾಕಿದಳು.

"ಯಾವ ವಿಷಯದಲ್ಲಿ?" ಎಂದಳು ಸುಂದರಿ.

"ನಿನ್ನ........ಯಾಕೆ? ನನ್ನ ಆ ಗೋದಿಯ ವಿಚಾರದಲ್ಲಿ"

"ಎಂಥ ವಿಚಾರ?"

"ಸಾಲೆಯ ಸಂಗತಿ........ಅಂದರೆ, ಅವಳನ್ನು ಸಾಲೆಗೆ ಕಳುಹಿಸಬಾರದೆಂದು ಧನಿಯರು ಹೇಳುತ್ತಾರೆ.."

ಸುಂದರಿ ಸ್ವಲ್ಪ ಹೊತ್ತು ವಿಚಾರ ಮಾಡಿದಳು. ತನ್ನ ಬುದ್ಧಿಯನ್ನು ಸ್ಥಿಮಿತಕ್ಕೆ ತಂದುಕೊಂಡು, "ಈಗಿನ ಕಾಲದಲ್ಲಿ ಶಿಕ್ಷಣವಿಲ್ಲದ ಮನುಷ್ಯ ಪಶು" ಎಂದು ನುಡಿದಳು. ಆಗ ಚೌಡಪ್ಪನವರ ಅಭಿಮಾನ ಕೆರಳಿತು. ಆಕೆ ಹೇಳಿದ ಮಾತು ಅವರಿಗೆ ಸೇರಿ ಬರಲಿಲ್ಲ. ಅಲ್ಲದೆ ಆ ಮಾತು ಅವರಂತಹ ವ್ಯವಹಾರ ಚತುರರಾದ ಅನುಭಾವಿಗಳಿಗೆ ವಿರುದ್ಧವಾಗಿತ್ತು. ಕಾರಣ, ತಮ್ಮ ತತ್ವಗಳನ್ನು ಉಪದೇಶಿಸತೊಡಗಿದರು.

"ನೀನು ಹೇಳಿದ ಮಾತಿನಲ್ಲಿ ಹುರುಳಿಲ್ಲ ಸುಂದರಿ. ಸುಮ್ಮನೆ ನಿನ್ನೊಡನೆ ವಾದಿಸಿ ಏನೂ ಪ್ರಯೋಜನವಿಲ್ಲ. ಶಿಕ್ಷಣ ಅಂದರೆ ಏನು ಎಂದು ನಿನಗೆ ಚೆನ್ನಾಗಿ ಗೊತ್ತಿಲ್ಲ. ನಿನಗೆ ನಾಲ್ಕೆಂಟು ಕಥೆ ಕಾದಂಬರಿ ಓದಲಿಕ್ಕೆ ಬರು

ತ್ತದೆ ನಿಜ. ಆದರೆ ಅದು ವಿದ್ಯೆ ಅಥವಾ ಶಿಕ್ಷಣವಲ್ಲ. ನೀನು ಸ್ವಲ್ಪ ಇಂಗ್ಲೀಷೂ ಕಲಿತಿದ್ದಿ ನಿಜ. ಆ ಇಂಗ್ಲೀಷು ಯಾವುದಕ್ಕೂ ಉಪಯೋಗವಿಲ್ಲ. ನೀನು ಕಲಿತು ಏನು ಮಾಡಿದ್ದಿ ?.......... ಈಗ ಒಂದು ಉದಾಹರಣೆ ಕೊಡುತ್ತೇನೆ. ಬಹಳ ದೂರ ಯಾಕೆ ಹೋಗುವುದು ? ನೋಡು, ನನಗೆ ಬರುವ ವಿದ್ಯೆ ಎಷ್ಟು ಎನ್ನುವುದು ನಿನಗೆ ಗೊತ್ತಿದೆ. ನನ್ನ ಸಹಿಯೇ ಚೆನ್ನಾಗಿ ಬರೆಯಲಿಕ್ಕೆ ನನಗೆ ಬರೋದಿಲ್ಲ. ಆದರೆ ನನಗೆ ಈ ಊರಲ್ಲಿ ಇರುವ ಗೌರವ ಮರ್ಯಾದೆ ಎಷ್ಟು ಎನ್ನುವುದು ನಿನಗೆ ಗೊತ್ತೇ ಇದೆ. ಅದೇನು ನಿನಗೆ ಅರಿವಿಲ್ಲದ್ದಲ್ಲ. ನನಗಿಂತ ಹೆಚ್ಚು ಕಲಿತು ಬೀಎ, ಎಮ್ಮೆ ಆಗಿ ನೊಣ ಜಾಡಿಸುತ್ತ ಎಷ್ಟೋ ಜನರು ಈ ಊರಲ್ಲಿ ಇದ್ದಾರೆ. ನನಗೆ ಸಿಗುವಷ್ಟು ಮರ್ಯಾದೆ ಅವರಿಗೆ ಯಾರಿಗಾದರೂ ಸಿಗುತ್ತದೆಯೋ ? ಅದೇಕೆ? ನೀನು ಈಗ ಏನಿಲ್ಲೆಂದರೂ ನಾಲ್ಕು ಅಕ್ಷರವಾದರೂ ಇಂಗ್ಲೀಷು ಕಲಿತಿರಬಹುದು. ನಿನಗೆ ಕನ್ನಡ ಚೆನ್ನಾಗಿ ಓದಲಿಕ್ಕೆ ಬರೆಯಲಿಕ್ಕೆ ಬರುತ್ತದೆ. ನನಗೆ ಸಿಗುವ ಗೌರವ ನಿನಗೆ ಸಿಗುತ್ತಿದೆಯೋ ? ಹಾಗಾದರೆ ಹಣದ ಬಲದಿಂದ ನಾನು ಇಷ್ಟು ದೊಡ್ಡ ಮನುಷ್ಯನಾಗಿದ್ದೇನೆಂದು ತಿಳಿಯಬಹುದು ನೀನು. ಆ ಮಾತು ಸುಳ್ಳು. ಯಾಕೆಂದರೆ, ನನಗಿಂತ ಹೆಚ್ಚು ಹಣವುಳ್ಳವರು ಈ ಊರೇ ಬಿಟ್ಟು ಹೋಗಿದ್ದಾರೆ—ಈ ಊರವರೇ ! ಹಾಗೆಂದು ನನಗಿಂತ ಹೆಚ್ಚಿನ ಶ್ರೀಮಂತರು ಈ ಊರಲ್ಲಿ ಇಲ್ಲವೆಂದಲ್ಲ. ಆದರೆ ಅವರಿಗೆಲ್ಲ ನನಗೆ ಸಿಗುವಷ್ಟು ಮರ್ಯಾದೆ ಸಿಗುವುದು ಸುಳ್ಳು. ನಮ್ಮ ಊರಿಗೆ ಯಾವ ಮಿನಿಸ್ಟ್ರರು ಬಂದರೂ ನನಗೆ ಸೇಕಂಡ ಕೊಡದೆ ಹೋಗುವುದಿಲ್ಲ.............. ಇವಕ್ಕೆಲ್ಲ ಒಂದೇ ಒಂದು ಕಾರಣ. ಅದು ನಿನಗೆ ಗೊತ್ತಿಲ್ಲ. ಗೊತ್ತಿದ್ದರೆ ನೀನು ಹೀಗೆ ವರ್ತಿಸುತ್ತಿರಲಿಲ್ಲ. ಅಂದರೆ ನಿನ್ನ ಮಗಳನ್ನು ಸಾಲೆಗೆ ಕಳುಹಿಸಬೇಕೆಂದು ಹಟ ಹಿಡಿಯುತ್ತಿರಲಿಲ್ಲ. ಈಗಿನ ಕಾಲದಲ್ಲಿ ಮನುಷ್ಯನಿಗೆ ಅಪಾರವಾದ ಅನುಭವ—ಲೋಕಾನುಭವ ಬೇಕು; ಹೊರತು ಶಿಕ್ಷಣವಲ್ಲ. ತಿಳಿಯಿತೇ ಸುಂದರಿ? ನಿನ್ನ ಮಗಳನ್ನು ಸಾಲೆಗೆ ಕಳುಹಿಸಬೇಡ ಕಳುಹಿಸಬಾರದು ಎಂದು ನನ್ನ ಅಭಿಪ್ರಾಯ. ಅಲ್ಲ—ನೋಡೂ, ನನಗೆ ವಿದ್ಯೆ ಇಲ್ಲದಿದ್ದರೂ ಎಷ್ಟು ಮರ್ಯಾದೆ ಇದೆ ? ಸುಮ್ಮನೆ ಸಾಲೆಗೆ ಕಳುಹಿಸಿ—ಅಲ್ಲಿ ಇದ್ದ ಹುಡುಗರೊಡನೆ ಜಗಳಾಡಿ, ಅವರು ಇವಳನ್ನು ಬಾಯಿಗೆ ಬಂದ ಹಾಗೆ ಬೈದು

ನನ್ನದೂ ನಿನ್ನದೂ ಕೂಡಿಯೇ ಮರ್ಯಾದೆ ಕಳೆಯುವುದು—ಯಾಕೆ ಬೇಕು ?"

ಚೌಡಪ್ಪನವರ ಭಾಷಣ ಕೇಳುವಾಗ ಸುಂದರಿಗೆ ನಗು, ದುಃಖ ಎರಡೂ ಬಂದವು. ಸುಮ್ಮನೆ ತಲೆ ಕೆಳಗೆ ಹಾಕಿ ಅವರು ಹೇಳಿದುದನ್ನೆಲ್ಲ ಕೇಳಿದಳು. ಹೇಳಿ ಹೇಳಿ ಅವರೇ ಬೇಸತ್ತೋ, ಆಯಾಸಪಟ್ಟೋ ಸುಮ್ಮಗಾದರು. ಆಗ ಮುದುಕಿ, "ನಿಮ್ಮಂಥಾ ಮರ್‍ಯಾದೆ ಇಂದ್ರಲೋಕದ ಇಂದ್ರನಿಗಾದರೂ ಉಂಟೋ ಇಲ್ಲವೋ ಧನಿಯರೇ..........ನೀವು ಹೇಳುವ ಮಾತಿನಲ್ಲಿ ಎಳ್ಳಿನ ಏಳನೇ ಒಂದಂಶದಷ್ಟಾದರೂ ಸುಳ್ಳು ಇಲ್ಲ. ಮತ್ತು ನೀವು ಹೇಳಿದಂತೆ—ಗೋದಿಯನ್ನು ಸಾಲೆಗೆ ಕಳುಹಿಸಿ—ನಿಮ್ಮ ಮರ್ಯಾದೆ ಮಾರಿಕೊಳ್ಳುವುದು ಮೂರ್ಖತನವೇ. ಸುಂದರೀ, ನೀನು ಹೇಳುವುದಾದರೂ ಏನು ಈಗ ?" ಎಂದು ಕೇಳಿದಳು.

"ನೀನು ಏನೇ ಹೇಳು ಮುದುಕೀ. ಧನಿಯರು ಕೂಡಾ ಏನು ಬೇಕೋ ಅದನ್ನೇ ಹೇಳಲಿ, ಆದರೆ ನಾನು ಮಾತ್ರ ಗೋದಿಯನ್ನು ಸಾಲೆಗೆ ಕಳುಹಿಸುವವಳೇ. ಕೊನೆಗೆ ಒಂದು ಕನ್ನಡ ಸಾಲೆಯ ಶಿಕ್ಷಕಿಯ ಕೆಲಸಕ್ಕಾದರೂ ಅರ್ಹಳಾಗುವ ಶಿಕ್ಷಣ ಅವಳಿಗೆ ಸಿಗುವಂತೆ ಮಾಡುವುದು ನನ್ನ ಕರ್ತವ್ಯ. ನಾನು ಸತ್ತಮೇಲೆ ಅವಳ ಗತಿ ಏನಾಗುತ್ತದೋ ದೇವರೇ ಬಲ್ಲ ....ಆದ್ದರಿಂದ ನಾನು ಸಾಯುವುದರೊಳಗೇ ಅವಳು ಯೋಗ್ಯ ದಾರಿ ಹಿಡಿದದ್ದು ನೋಡಬೇಕೆಂಬ ಕಟ್ಟಾಸೆ ನನಗೆ............... ಮುದುಕೀ, ನೀನೂ ಧನಿಯರತ್ತ ಸೇರಿದೆಯಾ? ನನ್ನ ಮಗುವನ್ನು ಮುಂದೆ ಏನು ಮಾಡಬೇಕೆಂಬ ಆಸೆ ನಿನ್ನದು? ನನ್ನ ಹಣೆಬರಹ ನಿನಗೆ ಗೊತ್ತಿದೆ......... ನಾನಿನ್ನೂ ಎಷ್ಟು ದಿನ ಬದುಕಬಹುದು.........ದಮ್ಮಯ್ಯ ಮುದುಕೀ, ನನ್ನ ಗೋದಿಗೊಂದು ಒಳ್ಳೆಯ ದಾರಿ ತೋರಿಸು.........ನೀನೇ ನನಗೆ ತಾಯಿ...... ನೀನೇ ನನಗೆ ಸರ್ವಸ್ವ" ಎಂದು ಅಲ್ಲಿಯೇ ಬಿಕ್ಕಿಬಿಕ್ಕಿ ಅಳತೊಡಗಿದಳು ಸುಂದರಿ.

ಧೂರ್ತಶಿರೋಮಣಿಯಾದ ಮುದುಕಿಗೂ ಒಮ್ಮೆ ದುಃಖ ಬಂತು. ಅವಳಿಗೆ ಎಂಥ ಉತ್ತರ ಕೊಡಬೇಕೆಂದು ತಿಳಿಯಲಿಲ್ಲ. ಸ್ವಲ್ಪ ಸುಮ್ಮನಿದ್ದು ವಿಚಾರ ಮಾಡಿದಳು. ಧನಿಯರನ್ನು ನೋಯಿಸದೆ—ಅವರ ಕಾರ್ಯಕ್ಕೆ

ಅಡ್ಡಬಾರದ ಒಂದು ಉಪಾಯವನ್ನು ಆಕೆ ಹುಡುಕಬೇಕಾಯಿತು ಚೌಡಪ್ಪನವರಿಗೂ ಸ್ವಲ್ಪ ಅಸಮಾಧಾನವಾಯಿತು—ಸುಂದರಿ ಅಳುವುದನ್ನು ನೋಡಿ "ಅತ್ತರೆ ಯಾವ ಕೆಲಸವೂ ಆಗುವುದಿಲ್ಲ ಸುಂದರೀ. ಮುಚ್ಚುಮರೆಯಿಲ್ಲದೆ ಈಗ ಹೇಳಿದಹಾಗೆ ನಿನ್ನ ಮನಸ್ಸಿನೊಳಗಿದ್ದುದನ್ನು ಹೇಳು. ಅಂದರೆ ಯಾವ ಮನಸ್ತಾಪವೂ ಹುಟ್ಟುವುದಿಲ್ಲ" ಎಂದು ಚೌಡಪ್ಪನವರೂ ಸಮಾಧಾನ ಹೇಳಿದರು.

"ನೋಡು ಸುಂದರೀ, ನಾನೊಂದು ಮಾತು ಹೇಳುತ್ತೇನೆ ಅದರಂತೆ ಮಾಡಿದರೆ ಯಾವ ತೊಂದರೆಯೂ ಬರುವುದಿಲ್ಲ. ನೀನು ಸುಖವಾಗಿರಬಹುದು, ಧನಿಯರೂ ನೆಮ್ಮದಿಯಿಂದ ಇರಬಹುದು—ನನಗೂ ಒಂದು ಹೊಣೆಗಾರಿಕೆಯ ಕೆಲಸ ಬಿದ್ದಂತಾಗುತ್ತದೆ" ಎಂದು ಮುದುಕಿ ಒಂದು ಉಪಾಯ ಹುಡುಕಿ ಅದರ ಪೀಠಿಕೆಗೆ ಪ್ರಾರಂಭಿಸಿಬಿಟ್ಟಳು.

"ವಯಸ್ಸಾದವರಿಗೆ ಯೋಗ್ಯ ವಿಚಾರಗಳು ಹೊಳೆಯುವುದು ಬೇಗ. ಅವರಿಗೆ ಅನುಭವ ಹೆಚ್ಚು—ಮುದುಕೀ. ನೀನು ಏನು ಉಪಾಯ ಹೂಡಿದಿ ಹೇಳು" ಎಂದು ಮುದುಕಿಯನ್ನು ಹೊಗಳಿದಂತೆ ಮಾಡಿ ಚೌಡಪ್ಪ ಸುಮ್ಮನೆ ಕೂತು ಅವಳತ್ತ ಲಕ್ಷ್ಯವಿತ್ತರು.

"ಸುಂದರೀ, ನಾನು ಹೇಳಿದ್ದಕ್ಕೆ ನೀನು ಯಾವ ಕುಂಟುಸಂಕ್ತಿಯನೂ ಸೇರಿಸಬಾರದು. ತಿಳಿಯಿತೇ ?"

"ನೀನು ಸತ್ಯಕ್ಕೆ ಸರಿಯಾಗಿ ನಡೆದರೆ ಸಾಕು ಅದೇ ನಮ್ಮ ನಮ್ರ ಸೂಚನೆ ಮುದುಕೀ. ಇಲ್ಲಿಯ ವರೆಗೆ ನೀನು ನನಗೆ ಕೇಡು ಬಗೆದಿಲ್ಲ ಎಂದು ನಾನು ನಂಬಿದ್ದೇನೆ. ಆದರೆ ಅದು ಹೌದೋ ಅಲ್ಲವೋ ಎಂಬುದು ನಿನಗೂ ಆ ಹೊತ್ತ ಧರಾ ಮಾತೆಗೂ ಮೇಲಿರುವ ಪರಮಾತ್ಮನಿಗೂ ಗೊತ್ತು. ಇನ್ನಾದರೂ ನೀನು ನನ್ನ ಮಟ್ಟಿಗೆ ಎರಡು ಬಗೆಯುವುದಿಲ್ಲವೆಂದು ನಂಬುತ್ತೇನೆ. ನನ್ನ ಮುದ್ದು ಕಂದನನ್ನು ಕಾಪಾಡುವುದು ನಿನಗೇ ಸೇರಿದೆ ಮುದುಕೀ............ ಅಯ್ಯೋ ನನ್ನ ಹಣೆಯಬರಹಕ್ಕೆ ದೇವರು ನನಗೆ ಒಬ್ಬ ಗಂಡು ಕುವರನನ್ನಾದರೂ ಕೊಡಬಾರದಿತ್ತೇ........ಹೆಣ್ಣಿನ ಬಾಳು ಯಾವಾಗಲೂ ಕೊರಗಿನ ಅರಮನೆಯೇ........" ಎಂದು ಪುನಃ ಕಣ್ಣೀರು ತುಂಬಿಸಿದಳು ಸುಂದರಿ.

"ಹೀಗೆಲ್ಲ ಅತ್ತು ಅತ್ತೇ ನೀನು ಜೀವ ಹಾಳು ಮಾಡಿಕೊಳ್ಳುತ್ತಿ ಸುಂದರಿ. ಅಳುವುದು ಯಾವಾಗ ಗೊತ್ತೇ? ಇದು ಅಳುವ ಹೊತ್ತಲ್ಲ! ಏನಾಗಿದೆಯೆಂದು ಅಳುತ್ತಿ ನೀನು?" ಎಂದು ಚೌಡಪ್ಪ ಸುಂದರಿಗೆ ಬುದ್ಧಿ ಹೇಳಿದರು. ಆಗ ಸುಂದರಿಯೂ ಸುಮ್ಮನೆ ಕುಳಿತಳು. ಆವರೂ ಹೃದಯ ದಲ್ಲಿ ದುಃಖದ ತೆರೆಗಳು ಆರ್ಭಟಿಸುತ್ತಲೇ ಇದ್ದವು.

"ನಾನು ಹೇಳುವುದೆಂದರೆ, ಗೋದಿಗೆ ಸಾಲೆ ಕಲಿಸಬೇಕು. ಅವಳು ಸಾಲೆಗೆ ಹೋಗಲಿ ಆದರೆ ಈ ಪೇಟೆಯ ಮೂರು ಕಾಸಿನ ಸಾಲೆಗೆ ಬೇಡ. ಇಲ್ಲಿ ಇರುವುದೇ ದ್ವೇಷ, ಅಸೂಯೆ, ಜಂಬ, ಡಂಬಾಟಿಕೆ—ಹೊರತು ಮತ್ತೇ ನಿಲ್ಲ. ನನ್ನ ಊರು ಇಲ್ಲಿಂದ ಬಹಳ ದೂರೇನು ಇಲ್ಲ. ನನ್ನ ಊರು ಅಂದರೇನ? ನನ್ನ ಹಳ್ಳಿ. ಅಲ್ಲಿಯ ಸಾಲೆ ಅಂದರೆ ಸಾಲೆ ಅಲ್ಲಿಯ ಮಾಸ್ತರನದ್ದೂ ನನಗೆ ಪರಿಚಯ ಉಂಟು ಅಲ್ಲದೆ ನನ್ನ ಅಳಿಯನ ಊರೂ ಅದೇ. ಆದರೆ ನಾನು ಅವನ ಮನೆಗೆ ಹೋಗುವುದಿಲ್ಲ. ನಾನು ಆ ಊರಿಗೆ ಹೋದರೆ ಅವನು ನನ್ನನ್ನು ಬೇರೆ ಇರಲಿಕ್ಕೆ ಬಿಡುವುದಿಲ್ಲ. ಆ ಮಾತು ಬೇರೆ. ಅದನ್ನು ನಾನು ಹೇಗಾದರೂ ನೋಡಿಕೊಳ್ಳುತ್ತೇನೆ. ಇಲ್ಲಿಂದ ಮೂವತ್ತು ಮೈಲು ದೂರ ಆ ಹಳ್ಳಿಗೆ. ಹಳ್ಳಿಯ ಸಾಲೆ, ಶಾಂತವಾದ ವಾತಾವರಣ, ಯಾರದೂ ಕಾಟವಿಲ್ಲ. ಸುಖವಾಗಿ ಅಲ್ಲಿಯೇ ಕಲಿತು ಕೊಂಡು ಇರಬಹುದು. ನೀನೇನು ಕಾಳಜಿ ಮಾಡಬೇಡ ಸುಂದರಿ. ನಾನು ಈ ಗೋದಿಯನ್ನು ಕರೆದುಕೊಂಡು ಅಲ್ಲಿಯೇ ಸಾಲೆಯ ಹತ್ತಿರ ಒಂದು ಮನೆ ಬಾಡಿಗೆ ಹಿಡಿದು ಇರುತ್ತೇನೆ. ಖರ್ಚಿನ ವಿಷಯದಲ್ಲಿ ನಾನೇನು ಹೆದರಬೇಕಾಗಿಲ್ಲ. ನಿನ್ನ ಮಗಳು ಬೇ (B. A.) ಆಗುವವರೆಗೂ ಕಲಿಸಲಿಕ್ಕೆ ಚೌಡಪ್ಪಧನಿ ಗಟ್ಟಿಯಿದ್ದಾರೆ."

"ನೀನು ಈ ಪಿಲ್ಯಾನ್ (Plan) ಏನು ಹಾಕಿದಿ ನೋಡು ಮುದುಕೀ, ಭಾರೀ ಒಳ್ಳೇ ಪಿಲ್ಯಾನ್. ಏನೂ ಅಡ್ಡಿ ಇಲ್ಲ. ಹಾಗೇ ಮಾಡು. ಬೇಕಾದಷ್ಟು ರೂಪಾಯಿ ಖರ್ಚಾಗಲಿ. ನಾನು ಹಣಕ್ಕೆ ಹಿಂದೆಮುಂದೆ ನೋಡುವ ಆಸಾಮಿ ಅಲ್ಲ. ಆ ವಿಷಯ ನಿನಗೆ ಗೊತ್ತೇ ಇದೆಯಲ್ಲ." ಎಂದು ಚೌಡಪ್ಪ ಮುದುಕಿಯ ಮಾತಿಗೆ ಸೈ ಹಾಕಿದರು. ಇನ್ನು ಸುಂದರಿಯೊಬ್ಬಳು ಅದಕ್ಕೆ ಒಪ್ಪುವುದು ಉಳಿದಿತ್ತು.

“ತಿಂಗಳಿಗೊಮ್ಮೆಯೋ ಎರಡು ತಿಂಗಳಿಗೊಮ್ಮೆಯೋ ಸೂಟಿ ತೆಗೆದುಕೊಂಡು ಹುಡುಗಿಯನ್ನು ಕರೆದು ಇಲ್ಲಿಗೆ ತಂದರಾಯಿತು. ಬೇಸಿಗೆಯ ಬಿಡುವಿನಲ್ಲಂತೂ ಇಲ್ಲಿಯೇ ಇರಲಿ, ಯಾರು ಬೇಡವೆನ್ನುತ್ತಾರೆ? ಮತ್ತು ಮಧ್ಯ ಮಧ್ಯ ರಜೆ ಸಿಕ್ಕಾಗ ನಾನೇನು ಕರೆದು ತರಲಿಕ್ಕೆ ಮರೆಯುವುದಿಲ್ಲ. ಅಥವಾ ನೀನೇ ಬೇಕಾದರೆ ಅಲ್ಲಿಗೆ ಬರಬಹುದು. ಹೇಗಾದರೂ ಧನಿಯರ ಎರಡು ಕಾರು ಇವೆ ಹೇಗೆ ಸುಂದರೀ? ನಾನು ಹೇಳಿದಂತೆ ಮಾಡಲಿಕ್ಕೆ ನಿನ್ನ ಒಪ್ಪಿಗೆ ಇದೆಯೋ ಇಲ್ಲ ಹೇಳು?” ಎಂದು ಮುದುಕಿಯೇ ಮಧ್ಯಸ್ತಿಕೆ ವಹಿಸಿ ಸುಂದರಿಗೆ ಕೇಳಿದಳು.

“ಹಾಗಾದರೆ ನಾನೊಬ್ಬಳು ಇಲ್ಲಿ ಯಾಕೆ ಉಳಿಯುವುದು? ನಾನೂ ಅಲ್ಲಿಗೆ ಬಂದರಾಗದೇ? ನಾನು ಇಲ್ಲಿ, ಮಗು ಅಲ್ಲಿ ಯಾಕೆ? ಈ ಮನೆಯನ್ನು ಯಾರಿಗಾದರೂ ಬಾಡಿಗೆಗೆ ಕೊಟ್ಟರಾಯಿತು. ಹೇಗೂ ನೂರು–ಐವತ್ತು ರೂಪಾಯಿ ಇದಕ್ಕೆ ಬಾಡಿಗೆ ಬರಬಹುದು. ಅಷ್ಟರಿಂದಲೇ ನಮ್ಮ ಜೀವನ ಸಾಗಬಹುದು-” ಎಂದು ಸುಂದರಿ ಹೇಳುವಾಗ ಚೌಡಪ್ಪನವರಿಗೆ ಅತೃಪ್ತಿ, ಅಸಂತೋಷ ಉಕ್ಕೇರಿತು. ಆದರೂ ತಡೆದುಕೊಂಡು ಸುಮ್ಮನೆ ಕೂತು, ಕಣ್ಣು ಹಾರಿಸಿ ಮುದುಕಿಗೇ ಎಲ್ಲ ವಿಲಾವರಿ ಮಾಡುವಂತೆ ಸೂಚನೆ ಕೊಟ್ಟರು.

“ನಿನ್ನ ಹಟವನ್ನೇ ಹಿಡಿಯಬೇಡ ಸುಂದರೀ. ನೀನು ಎಷ್ಟೆಂದರೂ ಹೆಣ್ಣು. ನಿನ್ನ ಮಗಳೂ ಹೆಣ್ಣು—ತಿಳಿಯಿತೇ? ಹೆಂಗಸರು ಹೆಚ್ಚಾಗಿ ಗಂಡಸರು ಹೇಳಿದಂತೆ ಕೇಳಬೇಕು. ಅಲ್ಲದೆ ನಿನ್ನ ಅವಸ್ಥೆ ನಿನಗೆ ಗೊತ್ತಿದೆ. ನನಗೂ ಗೊತ್ತಿದೆ. ನಿನ್ನನ್ನು ಅವರು ಇಲ್ಲಿಯ ವರೆಗೆ ಹೂವಿನಂತೆ ಕಾದುಕೊಂಡು ಬಂದಿದ್ದಾರೆ. ನಿನಗೆ ಯಾವುದಕ್ಕೂ ಕಡಿಮೆಯಾಗಲಿಕ್ಕೆ ಬಿಡಲಿಲ್ಲ. ಆ ವಿಷಯ ನನಗೇ ಗೊತ್ತಿದೆ. ಬೇರೆ ಯಾರು ಏನು ಹೇಳಿದರೂ ನಾನು ನಂಬಲಾರೆ. ಇನ್ನಾದರೂ ಅಷ್ಟೇ, ಅವರು ನಿನ್ನನ್ನು ಬಿಟ್ಟು ಹಾಕುವುದಿಲ್ಲ. ಅವರನ್ನು ಬಿಟ್ಟರೆ ನಿನಗೆ ಬೇರೆ ಗತಿಯೂ ಇಲ್ಲ! ತಿಳಿಯಿತೇ? ನಿನ್ನ ಹೆಸರಿನಲ್ಲಿ ಈ ಬಂಗಲೆ ಬಿಟ್ಟಿದ್ದಾರೇನೋ ಹೌದು. ಆದರೆ ಅದನ್ನು ಹಿಂದೆ ಪಡೆದುಕೊಳ್ಳಲಿಕ್ಕೂ ಅವರಿಗೆ ಅಧಿಕಾರವಿದೆ. ಅವರ ಅಧಿಕಾರ, ಗೌರವ, ಮರ್ಯಾದೆ ನಿನಗಿನ್ನೂ ತಿಳಿದಂತೆ ಕಾಣುವುದಿಲ್ಲ. ಆ ಮಾತು ಬೇರೆ ಬಿಡು.

ಆದರೆ ನೀನು ಮಾತ್ರ ಅವರ ವಿರುದ್ಧ ಹೋಗುವುದು ಸರಿಯಲ್ಲ. ನೀನು ಹೋಗುವುದಾದರೂ ಎಲ್ಲಿಗೆ ?" ಎಂದು ಮುದುಕಿ ಸ್ವಲ್ಪ ನಾಲಗೆ ಉದ್ದ ಬಿಟ್ಟೇ ಮಾತಾಡಿದಳು. ಸುಂದರಿಗೆ ಅವಳ ಕೊನೆಯ ಮಾತು ಶಲ್ಯದಂತೆ ನಟ್ಟಿತು.

" ಹೌದು ಮುದುಕೀ, ನಾನು ಹೋಗುವುದಾದರೂ ಎಲ್ಲಿಗೆ ? ಎಲ್ಲಿಗೂ ಇಲ್ಲ. ಹೌದು ನೀನು ಹೇಳುವುದೂ ಸರಿಯೇ. ಹೋಗಬಹುದು—ಯಮಪುರಿಗೆ. ಅಲ್ಲಿಗೆ ಮಾತ್ರ ಹೋಗಬಹುದು. ಆದರೆ ಅಲ್ಲಿಗೆ ಹೋಗುವ ಮೊದಲು ನನ್ನ ಮಗುವನ್ನು ಒಂದು ದಾರಿಗೆ ಹಚ್ಚಿ ಹೋಗಬೇಕೆಂದು ಆಸೆ. ಪರಮಾತ್ಮನು ಅದನ್ನು ನೆರವೇರಿಸಿಕೊಟ್ಟರೆ ಸಾಕು. " ಎಂದು ಖಿನ್ನಳಾಗಿ ಸುಂದರಿ ಹೇಳಿದಳು.

"ನಿನ್ನ ಮಗಳನ್ನು ನಾನೇನು ಹಳ್ಳಕ್ಕೆ ಹಾಕುವುದಿಲ್ಲ ಸುಂದರೀ. ನಾನೇನು ಹೆಣ್ಣು ಹಡೆದೇ ಇಲ್ಲವೆಂದು ತಿಳಿದಿಯಾ ? ನಾನು ಅಂಥ ನೀಚತನವೇನಾದರೂ ಮಾಡಿದರೆ ನನ್ನ ರುಂಡವನ್ನೇ ಕಡಿದು ಬಿಡು. ಅಲ್ಲ, ನನ್ನ ರುಂಡ ಹಾರಿ ಹೋಗಲಿ ! ನಿನಗೆ ನಾನೆಂದೂ ಕೆಡಕು ಬಯಸಲಾರೆ. ಅಂಥ ಅವ್ಯಾಪಾರ ನನ್ನ ಮನಸ್ಸಿನಲ್ಲಿ ಇದ್ದುದಾದರೆ ದೇವರು ನಾಳೆ ಬೆಳಗ್ಗೆ ನಿನ್ನ ಮುಖ ನೋಡಲು ನನ್ನ ಉಳಿಸಲಿಕ್ಕಿಲ್ಲ ತಿಳಿಯಿತೇ ?" ಎಂದು ಮುದುಕಿ ಪ್ರಾಮಾಣಿಕತನದಿಂದ ನುಡಿದಳು. ಅವಳ ಮಾತಿನ ಮೇಲೆ ಸುಂದರಿಗೂ ವಿಶ್ವಾಸ ಹುಟ್ಟಿತು.

" ನಾನು ನಿನ್ನ ಮನಸ್ಸು ನೋಯಿಸುವಂಥ ಮಾತನ್ನು ಆಡಿದ್ದರೆ ಕ್ಷಮಿಸು ಮುದುಕಿ. ನಿನ್ನ ಮೇಲೆ ನನಗೆ ವಿಶ್ವಾಸವಿದೆ.........ನೀನೊಬ್ಬಳೇ ನನ್ನನ್ನು ' ಸುಂದರಿ ' ಎಂದು ಕರೆಯುವವಳು. ಉಳಿದವರಿಗೆಲ್ಲ ನಾನು ' ಸೂಳೆ ' " ಎಂದು ಖಿನ್ನಳಾಗಿಯೇ ಹೃದಯದಾಳದಿಂದ ನುಡಿಯತೊಡಗಿದಳು.

" ಇಲ್ಲಿಯ ಜನವೇ ಹಾಗೆ ಸುಂದರೀ ! ನಿನಗೇ ಗೊತ್ತಿದೆಯಲ್ಲ, ನಿನ್ನ ಮಗಳು—ಯಾಕೆ ? ನನ ಮಗಳೇ—ಗೋದಿಗೆ ಸಿಕ್ಕ ಪ್ರತಿಫಲ ! ಯಾಕೆ? ಗೊತ್ತೇ ? ನಿನ್ನ ಮಗಳು ಅವಳು ಎಂದು ಅಂತೆ ! ನೀನೇನು ಹೆದರ

ಬೇಡ. ನಾನು ಆ ಹಳ್ಳಿಯ ಸಾಲೆಯಲ್ಲಿ ಯಾರಾದರೂ ನನ್ನ ಮುದ್ದು ಗೋದಿಯನ್ನು 'ಸೂಳೆಯ ಮಗಳು!' ಎಂದು ಕರೆದರೆ ಅವರನ್ನು ಕೊಂದೇ ಹಾಕುತ್ತೇನೆ. ನಿನ್ನ ಮಗಳೆಂದು ಅವರಿಗೆಲ್ಲ ಹೇಗೆ ತಿಳಿಯಬೇಕು? ನಾನು ಏನು ಹೇಳುತ್ತೇನೆ ಗೊತ್ತೇ? ನನ್ನ ಮಗಳು........ನನ್ನ ಮಗಳು ಎಂದು ಧೈರ್ಯದಿಂದ ಹೇಳುತ್ತೇನೆ. ತಿಳಿಯಿತೇ ಸುಂದರೀ? ಹೆದರಬೇಡ" ಎಂದು ತನ್ನ ಎದೆ ತಟ್ಟಿಕೊಂಡು ಸುಂದರಿಗೆ ಅಭಯವಚನವಿತ್ತಳು ಮುದುಕಿ.

"ನೀನು ಬಹುಶಃ ಪೂರ್ವಜನ್ಮದಲ್ಲಿ ನನ್ನ ತಾಯಿಯಾಗಿ ಹುಟ್ಟಿರ ಬಹುದು ಮುದುಕೀ" ಎಂದು ಸುಂದರಿ ಅವಳ ತೊಡೆಯಮೇಲೆ ತಲೆಯಿಟ್ಟು ಒಂದೇಸವನೆ ಅಳತೊಡಗಿದಳು. ಆ ದೃಶ್ಯವನ್ನು ನೋಡಲು ಧೈರ್ಯ ಸಾಲದ ಚೌಡಪ್ಪ ಅಲ್ಲಿಂದ ಎದ್ದು ಹೊರಗೆ ಹೋಗಿ, ಶೌಚಕೂಪಕ್ಕೆ ಪ್ರಯಾಣ ಬೆಳಸಿದರು. ಅದರೊಳಗೆ ಕೂತು ವಿಚಾರಿಸತೊಡಗಿದರು. ಅವರು ಎದ್ದು ಹೋದದ್ದು ಸುಂದರಿಗಾಗಲೀ, ಮುದುಕಿಗಾಗಲೀ ಗೊತ್ತಿರಲಿಲ್ಲ.

"ನಿನ್ನ ಮೇಲೆ ಪೂರ್ಣ ವಿಶ್ವಾಸವಿಡುತ್ತೇನೆ ಮುದುಕೀ. ಬಳ್ಳಿಯ ಮೇಲಿನ ಹೂವಿನಂತೆ ಅವಳನ್ನು ರಕ್ಷಿಸು. ಬಳ್ಳಿ ನಾನು, ಇಲ್ಲಿಯೇ ಇದ್ದು ಬಹು ದೂರ ನಿನ್ನಲ್ಲಿ ಇರುವ ನನ್ನ ಮುದ್ದು ಪುಷ್ಪಕ್ಕಾಗಿ ಕೊರಗುತ್ತಿರುತ್ತೇನೆ. ಅದನ್ನು ಯಾರೂ ಹಾಳು ಮಾಡದಂತೆ ನೋಡು........" ಎಂದು ಸುಂದರಿ ಮುದುಕಿಗೆ ಬೇಡಿಕೊಂಡಳು—ಅಳುತ್ತಲೇ.

"ಇಲ್ಲಿ ಇದ್ದರೆ ಇನ್ನೂ ನಿನ್ನ ಮನಸ್ಸು ಮರುಳಾಗುತ್ತದೆ ಸುಂದರೀ. ಅವಳನ್ನು ಇಲ್ಲಿ ನೀನು ಇದ್ದಲ್ಲಿ ಇಟ್ಟು ನಾಲ್ಕು ಜನರಿರುವ ಸಮಾಜದ ಮುಂದೆ ಇಡಬೇಡ. ಒಟ್ಟಾರೆ ನೀನು ಇದ್ದಲ್ಲಿ ಅವಳು ಇರಬಾರದು. ಈ ರೀತಿಯಲ್ಲಿ ನಿನ್ನ ಮನಸ್ಸು ಕೆಡುತ್ತದೆಂದು ನನಗೆ ಎಂದೋ ಗೊತ್ತಿತ್ತು ಸುಂದರೀ. ಅವಳು ಇದ್ದಲ್ಲಿಯೂ ನೀನು ಇರಬಾರದು ತಿಳಿಯಿತೇ? ಅವಳು ದೊಡ್ಡವಳು ಆಗುವ ವರೆಗೆ......ಇನ್ನು ಬಹಳ ದಿವಸ ಬೇಡ ಅದಕ್ಕೆ. ಇನ್ನೊಂದು ಏಳೆಂಟು ವರುಷಗಳಲ್ಲಿ ನಿನ್ನ ಮಗಳು ದೊಡ್ಡವಳಾಗಿ ಒಳ್ಳೆಯ ದಾರಿ ಹಿಡಿಯುತ್ತಾಳೆ. ನೀನೇನು ಹೆದರಬೇಡ, ಚಿಂತಿಸಬೇಡ. ನನ್ನ ಜೀವಮಾನವಿರುವ ಪರ್ಯಂತ ಅವಳ ಭವಿಷ್ಯತ್ತಿಗೆ ಯಾವ ಕುಂದೂ ಬಾರ ದಂತೆ ನಾನು ನೋಡಿಕೊಳ್ಳುತ್ತೇನೆ. ದೇವರು ಅಲ್ಲಿಯ ತನಕ ನನ್ನನ್ನು

ಉಳಿಸಬಹುದು...............ಸುಂದರೀ, ನೀನು ಏನೇ ಮಾಡು, ಏನೇ ತಿಳಿದುಕೋ—ಆದರೆ ನಾನು ಹೇಳುವ ಮಾತನ್ನು ಹೇಳಿದೆ. ಇನ್ನು ಕೊನೆಯದಾಗಿ ಒಂದು ಮಾತನ್ನು ಹೇಳುತ್ತೇನೆ. ನೀನು ಅದನ್ನು ಕೇಳಿದರೆ ಕೇಳು, ಬಿಟ್ಟರೆ ಬಿಡು."

"ನಿನ್ನ ಮಾತನ್ನು ನಾನೆಂದಿಗೂ ಮೀರುವುದಿಲ್ಲ ಮುದುಕಿ.......ಇಲ್ಲಿಯವರೆಗೆ ಎಂದಾದರೂ ಮೀರಿದ್ದೇನೆಯೇ ಮುದುಕಿ? ಹೇಳು ಹೇಳು. ನಿನಗೆ ಹೇಳುವ ಅಧಿಕಾರವಿದೆ ಮುದುಕಿ" ಎಂದು ಬಿಕ್ಕಿ ಬಿಕ್ಕಿ ಅಳುತ್ತ ಸುಂದರಿ ಹೇಳಿದಳು.

"ನಾನು ಹೇಳುವುದಾದರೂ ನಿನ್ನ ಒಳ್ಳೆಯದಕ್ಕೇ. ನೋಡು ಸುಂದರೀ ನೀನು ಆ ಧನಿಯರನ್ನು ಬಿಟ್ಟು ಹಾಕಬೇಡ" ಎಂದು ಮುದುಕಿ ಚೌಡಪ್ಪ ಕುಳಿತುಕೊಂಡ ಕುರ್ಚಿಗೆ ಬೆಟ್ಟು ತೋರಿಸಬೇಕಾಯಿತು. ಆಗ ಅಲ್ಲಿ ಖಾಲಿ ಕುರ್ಚಿ ಮಾತ್ರ ಕುಳಿತಿತ್ತು. ಅದನ್ನು ಮುದುಕಿ ನೋಡಿ ಮಾತನ್ನು ಮೊದಲಿಗಿಂತ ಸ್ವಲ್ಪ ಸ್ವಚ್ಛಂದದಿಂದ ಪ್ರಾರಂಭಿಸಿದಳು.

"ಯಾರು ಏನೇ ಹೇಳಲಿ, ನೀನು ಅವರನ್ನು ಪ್ರೀತಿಸುವುದು ಬಿಡಬೇಡ. ನಿನಗೆ ಯಾವ ಪಾಪವೂ ಬಾರದು ಅದರಿಂದ. ಅಲ್ಲದೆ ಅದರಿಂದಾಗುವ ಹಾನಿಯೂ ಇಲ್ಲ ನಿನ್ನೆ....ಏನೋ ನೀನು....ಅವರನ್ನು ಬೆದರಿಸತೊಡಗಿದೆಯಂತೆ.......ಇರಲಿ, ಅದಕ್ಕೇನೂ ಅಡ್ಡಿ ಇಲ್ಲ—ಗಂಡಸನ್ನು ಹಾಗೆ ಆಗಾಗ ಬೆದರಿಸಿ ಬುದ್ಧಿ ಕಲಿಸಬೇಕಾಗುತ್ತದೆ. ಅವನ ಪಶುತ್ವಕ್ಕೆ ನಾವು ಹೆಂಗಸರು ಬಲಿ ಬೀಳಬೇಕಾಗಿಲ್ಲ. ನೀನು ಮಾಡಿದ್ದು ತಪ್ಪೆಂದು ನಾನು ಹೇಳುವುದಿಲ್ಲ....ಆದರೆ ಪಾಪ, ಅದರಿಂದ ಅವರಿಗೆ ಬೇರೆಯೇ ಸಂಶಯ ಬಂತು........ಕಾರಣ ನೀನು ಅವರನ್ನು ಬಿಟ್ಟು ಬೇರೆ ಯಾರನ್ನೊ............ತಿಳಿಯಿತೇ? ನಿನ್ನ ಮೇಲೆ ಅಚಲವಾದ ವಿಶ್ವಾಸವಾಗಿದೆ. ಅಲ್ಲದೆ ನಿನ್ನೆ ಆದ ಪ್ರಕರಣಕ್ಕೂ ಅವರು ನಿಸ್ಸಂದೇಹರಾಗಿದ್ದಾರೆ. ಅದನ್ನೆಲ್ಲ ನಾನೇ ನಿನ್ನೆ ರಾತ್ರಿ ವಿಲಾವರಿ ಮಾಡಿದೆ. ಅವರು ಕಾರು ತೆಗೆದುಕೊಂಡೇ ನನ್ನ ಹಳ್ಳಿಗೆ ಬಂದಿದ್ದರು. ನಾನು ಅದಕ್ಕಾಗಿ ಬಂದೆ. ಇಲ್ಲದಿದ್ದರೆ ಬರುತ್ತಿದ್ದಿಲ್ಲ ಇಷ್ಟು ಬೇಗ!............ ನನ್ನ ಮಗಳು ಹೋಗಬೇಡೆಂದು ನನ್ನನ್ನು ಸಾಕಷ್ಟು ಕಾಡಿಸಿದಳು. ಆದರೂ ನಾನು ಧನಿಯರ ಮಾತು ಕೇಳಿದೆ. ಯಾಕೆ ಅಂದರೆ ಅವರ ಉಪ್ಪು ಅನ್ನ

ಉಂಡಿದ್ದೇನೆ—ಅದು ಎಲುಬಾಗಿದೆ—ಎಂದು, ಉಪ್ಪುಂಡ ಮನೆಗೆ ಎರಡು ಬಗೆಯುವ ಸ್ವಭಾವ ನನ್ನದಲ್ಲ..........ನಾನು ಹೇಳಿದ್ದು ತಿಳಿಯಿತೇ?" ಎಂದು ಮುದುಕಿ ಕೇಳುವಾಗ ಸುಂದರಿಗೆ ಏನು ಹೇಳಬೇಕೆಂದು ತಿಳಿಯಲಿಲ್ಲ "ನಿನ್ನೆ ರಾತ್ರಿ ಆ ನೀಚನು ಬಂದು ಹೋದ ಸುದ್ದಿಯನ್ನು ತಿಳಿಸಲೇ?" ಎಂದು ಅವಳ ಮನಸ್ಸು ಕೇಳತೊಡಗಿತು. ಆದರೆ ಆಕೆ ಆ ಸುದ್ದಿಯನು ಎತ್ತಲಿಲ್ಲ. "ಹನುಮನಿದ್ದರೆ ಅವನಿಗೆ ತಕ್ಕ ಪ್ರತಿಫಲ ದೊರಕೀತು" ಎಂದು ಸುಮ್ಮನಾದಳು. ಅದನ್ನು ಅವಳೊಡನೆ ಹೇಳಿ ಪ್ರಯೋಜನವಿಲ್ಲ ವೆಂದೂ ಅವಳ ಅಂತರಾತ್ಮ ನುಡಿಯತೊಡಗಿದ. ಯಾಕಂದರೆ ಮುದುಕಿ ಬಾಯಿಯಿಂದ ಎಷ್ಟು ಒಳ್ಳೆಯದು ಮಾತಾಡಿದರೂ, ಹಿಂದೆಲ್ಲ ಎಷ್ಟೋ ಸಲ ಅವಿಶ್ವಾಸಕ್ಕೆ ಪಾತ್ರಳಾಗಿದ್ದಳು—ಇವಳೊಡನೆ. ಆದರೆ ಇಂದು ಅವಳು ತೋಡಿಕೊಂಡ ಮರುಕವನ್ನು ನೆನೆದು ಅದನ್ನೆಲ್ಲ ಸುಂದರಿ ಮರೆತುಬಿಟ್ಟಳು. ಆದರೆ ಆ ನೀಚನ ಸುದ್ದಿಯನ್ನು ಹೇಳಲು ಅವಳ ಮನ ಒಪ್ಪಲಿಲ್ಲ. ಬದಲು "ನೀನು ಹೇಳಿದಂತೆ ಮಾಡುತ್ತೇನೆ" ಎಂದು ಅವಳಿಗೆ ವಚನವಿತ್ತಳು ಸುಂದರಿ. ಆಗ ಮುದುಕಿಗೆ ಸಂತೋಷವಾಯಿತು. ಅಂತೂ ಗೆದ್ದೆನೆಂದು ಅವಳಿಗೆ ಹೆಮ್ಮೆಯೂ ಬಂತು. "ಇನ್ನೇಕೆ ಅಳುವುದು?" ಎಂದು ಸುಂದರಿಗೆ ಬುದ್ಧಿ ಹೇಳಿ ಅಲ್ಲಿಂದ ಎದ್ದಳು. ಸುಂದರಿಯೂ ಎದ್ದು ಹಿಂದೆ ನೋಡಿದಳು. ಆದರೆ ಅಲ್ಲಿ ಚೌಡಪ್ಪ ಇರಲಿಲ್ಲ. ಆಕೆ ಅವರನ್ನು ನೋಡಿದಳೋ ಇಲ್ಲವೋ ಗೊತ್ತಿಲ್ಲ. ಆದರೆ ಮುದುಕಿ ಮಾತ್ರ "ಚೌಡಣ್ಣಾ" ಎಂದು ಒಳ್ಳೇ ಹುಮ್ಮಸದಿಂದ ಒಂದು ಹೊಸ ಹೆಸರಿನಿಂದಲೇ ಚೌಡಪ್ಪನವರನ್ನು ಕರೆಯುತ್ತ ಹೊರಟಳು.

"ಗೋದಾ, ನನ್ನ ಕಂದಾ" ಎನ್ನುತ್ತ ಸುಂದರಿಯೂ ಒಳಗೆ ಹೋದಳು. ಆದರೆ ಒಳಗೆ ಗೋದಿ ಇರಲಿಲ್ಲ. ಸ್ವಲ್ಪ ಜೋರಿನಿಂದ ಸುಂದರಿ ಕೂಗಿದೊಡನೆ ಗೋದಿ ಬಂದಳು. "ಎಲ್ಲಿ ಹೋಗಿದ್ದೆ ಮಗೂ?" ಎಂದು ಪ್ರೀತಿಯಿಂದ ಕೇಳಿದಳು. "ಇಲ್ಲಿಯೇ ದೊಡ್ಡ ರಸ್ತೆಯ ಬದಿಗೆ ಹೋಗಿದ್ದೆ ಅಮ್ಮಾ. ಅಲ್ಲಿ ಒಂದು ಬಾಟ್ಲಿ ಇತ್ತು ಅಮ್ಮಾ. ಅದನ್ನು ತಂದು ನಮ್ಮ ಬಚ್ಚಲು ಮನೆಯಲ್ಲಿ ಇಟ್ಟಿದ್ದೇನೆ. ಬಹಳ ಚೆಂದ ಇದೆಯಮ್ಮಾ" ಎಂದು ಸಂತೋಷದಿಂದ ಹೇಳಿದಳು. ಅಂತೇ, "ನೀನು ನೋಡಿ ಬಾ" ಎಂದು

ತಾಯಿಯನ್ನು ಎಳೆದುಕೊಂಡು ಅಲ್ಲಿಗೆ ಒಯ್ಯೊದ್ದು ಆಯಿತು. ಆ ಬಾಟ್ಲಿಯನ್ನು ಕಂಡೊಡನೆ ಪುನಃ ಅವಳಿಗೆ ನಿನ್ನೆ ರಾತ್ರಿಯ ಆ ನೀಚನ ನೆನಪಾಯಿತು. "ಇದನ್ನು ಯಾಕೆ ತಂದೆ ಮಗೂ ?" ಎಂದು ಗೋದಿಗೆ ಪ್ರಶ್ನಿಸಿದಳು. ಆಗ ಅವಳಿಗೆ ಕ್ರೋಧ ಉಕ್ಕಿ ಬಂದಿತ್ತು. "ನನಗೆ ಆಡಲಿಕ್ಕೆ ಬೇಕವ್ಮಾ ಆದು" ಎಂದು ಗೋದಿ ಹೇಳುತ್ತಿರುವಷ್ಟರಲ್ಲೇ ಅದನ್ನು ಬೀಸಿ ಒಗೆದುಬಿಟ್ಟಳು ಸುಂದರಿ. "ಆ ನೀಚನ ಜನ್ಮವೂ ಈ ಬಾಟ್ಲಿಯಂತೆ ಪುಡಿಯಾಗಿ ನಾಶವಾಗಲಿ" ಎಂದು ಮನಸ್ಸಿನಲ್ಲೇ ಶಪಿಸಿದಳು. "ಅದನ್ನು ಯಾಕೆ ಚೆಲ್ಲಿದಿ?" ಎಂದು ಗೋದಿ ಥಟ್ಟನೆ ತಾಯಿಯ ಹಿಂದೆ ಸರಿದು ನಿಂತಳು. ಅಷ್ಟರಲ್ಲಿ ಮುದುಕಿಯೂ ಚೌಡಪ್ಪನವರನ್ನು ಹಿಂಬಾಲಿಸುತ್ತ ತನ್ನ ವಿಜಯ ವಿಕ್ರಮಗಳನ್ನೆಲ್ಲ ಅವರಿಗೆ ತಿಳಿಯಪಡಿಸಿದಳು.

"ಹಾಗಾದರೆ ಯಾವಾಗ ಅಲ್ಲಿ ವಸ್ತಿ ಹೂಡುತ್ತಿ ?" ಎಂದು ಚೌಡಪ್ಪ ಅವಳಿಗೆ ಪ್ರಶ್ನಿಸಿದರು.

"ಗಡಿಬಿಡಿ ಯಾಕೆ ಚೌಡಣ್ಣಾ, ಹೇಗೂ ಹಳ್ಳಿಯ ಸಾಲೆ. ನೀವು ಒಂದು ಚೀಟಿ ಕೊಟ್ಟರೆ ಯಾವ ಕಿಲಾಸಿಗೆ (Class) ಬೇಕಾದರೂ ಕೂಡಿಸುತ್ತಾರೆ..........ಅವಳ ತಲೆಯ ಗಾಯ ವಾಸಿಯಾದ ಮೇಲೆ ಕರೆದೊಯ್ಯುತ್ತೇನೆ. ಅಲ್ಲಿಯವರೆಗೆ ನಾನು ಊರಿಗೆ ಹೋಗಿ ಅಲ್ಲಿ ಒಂದು ಬಾಡಿಗೆಮನೆ ನೋಡಿಕೊಂಡು ಬರುತ್ತೇನೆ."

"ಅಡ್ಡಿ ಇಲ್ಲ, ಅಡ್ಡಿ ಇಲ್ಲ. ಇವತ್ತು ಸಂಜೆಗೆ ನಮ್ಮ ಮನೆಗೆ ಬಂದು ನೂರೋ—ಇನ್ನೂರೋ—ಎಷ್ಟು ಬೇಕು— ಅಷ್ಟು ರೂಪಾಯಿ ಒಯ್ಯು. ಮತ್ತು ನೋಡು ಮುದುಕೀ, ಹುಡುಗಿಯನ್ನು ಹೂವಿನ ಹಾಗೆ ಜೋಪಾನ ಮಾಡಬೇಕು. ತಿಳಿಯಿತೇ ನಾನು ಹೇಳಿದ್ದು ? ಹೇಗೆ ಸುಂದರೀ—ನಾನು ಹೇಳುವುದು ? ನಿನ್ನ ಒಪ್ಪಿಗೆ ಇದೆಯಲ್ಲಾ ?" ಎಂದು ಚೌಡಪ್ಪ ಅಲ್ಲಿಯೇ ಇರುವ ಸುಂದರಿಯನ್ನೂ ಕೇಳಿದರು. ಚೌಡಪ್ಪನವರ ಮಾತು ಕೇಳಿ ಅವಳಿಗೂ ಅವರ ಮೇಲೆ ಕರುಣೆ ಹುಟ್ಟಿತು. "ಇವರಲ್ಲಿಯೂ ಒಳ್ಳೆಯತನ ಸಾಕಷ್ಟು ಇದೆ. ನಾನೇ ತಪ್ಪು ಭಾವಿಸಿದ್ದೇನೆ" ಎಂದು ಒಮ್ಮೆ ತನ್ನನ್ನೇ ಹಳಿದುಕೊಂಡಳು. "ನೀವು ಹೇಳಿದಂತೆ ನಾನು" ಎಂದು ಚೌಡಪ್ಪನವರಿಗೆ ಉತ್ತರ ಹೇಳಿಯೂ ಬಿಟ್ಟಳು.

ಅಂದು ಇಡೀ ದಿವಸ ಹೊರಗಿನ ಮೈ ನೋವಿನಿಂದ ಸುಂದರಿ ಬಳಲಿದರೂ ಅವಳ ಮನಸ್ಸು ನೆಮ್ಮದಿಯಿಂದ ಇತ್ತು. ಎಲ್ಲವನ್ನೂ ಮರೆಯಲು ಪ್ರಯತ್ನಿಸಿದಳು. ತನ್ನ ಮಗಳು ಮುಂದೆ ಒಬ್ಬಳು ಸಮಾಜದ ಸೇವಕಿಯಾಗುತ್ತಾಳೆಂದು ಕನಸ್ಸನ್ನೂ ಆಕೆ ಕಟ್ಟಿಯಾಯಿತು.

ನಾಲ್ಕಾರು ದಿನಗಳ ವರೆಗೂ ಅವಳ ಮೈನೋವು ಇತ್ತು. ಆಮೇಲೆ ಅದು ಮಾಯವಾಯಿತು. ಆದರೆ ಅವಳ ಮನಸ್ಸಿನಿಂದ ಆ ಸನ್ನಿವೇಶದ ಹುಣ್ಣು ಹಾಗೇ ಉಳಿಯಿತು. ದಿನಗಳು ಗಿರಣಿಯ ಗಾಲಿಯಂತೆ ಉರುಳಿದವು. ಗೋದಿಯನ್ನು ಕರೆದುಕೊಂಡು ತನ್ನ ಹಳ್ಳಿಗೆ ಒಯ್ದಳು ಮುದುಕಿ.

ಐದನೆಯ ಅಧ್ಯಾಯ

ಮಗಳು ಮನೆ ಬಿಟ್ಟು ಹೋದ ಮೇಲೆ ಸುಂದರಿಗೆ ಮನೆಯೆಲ್ಲ ಮಸಣದಂತೆ ಕಾಣತೊಡಗಿತು. ಕೆಲವು ದಿನಗಳಂತೂ ವರ್ಷಗಳಂತೆ ದೀರ್ಘವೆನಿಸಿದವು. ಆದರೂ ಆಕೆ ಅದನ್ನೆಲ್ಲ ಸಹಿಸಿಕೊಂಡಳು. ಅವಳ ಮನಸ್ಸು ಕಟ್ಟಿನೊಳಗೆ (Frame) ಒಡೆದು ಕೂತ ಕನ್ನಡಿಯಂತಾಗಿ ಬಾಳ ಚಿತ್ರವನ್ನು ಅಂದಗೆಡಿಸಿತ್ತು. ಚೌಡಪ್ಪನವರ ಈಗಿನ ಹೊಸ ವ್ಯವಸ್ಥೆಯ ಬಲವಂತದ ಕಟ್ಟು (Frame) ಅವಳ ಆ ಬಿರಿದ ಚಿತ್ತವನ್ನು ಹೇಗೋ ಹಿಡಿದುಕೊಂಡಿತ್ತು. ಆದರೂ ಅವಳ ಬಾಳು ಒಡೆದಂತೆಯೇ. ಸೀಳಿದ ಕನ್ನಡಿ ಬಾಳೀತೇ ? ಅದಕ್ಕೆ ತಾಳಿಕೆ ಉಂಟೇ ?

ಗೋದಿ ಮನೆ ಬಿಟ್ಟು ನಾಲ್ಕೈದು ತಿಂಗಳು ಹೇಗೋ ಕಳೆದವು. ಆಗ ಒಂದು ದೀರ್ಘ ಕಾಲಾವಧಿಯ ರಜೆಯೂ ಅವಳ ಸಾಲೆಗೆ ಬಂತು ಮುದುಕಿಗೆ ಕಾಗದ ಬರೆದು ಮಗಳನ್ನು ಬರಮಾಡಿಕೊಂಡಳು. ಕಣ್ಣುತುಂಬ ಗೋದಿಯನ್ನು ನೋಡಿ ಸುಂದರಿಗೆ ಸಂತೋಷವಾಯಿತು. ಬಣ್ಣ ತುಂಬಿಕೊಂಡು ದಿನದಿನಕ್ಕೂ ಗೋದಿ ಬೆಳೆಯುತ್ತಿದ್ದಳು. ತಿನ್ನಲಿಕ್ಕೆ, ಉಡಲಿಕ್ಕೆ, ಯಾವುದಕ್ಕೂ ಕಡಿಮೆ ಇರಲಿಲ್ಲ. ಅಲ್ಲದೆ ಹಳ್ಳಿಯ ಹವೆಯೂ ಅವಳ

ಆರೋಗ್ಯಕ್ಕೆ ಹಿತಕರವಾಗಿತ್ತು ಮುದುಕಿಯಾದರೂ ಪ್ರೀತಿಯಿಂದ ಗೋದಿಗೆ ಹಸುವಿನ ಹಾಲನ್ನೇ ಕೊಡುತ್ತಿದ್ದಳು. ತಾನು ಮಾತ್ರ ಚಹಾ ಸೇವಿಸುತ್ತಿದ್ದಳು ಬೆಳಿಗ್ಗೆ. ಇತ್ತ ಚೌಡಪ್ಪನವರಾದರೂ ಮುದುಕಿ ಕೇಳಿದುದಕ್ಕಿಂತ ನಾಲ್ಕು ರೂಪಾಯಿ ಹೆಚ್ಚೇ ಮನಿಯಾರ್ಡರ್ ಮಾಡುತ್ತಿದ್ದರೇ ವಿನಾ ಕಡಿಮೆ ಕಳುಹಿಸಿ ಅವರಿಗೆ ಗೊತ್ತೇ ಇರಲಿಲ್ಲ.

"ಸುಖವಾಗಿದ್ದೀಯಾ ಮಗು ?" ಎಂದು ಸುಂದರಿ ತನ್ನ ಮಗಳನ್ನು ಪ್ರೀತಿಯಿಂದ ಎತ್ತಿಕೊಂಡಳು —ಅವರು ಮನೆಗೆ ಮುಟ್ಟಿದೊಡನೆ. ಗೋದಿಯನ್ನು ಮೊದಲಿನಂತೆ ಒಮ್ಮೆಲೇ ಎತ್ತುವುದೂ ಸುಂದರಿಗೆ ಕಷ್ಟವಾಯಿತು. ಅಷ್ಟು ಮೈತುಂಬಿ ಬೆಳೆದಿದ್ದಳು. "ನೀನು ಯಾಕವ್ವಾ ಸೊರಗಿದ್ದಿ ?" ಎಂದು ತಾಯಿಗೆ ಆಕೆ ಪ್ರಶ್ನೆ ಕೇಳಿದಳು. "ನಿನಗೆ ಹಾಗೆ ಕಾಣುತ್ತದೆ ಮಗೂ" ಎಂದು ಸುಂದರಿ ಮಗಳನ್ನು ಸಮಾಧಾನ ಪಡಿಸಿದಳು.

ಅಂದು ಚೌಡಪ್ಪನವರೂ ಮನೆಗೆ ಬಂದಿದ್ದರು. ಗೋದಿಯನ್ನು ನೋಡಬೇಕಾದರೆ ಅವರಿಗೆ ಸ್ವಲ್ಪ ಸಮಯ ಹಿಡಿಯಿತು. ಯಾಕಂದರೆ ಮೊದಲಿನಂತೆ ಅವಳು ಅವರು ಬಂದೊಡನೆ ಅಡಗಿಕೊಡಲು ಪ್ರಯತ್ನಿಸಿದಳು. ಕೊನೆಗೆ ಮುದುಕಿಯೇ ಅವಳನ್ನು ಎಳೆದು ತಂದು ಚೌಡಪ್ಪನವರಿಗೆ ತೋರಿಸಿ "ಚೆನ್ನಾಗಿ ಇದ್ದಾಳಲ್ಲ ?" ಎಂದು ಕೇಳಿದಳು.

"ಬೇಷ್" ಎಂದರು ಚೌಡಪ್ಪ.

"ಸಾಕೋಣ ಎಂತಹದ್ದು ? ನಾನು, ನಾನು ಮುದುಕಿ ಸಾಕುವವಳು! ಇಂಥ ಎಷ್ಟೋ ಮಕ್ಕಳನ್ನು ಹೆತ್ತಿದ್ದೆ........ಆದರೆ ನನಗೆ ಪುಣ್ಯವಿಲ್ಲ" ಎಂದು ತಾನು ಕಳೆದುಕೊಂಡ ಪುತ್ರರತ್ನಗಳನ್ನು ನೆನೆದು ದುಃಖಿಸತೊಡಗಿದಳು.... ...."ನನ್ನ ಪಾಲಿಗೆ, ಉಳಿಯಿತು........ಒಂದು ಸೊಟ್ಟ ಕಾಲಿನ, ಒಂದೇ ಕಣ್ಣಿನ ಹೆಣ್ಣುಮಗಳು........ ಏನು ಮಾಡುವುದು ? ಚೌಡಣ್ಣಾ........ ನನ್ನ ಹಣೆಬರಹ ! ಅದನ್ನು ಯಾರಿಂದಾದರೂ ತಿದ್ದಲಿಕ್ಕೆ ಸಾಧ್ಯವುಂಟೇ ?" ಎಂದು ಮುದುಕಿ ಅತ್ತೇ ಬಿಟ್ಟಳು.

"ಅಳಬೇಡ ಮುದುಕೀ ಅಳಬೇಡ. ನೀನು ಯಾಕೆ ಅಳುತ್ತಿ ? ನಿನಗೆ ಹಣಕ್ಕೆ ಅಡಚಣೆ ಬಂದರೆ ನನಗೆ ಹೇಳು" ಎಂದು ಚೌಡಪ್ಪ ಮುದುಕಿಗೆ

ಧೈರ್ಯ ಹೇಳಿದರು. ಅವರ ಮಾತಿಗೆ ಬೆಲೆಗೊಟ್ಟು ಮುದುಕಿ ಸುಮ್ಮನಾದಳು. ಆಗ ಗೋದಿ ಅಲ್ಲಿಂದ ಜಾರಿಕೊಂಡು ಓಡಿದಳು.

ಸ್ವಲ್ಪ ಹೊತ್ತು ಮೌನವಾಗಿ ಕುಳಿತ್ತಿದ್ದರು. ಆಗ ಮುದುಕಿ ಮೆಲ್ಲನೆ ಎದ್ದು ಹೋಗಿ, ಚೌಡಪ್ಪ ಕುಳಿತಿರುವ ಕುರ್ಚಿಯ ಕೆಳಗೆ ಕೂತುಕೊಂಡಳು. "ಈಗ ಹೇಗೆ ? ಮೊದಲಿನ ಹಾಗೆಯೋ ?" ಎಂದು ಕೇಳಿದಳು ಒಳಗೆ ಕೈ ಮಾಡುತ್ತ.

"ಸಾಯಲಿ ಬಿಡು ಮುದುಕಿ ಆ ಸುದ್ದಿ" ಎಂದು ಚೌಡಪ್ಪ ನಿರಾಸೆಯಿಂದಲೇ ಮಾತಾಡಿದರು.

"ಯಾಕೆ ಚೌಡಣ್ಣಾ ?........ ನೀನು ಯಾಕೆ ಹೀಗೆ ಮಾತಾಡುತ್ತಿ ?"

"ನಾನೇ ಈಗ ಇಲ್ಲಿಗೆ ಬರುವುದು ಕಡಿಮೆ ಮಾಡಿದ್ದೇನೆ-"

"ಬಂದಾಗ ಆದರೂ ಸುಖ ಸಿಗುತ್ತದೋ ಇಲ್ಲ ?" ಎಂದು ಮುದುಕಿ ಮೆಲ್ಲನೆ ಕೇಳಿದಳು—ಅವರ ಹತ್ತಿರ—ತೀರ ಹತ್ತಿರ ಸರಿದು.

"ನನಗೂ ಈಗೀಗ ಯಾಕೋ ಈ ಪ್ರಪಂಚದ ಲಕ್ಷ್ಯ..........ಅಲ್ಲ ನಿರಾಸೆ ಹುಟ್ಟಿಬಿಟ್ಟದೆ........ಆ ನೀಚ ಇದ್ದಾನಲ್ಲ........"

"ಯಾರು ? ಯಾರು ?" ಎಂದು ಮುದುಕಿ ನಡುವೆ ಬಾಯಿ ಹಾಕಿ ಕೇಳಿದಳು.

"ಅವನೇ ಸಿದ್ದ್ಯಾ !" ಎನ್ನುವಾಗ ಚೌಡಪ್ಪನವರ ಮುಖ ಕೋಪದಿಂದ ಉರಿಯುತ್ತಿತ್ತು.

"ವಿಶ್ವಾಸಘಾತ ಮಾಡಿದನೇ ! ಅವನು !.......... ಅವನು ಅಂಥವನಲ್ಲ........ಅವನು ಹಾಗೆ ಮಾಡುವವನಲ್ಲ........... ಅವನು ಈಗ ಊರಲ್ಲಿ ಇದ್ದಾನೆಯೋ ?............ಇದ್ದರೆ ನಾನಿಷ್ಟು ಅವನಿಗೆ ಛೀಮಾರಿ ಹಾಕಿ ಬುದ್ಧಿ ಕಲಿಸುತ್ತಿದ್ದೆ....?" ಎಂದು ಮುದುಕಿ ಉಸಿರು ಬಿಡಲಿಕ್ಕೂ ಪುರಸೊತ್ತು ತೆಗೆದುಕೊಳ್ಳದೆ ಮಾತಾಡಲಿಕ್ಕೆ ಹತ್ತಿದಳು.

"ಅವನನ್ನು ಈ ಊರಿಗೆ ಕಾಲಿಡದಂತೆ ಮಾಡಿದ್ದೇನೆ. ಅವನಂಥ ನೀಚ ಈ ಜಗತ್ತಿನಲ್ಲಿ ಇಲ್ಲ" ಎಂದು ಚೌಡಪ್ಪ ಅವನ ಕಥೆ ಹೇಳಲು ಉದ್ಯುಕ್ತರಾದರು. ಆಗ ಮುದುಕಿಯೇ ಅವರನ್ನು ತಡೆದಳು. "ಅವನ ಸುದ್ದಿ

ಇಲ್ಲಿ ಮಾತಾಡುವುದು ಬೇಡ. ನಮ್ಮ ಮನೆಗೆ ನಡೆಯಿರಿ" ಎಂದು ಹೇಳಿ ತನ್ನ ಆಶ್ರಮಕ್ಕೆ ಅವರನ್ನು ಕರೆದುಕೊಂಡು ಹೋದಳು. ಇತ್ತ ಸುಂದರಿಗೆ, "ನಾನು ಚೌಡಪ್ಪಣ್ಣನವರೊಡನೆ ಸ್ವಲ್ಪ ಗುಪ್ತ ಮಾತು ಕತೆ ನಡೆಸುವುದಿದೆ, ನೀನು ಅಲ್ಲಿಗೆ ನನ್ನನ್ನು ಕರೆಯಲಿಕ್ಕೆ ಬರಬೇಡ" ಎಂದು ಹೇಳಿಯೇ ಹೋಗಿದ್ದಳು. ಸುಂದರಿಯಾದರೂ ಅಲ್ಲಿ ಹೋಗುವ ಮನಸ್ಸು ಮಾಡಲಿಲ್ಲ.

ಮುದುಕಿ ತನ್ನ ಮನೆಯ ಬಾಗಿಲಲ್ಲಿ ಕೂತುಕೊಂಡಳು. ಒಳಗೆ ಚೌಡಪ್ಪ ಆಸನ ಹಾಕಿದ್ದರು. ಹೊರಗೆ ಯಾರಾದರೂ ಬರುತ್ತಾರೋ ಎಂಬುದನ್ನು ನಿರೀಕ್ಷಿಸುತ್ತ ಮುದುಕಿ ಕೂತಿದ್ದಳಷ್ಟೆ.

"ಅವನು ಅಷ್ಟು ನೀಚನೇ? ಹಾಗಾದರೆ, ಅಂದು ಅವನು ಆ ನೂರು ರೂಪಾಯಿಯ ನೋಟು ತನ್ನ ಕಿಸೆಗೇ ಇಳಿಸಿರಬೇಕು" ಎಂದು ಮುದುಕಿ ಸಿದ್ದಪ್ಪನ ವಿಷಯವನ್ನೇ ಪ್ರಸ್ತಾಪಿಸಿದಳು.

"ಅಂದು ಏನು ಮಾಡಿದ್ದರೂ ಆ ಪಾಪ ಅವನ ತಲೆಯ ಮೇಲೆಯೇ. ಆದರೆ ಆಮೇಲೆ ಮಾತ್ರ ಅವನು ನನಗೆ ಹಾಗೆ ಮೋಸ ಮಾಡಬಾರದಿತ್ತು" ಎಂದು ಚೌಡಪ್ಪನವರು ಸಿದ್ದಪ್ಪನನ್ನು ಜರೆಯುವುದನ್ನು ಬಿಡಲಿಲ್ಲ.

"ಆ ನಾಯೀಮಗನನ್ನು ಅಂದು ರಾತ್ರಿ ಅಲ್ಲಿಗೆ ಕಳುಹಿಸಲೇ ಬಾರದಿತ್ತು........ ಅದೆಲ್ಲ ನನ್ನದೇ ಹೆಡ್ಡುತನ. ನೀವು ಆದರೂ ಏನು ಮಾಡಬಹುದು? ಪಾಪ ನಿನಗೆ ಒಟ್ಟಿಗೆ ತಲೆ ಕೆಟ್ಟಂತಾಗಿತ್ತು. ಒಟ್ಟಿಗೆ ಅವನು ನೀಚನೇ. ಅಂದು ರಾತ್ರಿ ಇಲ್ಲಿ ಏನೇನು ಮಾಡಿ ಹೋದನೋ ದೇವರಿಗೇ ಗೊತ್ತು. ನಿನ್ನ ಉಪ್ಪು ಅನ್ನ ಐದಾರು ವರುಷ ಕಾಲ ಉಂಡು ಗಳ ಎಣಿಸಿ ಹೋದನಲ್ಲ! ಅವನಿಗೆ ತಕ್ಕ ಫಲ ದೇವರು ಕೊಡುತ್ತಾನೆ."

"ಏನು ಹೇಳಲಿ ಮುದುಕೀ ನಾನು ಅದನ್ನು! ಅಂದು ನನ್ನ ಜೀವ ಉಳಿದದ್ದು ಕಠಿಣ. ಯಾರೋ ಮಾಡಿದ ಪುಣ್ಯದಿಂದ ನಾನು ಉಳಿದೆನೆನ್ನಬೇಕು. ಇಲ್ಲದಿದ್ದರೆ ನಾನು ಉಳಿಯುತ್ತಿದ್ದಿಲ್ಲ..........ನನ್ನನ್ನು ಆ ಸೂಳೆಯ ಮನೆಗೆ ಕಾರಿನಲ್ಲಿ ಕರೆದುಕೊಂಡು ಹೋದ."

"ಹೂಂ, ಹೂಂ, ಆ ಸುದ್ದಿಯನ್ನು ಅಷ್ಟು ಹೇಳಪ್ಪ" ಎಂದು ಮುದುಕಿ ಚೌಡಪ್ಪನವರನ್ನು ಏಕವಚನದಿಂದ ಸಂಬೋಧಿಸಿ ಕಿವಿ ಅರಳಿಸಿ ಕುಳಿತುಕೊಂಡಳು. ಚೌಡಪ್ಪನವರಿಗೆ ಅವಳು ಏಕವಚನದಿಂದ ಕರೆದರೂ

ಅಷ್ಟೇ, ಬಹುವಚನದಿಂದ ಕರೆದರೂ ಅಷ್ಟೇ. ಅಲ್ಲದೆ ಅವರೇ ಒಮ್ಮೊಮ್ಮೆ ಅವಳಿಗೆ, "ನೀನು ನನಗಿಂತ ಎಷ್ಟೋ ವರುಷದಿಂದ ಹಿರಿಯಳು. ನನ್ನನ್ನು ಯಾಕೆ ಹಾಗೆ 'ಅವರು' 'ಇವರು' ಎಂದು ಕರೆಯುತ್ತಿ? ನಿನ್ನಂಥ ಹಿರಿಯ ಮನುಷ್ಯಳಿಂದ ಹಾಗೆ ಗೌರವಿಸಿಕೊಂಡರೆ ನನಗೆ ಚಂದವಲ್ಲ" ಎಂದು ಹೇಳದೆ ಇಲ್ಲ.

"ಎಂಟು ನೂರು ರೂಪಾಯಿಗಳ ಎಂಟು ನೋಟು ನನ್ನ ಕಿಸೆಯೊಳಗಿದ್ದವು. ಅವುಗಳಲ್ಲಿ ನಾಲ್ಕನ್ನು ಅವನಿಗೆ ಕೊಡಲು ಹೋದೆ. ಅಂದರೆ ನಾನು ಅಲ್ಲಿಂದ ಹೊರಗೆ ಬರುವವರೆಗೆ ಅವನೊಡನೆ ಅವು ಇರಲಿ ಎಂದು ಎಣಿಸಿ. ಆದರೆ ಅವನು, 'ಅವಳೇನು ಅಂಥವಳಲ್ಲ' ಎಂದು ಹೇಳಿ ಅವುಗಳನ್ನು ತೆಗೆದುಕೊಳ್ಳಲಿಲ್ಲ. ನಾನು ಅವನ ಮಾತಿನ ಮೇಲೆ ವಿಶ್ವಾಸವಿಟ್ಟು ಒಳಗೆ ಹೋದೆ. ಅಲ್ಲದೆ ಅದು ಪರವೂರು ಮುದುಕೀ. ಆ ಊರಿನ ಹೆಸರು ಹೇಳಿದರೂ ನಿನಗೆ ತಿಳಿಯಲಿಕ್ಕಿಲ್ಲ. ಅಲ್ಲಿ ಇಂಥ ವೇಶ್ಯೆಯರ ಒಂದು ಓಣಿಯೇ ಇದೆ. ಸರಿ, ಆ ಹೆಣ್ಣು ಭಾರೀ ನೃತ್ಯಮಾಡಿ ನನ್ನನ್ನು ಬೇಕಾದಂತೆ ಮುಟ್ಟತೊಡಗಿತು. ಅಲ್ಲಿಯ ಶೃಂಗಾರವೆಂತಹದ್ದು ಮುದುಕೀ! ಗೋಡೆಗೆ ಎಲ್ಲ ರವಿವರ್ಮ ಬರೆದ ಫೋಟೋಗಳೇ. ಅಲ್ಲಿ ಹೋದೊಡನೆ ಅರಮನೆಯೊಳಗೆ ಹೋದಂತೆ ನನಗೆ ಭಾಸವಾಯಿತು. ಎಂಥ ಅತ್ತರಿನ ಪರಿಮಳವೆಂದೀ? ಎಂಥ ಗಾದಿ! ಎಂಥ ಪಲ್ಲಂಗ? ಅವಳು ಉಟ್ಟಿದ್ದು ಪಕ್ಕಾ ರೇಶಿಮೆಯ ಸೀರೆ ನೋಡು ಮುದುಕಿ. ಅವಳನ್ನು ನೋಡಿ ನನಗೆ ಸ್ವರ್ಗವೇ ಅಲ್ಲಿದೆಯೆಂದು ಎನಿಸಿತು. ಈ ಸುಂದರಿ ಎಲ್ಲಿ? ಆ ವೇಶ್ಯೆ ಎಲ್ಲಿ? ಆಮೇಲೆ ನನ್ನನ್ನು ಕೈಹಿಡಿದು ಎಳೆದುಕೊಂಡು ಒಯ್ದು ಮೆತ್ತಗಾದ ಗಾದಿ ಹಾಸಿದ ಪಲ್ಲಂಗದ ಮೇಲೆ ಕುಳ್ಳಿರಿಸಿದಳು. ನನಗೋ! ಅವಳ ಮೈಗೆ ಕೈಹಾಕಲು ಬೆದರಿಕೆಯಾಗಿತ್ತು. ಯಾಕೋ ನನಗೇ ತಿಳಿಯದು! ಆದರೆ ಅವಳನ್ನು ಪ್ರೀತಿಯಿಂದ ನುಂಗುವಷ್ಟು ಉನ್ಮತ್ತನಾಗಿದ್ದೆ ನಾನು. ನನ್ನ ಕೋಟು ಕಳೆದಳು ಅವಳೇ! ಅದರೊಳಗಿನಿಂದ ಆ ಎಂಟು ನೋಟುಗಳನ್ನು ತೆಗೆದು ಹೊರಗೆ ಚೆಲ್ಲಿದಳು. ಅಬ್ಬಾ ಅವಳ ವೈಯಾರವೇ! ಕೋಣೆಯೊಳಗೆ ಪಿಯಾನು ಬಾರಿಸುತ್ತ ಕುಳಿತ ಕರಿಯ ಕಲ್ಲಿನ ಮೂರ್ತಿಯಂಥ ಮನುಷ್ಯನೊಬ್ಬ—ಹೊರಗೆ ಹೋಗಿ ಎಷ್ಟೋ ಹೊತ್ತಾಗಿತ್ತು. ಅಷ್ಟರಲ್ಲೇ......ಆಗ

ಆವಳೇ........ಬಾಗಿಲು ಹಾಕಿದಳು. ಚಿಲಕ ಹಾಕಲು ನನಗೇ ಹೇಳಿದಳು. ಆ ಕೋಣೆಯ ಸುತ್ತೆಲ್ಲ ನನ್ನನ್ನು ಅಡ್ಡಾಡಿಸಿದಳು. ಅಲ್ಲಿ ಯಾರೂ ಇರಲಿಲ್ಲ ಮುದುಕೀ. ಪುನಃ ನನ್ನನ್ನು ಒಯ್ದು ಆ ಪಲ್ಲಂಗದ ಮೇಲೆ ಮಲಗಿಸಿದಳು. ನನ್ನ ಮೇಲೆಲ್ಲ ಪನ್ನೀರು ಸಿಂಪಡಿಸಿದಳು. ಆಗ ಅವಳು ಆ ನೋಟುಗಳನ್ನು ತುಳಿಯುತ್ತಲೇ ಅಲ್ಲಿ ನಡೆಯುತ್ತಿದ್ದಳು. ನನಗೆ ಆ ನೋಟುಗಳ ಲಕ್ಷ್ಯವಿರಲಿಲ್ಲ. ನಾನು ಅವಳ ಮೈಸ್ಪರ್ಶದಿಂದ ಹುಚ್ಚನಾಗುತ್ತಿದ್ದೆ—ಕ್ಷಣ ಕ್ಷಣಕ್ಕೂ! ಎಂಥ ರೂಪವಂತ ಹೆಣ್ಣು ಅವಳು. ಆಮೇಲೆ ನನ್ನ ಹತ್ತಿರ ಬಂದು ಕೂತಳು. ನನಗೆ ಒಂದು ತಾಂಬೂಲ ನೀಡಿದಳು. ಅದನ್ನು ತಿನ್ನಲು ಹೆದರಿಕೆಯಾಯಿತು. ಬೇಡ ಎಂದು ಸನ್ನೆ ಮಾಡಿದೆ. ಪುಣ್ಯಕ್ಕೆ ಅದನ್ನು ಕೊಡಲಿಲ್ಲ. ಪುನಃ ಅಲ್ಲಿಯೇ ಒಯ್ದು ಇಟ್ಟಳು ಅದನ್ನು. ಆಗ ಅವಳ ಕೈ ನನ್ನ ತಲೆಯ ಮೇಲೆ ಬಂತು. ಹಾ! ಸ್ಪರ್ಶಸುಖವೇ ಮುದುಕೀ! ....ಇಷ್ಟೆಲ್ಲ ಆದರೂ ಅವಳ ಭಾಷೆ ನನಗೆ ಬರುತ್ತಿರಲಿಲ್ಲ. ನನ್ನ ಭಾಷೆ ಅವಳಿಗೆ ಗೊತ್ತಿಲ್ಲ. ಅವಳು ಇಂಗ್ಲೀಷೂ ನೀರಿನಂತೆ ಮಾತಾಡುತ್ತಿದ್ದಳು ಮುದುಕೀ ಆ ಪಿಯಾನಿನವನೊಡನೆ. ನನಗೆ ಅದು ಅರ್ಥವಾಗಲಿಲ್ಲ. ಹೀಗಾಗಿ ಅವಳೊಡನೆ ಮಾತಾಡುವುದು ತೊಡಕಿನ ಪ್ರಶ್ನೆಯಾಯಿತು. ಇಷ್ಟರಲ್ಲೇ ಒಂದು ಗಂಟೆ ಸಮಯ ದಾಟಿತು. ನನ್ನ ಕೆನ್ನೆಗೆ ಒಂದು ಚಿವುಟಿದಳು ಆಕೆ. ನನಗೆ ಸುಖವಾಯಿತೇನೋ ನಿಜ. ಆದರೆ ಮುಂದಿನ ಕಷ್ಟ ನೆನೆದರೆ ನನಗೆ ಈಗಲೂ ಮೈ ಮುಳ್ಳು ಬರುತ್ತದೆ!........"

ಆಗ "ಏನಾಯಿತು? ಏನಾಯಿತು?" ಎಂದು ಮುದುಕಿ ಉತ್ಸಾಹದಿಂದ ಕೇಳಿದಳು. ಆಕೆ ಅವರ ಮಾತುಗಳನ್ನು ಇಲ್ಲಿಯವರೆಗೆ ಮಂತ್ರಮುಗ್ಧಳಾಗಿ ಕೇಳುತ್ತಿದ್ದಳಷ್ಟೆ.

"ಆಗ ಅವಳು ನಗುತ್ತ ತನ್ನ ಭಾಷೆಯಲ್ಲೇ ನನಗೆ ಅಲ್ಲಿಂದ ಕಾಲಿಗೆ ಬುದ್ಧಿ ಹೇಳಲು ಆಜ್ಞಾಪಿಸಿದಳು. ಕೈಭಾಷೆಯನ್ನು ಮಾಡಿದಳು. ನನಗೆ ಏಳಲಿಕ್ಕೆ ಮನಸ್ಸು ಬರಲಿಲ್ಲ. ಆದರೂ ಏಳಬೇಕಾಯಿತು. ಯಾಕಂದರೆ ಅವಳೇ ನನ್ನ ಕೈಹಿಡಿದು ಬಲವಂತದಿಂದ ಎಬ್ಬಿಸಿದಳು. ನಾನು ಎದ್ದು ಆ ನೋಟುಗಳನ್ನು ಆರಿಸುತ್ತಿದ್ದೆ. ಆಗ ಆಕೆ ನಗುತ್ತ ಅಲ್ಲಿರುವ ಗಂಟೆ ಬಾರಿಸಿದಳು............ಅಯ್ಯೋ ಮುದುಕೀ! ಆಗ ಬಂದ ನೋಡು ಒಬ್ಬ ರಾಕ್ಷಸ

ನಂಥ ಹುರಿಮೀಸೆಯ ಪಠಾಣ! ಎಲ್ಲಿಂದ ಗೊತ್ತೇ? ಆ ಪಲ್ಲಂಗದ ಬುಡದಿಂದ! ಅವನ ಕಾಲುಗಳೇನು! ಅವನ ಕೈಗಳೇನು? ಅವನ ದೇಹವೆಂತಹದ್ದು! ಅವನನ್ನು ನೋಡಿ ನನ್ನ ಕೈಕಾಲುಗಳು ಅತ್ತಿತ್ತ ಸರಿಯದಾದವು. ಕೈಯಲ್ಲಿರುವ ನೋಟುಗಳು ಕೆಳಗೆ ಉದುರಿದವು. ಅವನು ಮೀಸೆಯ ಮೇಲೆ ಕೈಹಾಕುತ್ತ ನನ್ನನ್ನೇ ನೋಡುತ್ತಿದ್ದ..............ನನ್ನ ಮೈ ಬೆವರತೊಡಗಿತು. ಆ ನೀಚಳು—ನಮ್ಮನ್ನು ನೋಡುತ್ತ ಅಲ್ಲಿಯೇ ಕುರ್ಚಿಯ ಮೇಲೆ ಕುಳಿತಳು ನಾನೇನು ಮಾಡಬೇಕು? ಸಿದ್ದಪ್ಪನ ಮೇಲೆ ಕೋಪದಿಂದ ನನ್ನ ಎದೆ ಉಬ್ಬಿ ಬಂತು. ಏನು ಮಾಡುವುದು? ಆಗ ಆ ರಕ್ಕಸನೇ ಆ ಎಂಟೂ ನೋಟುಗಳನ್ನು ಹೆಕ್ಕಿಕೊಂಡ. ಅವುಗಳಲ್ಲಿ ಆರನ್ನು ಆ ವೇಶ್ಯೆಗೆ ಕೊಟ್ಟ—ಎರಡನ್ನು ನನ್ನ ಕೋಟಿನ ಕಿಸೆಯಲ್ಲಿ ಇಟ್ಟ. ಅಷ್ಟಾದರೂ ಇಟ್ಟನಲ್ಲ ಎಂದು ತೃಪ್ತಿಯಾದರೂ ನನಗೆ ಧೈರ್ಯ ಬರಲಿಲ್ಲ ನನ್ನ ಜೀವ ಹೀಗೇ ಬಿಟ್ಟರೆ ಸಾಕು ಎಂದು ಶಿವದೇವನನ್ನು ಬೇಡಿಕೊಂಡೆ. ಅಲ್ಲಿಯೇ ಇರುವ ಶಿವನ ಫೋಟೋವಿಗೆ ನನ್ನ ಭಕ್ತಿ ಸಲ್ಲಿಸಿದೆ. ಆಮೇಲೆ ಆ ಪಠಾಣ ನನ್ನ ಕೋಟು ನನಗೇ ಕೊಟ್ಟ. ಅದನ್ನು ತೊಟ್ಟುಕೊಳ್ಳಲು ಹೇಳಿದ. ನಾನು ಹಾಗೇ ಮಾಡಿದೆ ಕೂಡಲೇ ನನ್ನನ್ನು ದೂಡಿಕೊಂಡು ಹೊರಗೆ ಬಂದ. ರಾತ್ರಿಯ ಹನ್ನೆರಡರ ಮೇಲೆ ಎರಡು ಗಂಟೆಯಾಗಿತ್ತು ಆಗ! ನನ್ನ ಕಾರಿನ ಹತ್ತಿರದ ವರೆಗೆ ಒಯ್ದು ನನ್ನನ್ನು ಬಿಟ್ಟ. ಆಗ ಕಾರಿನೊಳಗೆ ಕುಳಿತುಕೊಂಡು ಸಿದ್ದ ಸಿಗರೇಟು ಸೇದುತ್ತಿದ್ದ. ಅವನನ್ನು ನೋಡಿದೊಡನೆ ನನಗೆ ಕ್ರೋಧ ಉಕ್ಕೇರಿತು. ತಡೆದುಕೊಂಡೆ. ಕಾರಿನ ಬಾಗಿಲನ್ನು ನಾನೇ ತೆಗೆದು ಹಿಂದಿನ ಸೀಟಿನಲ್ಲಿ ಕುಳಿತುಕೊಂಡೆ .... ಅಷ್ಟಾದರೂ ಆ ಪಠಾಣ ನನ್ನನ್ನು ಬಿಡಲಿಲ್ಲ. 'ಲಾ' ಎಂದು ಕೈ ಮುಂದೆ ಮಾಡಿದ. ಆಗ ಸಿದ್ದಪ್ಪ 'ಒಂದೆರಡು ನೋಟಿನ ಖುಷಿ ಕೊಡಿರಿ ಅವನಿಗೆ' ಎಂದನು. ನನಗೆ ಸಿದ್ದಪ್ಪನನ್ನು ಹರಿದು ತಿನ್ನುವಷ್ಟು ಸಿಟ್ಟು ಬಂತು. ಹೇಗಾದರೂ ಇಲ್ಲಿಂದ ಪಾರಾದರೆ ಸಾಕು — ಎಂದು ನಾನು ಕಿಸೆಯೊಳಗೆ ಅವನೇ ಹಾಕಿದ ಆ ಎರಡೂ ನೋಟನ್ನು ಅವನಿಗೇ ಕೊಟ್ಟೆ.

"ಅಷ್ಟಕ್ಕೇ ಆ ರಾಕ್ಷಸ ಕೇಳಲಿಲ್ಲ. ಆ ನೋಟುಗಳನ್ನು ಹಿಂದೆ ನನ್ನ ಕೈಗೆ ಇಟ್ಟು ಮೂರು ಬೆರಳು ತೋರಿಸಿದ ನಾನೇನು ಮಾಡಬೇಕು?

'ಸಿದ್ದಪ್ಪಾ' ಎಂದು ಕರೆದೆ. ಆಗ ಆತ ಎದ್ದು ಹೊರಗೆ ಬಂದು ಆ ಪಠಾಣ ನನ್ನ ಕರೆದುಕೊಂಡು ಅತ್ತ ಹೋದ. ಸ್ವಲ್ಪ ಸಮಯದಲ್ಲೇ ಬಂದು ಆ ಇನ್ನೂರು ರೂಪಾಯಿಗಳನ್ನು ನನ್ನ ಕೈಯಿಂದ ತೆಗೆದುಕೊಂಡು—ಪಠಾಣನೊಡನೆ ಮಾತಾಡುತ್ತ ಆ ಮನೆಯೊಳಗೆ ಹೋದ. ನನಗೆ ಸಿಟ್ಟು ಹೆದರಿಕೆ ಎರಡೂ ಒಮ್ಮೆಲೇ ಬಂದವು ನನ್ನ ಕಿಸೆಯೂ ಬರಿದಾಗಿತ್ತು. ಏನು ಮಾಡುವುದೆಂದು ತಿಳಿಯಲಿಲ್ಲ. ಆಗ ಸಿದ್ದಪ್ಪ ಬಂದು ಕಾರು ಸ್ಟಾರ್ಟ್ ಮಾಡಿದ. ಅವನು ನನ್ನೊಡನೆ ಮಾತಾಡಲಿಲ್ಲ. ನಾನೂ ಸುಮ್ಮನೆ ಕೂತಿದ್ದೆ. ಕಾರು ಹೊಡೆದುಕೊಂಡು ನಾವು ಆ ಊರಲ್ಲಿ ಇಳಿದ ಹೊಟೇಲಿನ ಮುಂದೆ ನಿಲ್ಲಿಸಿದ. ಆಗ ನಾನು ಅವನಿಗೆ ಇಷ್ಟೇ ಹೇಳಿದೆ: 'ನೀನು ಕಾರು ಹೊಡೆದುಕೊಂಡು ಬಾ. ನಾನು ರೈಲಿನಿಂದ ಬರುತ್ತೇನೆ.' ನನ್ನ ತೂಕದ ಮಾತನ್ನು ಕೇಳಿ ಅವನಿಗೆ ಸಂಶಯ ಬಂದಿರಬೇಕು.

'ನಿಮಗೆ ತೃಪ್ತಿಯಾಗಲಿಲ್ಲವೋ' ಎಂದು ಕೇಳಿದನು.

ನಾನು ಮಾತಾಡದೆ ಹೊಟೇಲಿನೊಳಗೆ ಹೊರಟೆ.

'ಬೇಕಾದರೆ ನಾಳೆಯೂ ಒಮ್ಮೆ ಭೇಟಿ ಕೊಟ್ಟು ಬರಬಹುದು'

ನನಗೆ ಸಿಟ್ಟಿನಿಂದ ಅವನ ಮುಖ ನೋಡಲಿಕ್ಕಾಗಲಿಲ್ಲ.

'ನಾನು ಹೇಳಿದಷ್ಟು ಕೆಲಸ ಮಾಡು'

'ಹೂಂ' ಎಂದು ನನ್ನ ಹಿಂದೆಯೇ ಅವನು ಒಳಗೆ ಬಂದ. ನನ್ನ ಕೋಣೆಗೆ ಹೋಗಿ ನಾನು ಮಲಗಿಕೊಂಡೆ. ಆಗಲೂ ನನ್ನ ಸಿಟ್ಟು ಕಡಿಮೆಯಾಗಿರಲಿಲ್ಲ.

ಅಷ್ಟರಲ್ಲಿ ಅವನೇ ಪುನಃ ಕೇಳಿದ:

'ನಿಮ್ಮ ಮನಸ್ಸಿಗೆ ತೃಪ್ತಿಯಾಗಲಿಲ್ಲವೋ?'

'ನೀನು ಹೇಳಿದಷ್ಟು ಕೆಲಸ ಮಾಡು..........ನಾನು ರೈಲಿನಿಂದ ಬರುತ್ತೇನೆ. ನೀನು ಕಾರು ಹೊಡೆದುಕೊಂಡು ಹೋಗು. ಹೆಚ್ಚು ಹೊತ್ತು ಕಳೆಯಬೇಡ. ಸಾಕಷ್ಟು ತೃಪ್ತಿಯಾಗಿದೆ. ಎಲ್ಲ ವ್ಯವಸ್ಥೆ ಚೆನ್ನಾಗಿ ಮಾಡಿದೆ' ಎಂದು ಹೇಳಿ ಅತೃಪ್ತಿಯಿಂದಲೇ ಹಾಸಿಗೆಯ ಮೇಲೆ ಬಿದ್ದುಕೊಂಡೆ.

‘ ಹಾಗಾದರೆ ನಾನು ಈಗಲೇ ಕಾರು ಹೊಡೆದುಕೊಂಡು ಹೋಗು ತ್ತೇನೆ. ನೀವು ರೈಲಿನಿಂದ ಬರುತ್ತೀರಲ್ಲ ? ’ ಎಂದು ಕೇಳಿದ.

‘ ಹೌದು ’ ಎಂದು ಉತ್ತರಿಸಿದೆ.

“ ಮರುಮಾತಾಡದೆ ಅವನು ಅಲ್ಲಿಂದ ಹೊರಟ. ನಾನೂ ಅಲ್ಲಿಯೇ ನನ್ನ ರೈಲಿನ ಪ್ರಯಾಣದ ಖರ್ಚಿಗೆ ಹಣ ಸಾಲ ಪಡೆದುಕೊಂಡು ಊರಿಗೆ ಬಂದೆ. ಆಗ ಸಿದ್ದಪ್ಪ ಊರಲ್ಲಿ ಇರಲಿಲ್ಲ ಕಾರು ಸೆಡ್ಡಿನಲ್ಲಿ ಇತ್ತು.”

ಮುದುಕಿ ಆಗ ಆಶ್ಚರ್ಯದಿಂದ “ ನೀನು ಒಳ್ಳೆಯ ಬುದ್ಧಿವಂತನಾದು ದರಿಂದ ಆ ಅಪಾಯದಿಂದ ಪಾರಾದಿ. ಬೇರೆಯವರು ಹಾಗೆ ಜಾರಿಕೊಂಡು ಬರುವುದು ಕಷ್ಟವಿತ್ತು. ನಿನ್ನ ಜೀವವನ್ನು ಆ ಶಿವನೇ ಕಾದ............... ಮತ್ತು ನಿನಗೆ ಅಲ್ಲಿ ಕುಡಿಯುಲಿಕ್ಕೆ ಏನಾದರೂ ಕೊಡಲಿಲ್ಲವೋ ?” ಎಂದು ಮುದುಕಿ ಹುರುಪಿನಿಂದ ಕೇಳಿದಳು.

“ ಅವಳು ಕೊಟ್ಟದ್ದನ್ನು ನಾನು ಕುಡಿಯುಲಿಲ್ಲ. ಅಲ್ಲಿಯೇ ಬಾಟ್ಲಿಗಳು ಇದ್ದವು ನಾನು ನನ್ನ ಜನ್ಮದಲ್ಲಿ ಅಂಥ ವೇಶ್ಯಾಗೃಹವನ್ನು ನೋಡಲಿಲ್ಲ. ನನ್ನ ಎಂಟು ನೂರು ರೂಪಾಯಿ ನೀರಾದವು ”

“ ಆಮೇಲೆ ಸಿದ್ದಪ್ಪನಿಗೇನು ಮಾಡಿದಿ ? ”

“ ಅವನನ್ನು ಹಾಗೇ ಬಿಡುತ್ತೇನೆಯೇ? ಅವನ ಗುಟ್ಟೆಲ್ಲ ಆಗಲೇ ಹೊರಬಿತ್ತು ಮೂರು ಜನ ಕಲ್ಲಿನಂಥ ಜಟ್ಟಿಗಳನ್ನು ಕರೆದುಕೊಂಡು ಅವನ ಮನೆಗೆ ಹೋದೆ. ಆಗ ಅವನ ಹೆಂಡತಿ ಅಲ್ಲಿಯೇ ಅಳುತ್ತ ಮಲಗಿದ್ದಳು. ಅವಳ ಹಿರಿಯ ಮಗ ಹದಿನಾರು ವರುಷ ಪ್ರಾಯದವನು ಅವಳಿಗೆ ಸಮಾ ಧಾನ ಹೇಳುತ್ತಿದ್ದ. ನಾನು ಅಲ್ಲಿಗೆ ಹೋದ ಕೂಡಲೆ ಅವಳು ಥಟ್ಟನೆ ಎದ್ದು ನನಗೆ ಮರ್ಯಾದೆ ಸಲ್ಲಿಸಿದಳು. ಆಮೇಲೆ ಒಮ್ಮೆಲೆ ಅಳಲಿಕ್ಕೆ ಪ್ರಾರಂ ಭಿಸಿದಳು.

“ ನೋಡಿ ಧನಿಯರೇ, ಆ ನೀಚ ನನ್ನನ್ನು ಒದ್ದು ಒದ್ದು ತುಳಿದು ಓಡಿಹೋಗಿದ್ದಾನೆ. ನನ್ನ ಕೊರಳೊಳಗಿನ ತಾಳಿಮಣಿಗೂ ಒಮ್ಮೆ ಗಂಟು ಬಿದ್ದಿದ್ದ. ಅಂಥವನನ್ನು ನೀವು ಹೇಗೆ ನೌಕರಿಗೆ ಇಟ್ಟುಕೊಂಡಿದ್ದಿರಿ ? ನಾನು ಅವನನ್ನು ಇನ್ನು ಮುಂದೆ ಮನೆಯೊಳಗೆ ಕಾಲಿಡಲಿಕ್ಕೆ ಬಿಡುವುದಿಲ್ಲ. ನನಗೂ

ಹೊಡಿಯುವುದು, ಮಗನಿಗೂ ಹೊಡಿಯುವುದು. ಮನೆಗೆ ಒಂದು ಪೈ ಕೊಡುವುದಿಲ್ಲ. ಯಾವಾಗಲೂ ಇಸ್ಪೀಟ ಆಟದಲ್ಲಿ ದಿನ ಕಳೆಯುತ್ತಾನೆ. ಅಂಥವನಿಗೆ ನೀವೇ ಹೀಗೆ ಎಲ್ಲ ಸಲಿಗೆ ಕೊಟ್ಟು ಉಬ್ಬಿಸಿದಿರಿ. ಈಗ ಅವನು ನಮ್ಮನ್ನು ಜೀವಂತ ಇಡುವುದಿಲ್ಲ. ನಿನ್ನೆ ಮದ್ರಾಸಿನಿಂದ ಬಂದವನು ಚೆನ್ನಾಗಿ ಕುಡಿದು ನನ್ನ ಕಾಲು ಮುರಿದು ಹೋಗಿದ್ದಾನೆ ಧನಿಗಳೇ ! ಅಯ್ಯೋ ನಾನು ಮುಂದೇನು ಮಾಡಬೇಕು ? ಅವನ ಕಾಲು ಮುರಿದು ಭಿಕ್ಷೆ ಬೇಡಲಿಕ್ಕೆ ಕಳುಹಿಸಿದರೂ ನಮಗೆ ಬೇಜಾರ ಇಲ್ಲ. ಅಂಥ ನೀಚನನ್ನು ಜೀವಂತ ಬಿಡ ಬಾರದು ದೇವರೇ ! ದಮ್ಮಯ್ಯ ಹೇಗಾದರೂ ಮಾಡಿ ಅವನು ಇನ್ನು ಮುಂದೆ ಈ ಮನೆಗೆ ಕಾಲಿಡದಂತೆ ಮಾಡಿರಿ. ನನ್ನ ಮೂಗುತಿ, ಮಂಗಳ ಸೂತ್ರ, ಕುಂಕುಮ ಎಲ್ಲ ಒಯ್ದು ಒಲೆಗೆ ಹಾಕುತ್ತೇನೆ. ಅವನನ್ನು ಇತ್ತ ಬಾರದಂತೆ ಮಾಡಿರಿ. ಎಂದರೆ ನಾವು ಹೇಗಾದರೂ ಜೀವನ ಸಾಗಿಸುತ್ತೇವೆ" ಎಂದು ಆಕೆ ನನ್ನನ್ನು ಕೇಳಿಕೊಂಡಳು. ನನ್ನ ಸಿಟ್ಟು ಬಲಿಯಿತು. ಅವನನ್ನು ಕೊಲ್ಲುವುದಕ್ಕೂ ನನ್ನ ಮನಸ್ಸು ಹಿಂಜರಿಯಲಿಲ್ಲ—ಆ ಬಡ ಹೆಣ್ಣಿನ ಅವಸ್ಥೆ ಯನ್ನು ನೋಡಿ.

'ಅವನು ಈಗ ಎಲ್ಲಿರಬಹುದು ?' ಎಂದು ನಾನು ಕೇಳಿದೆ.

'ನಾನು ತೋರಿಸುತ್ತೇನೆ' ಎಂದು ಅವಳ ಮಗ ನಮ್ಮನ್ನು ಕರೆದು ಕೊಂಡು ಊರ ಹೊರಗಿನ ಒಂದು ಗವಿಗೆ ತಲಪಿಸಿ—'ಇದರೊಳಗೆ ಇಸ್ಪೀಟ ಆಡುತ್ತ ಇರುತ್ತಾನೆ' ಎನ್ನುವಷ್ಟರೊಳಗೆ ಒಳಗಿನಿಂದ ಸಿದ್ದಪ್ಪ ಹೊರಗೆ ಬಂದೇ ಬಿಟ್ಟ. ಅವನನ್ನು ಕಂಡೊಡನೆ ಅವನ ಮಗ ಅಲ್ಲಿ ನಿಲ್ಲಲಿಲ್ಲ. ಒಂದೇ ಉಸಿರಿಗೆ ಓಡಿದ.

"ನಮ್ಮೊಳಗಿನ ಒಬ್ಬ ಜಟ್ಟಿ ಅವನ ಕೆನ್ನೆಗೆ ಫಟೀರನೆ ನಾಲ್ಕು ಕೊಟ್ಟ ಅವನ ಕಿಸೆಯೊಳಗೆ ನಾಲ್ಕು ನೂರು ರೂಪಾಯಿಗಳಿದ್ದವು. ಅವುಗಳಲ್ಲಿ ಆ ನೂರರ ಎರಡು ನೋಟು—ನಾನು ಪಠಾಣನಿಗೆ ಕೊಟ್ಟ ನೋಟುಗಳೇ. ಅವು ಗಳ ಗುರುತು ನನಗೆ ಸಿಕ್ಕಿತು. ಆ ರೂಪಾಯಿಗಳನ್ನೆಲ್ಲ ಕಸೆದುಕೊಂಡು ಅವನ ಹೆಂಡತಿಗೆ ಮುಟ್ಟಿಸಿದೆವು. ಆದರೆ ಸಿದ್ದಪ್ಪನನ್ನು ಹಾಗೇ ಬಿಡಲಿಲ್ಲ ಕೈಕಟ್ಟಿಕೊಂಡು ಒಯ್ದು ಚೆನ್ನಾಗಿ ಶಿಕ್ಷೆ ಕೊಟ್ಟೆವು. ನಾಲ್ಕು ದಿನ ಉಪ ವಾಸ ಹಾಕಿಸಿದೆ ಆಮೇಲೆ ಆರನೆಯ ದಿನ ಅವನು ಮಾಡುತ್ತಿದ್ದ ನೀಚ

ತನವನ್ನೆಲ್ಲ ಪತ್ತೆ ಹಚ್ಚಿದೆವು. ಅವನ ಒಂದು ಕಣ್ಣಿಗೆ ಎಸಿಡ್ (Acid) ಹಾಕಿದಾಗ ತಾನು ಕದ್ದ ಹಾಗೂ ಒಳಗೆ ಹಾಕಿದ ರೂಪಾಯಿಗಳ ವಿಷಯ ಹೇಳಿದ. ಅಂದು ಸುಂದರಿಯ ಮನೆಗೆ ತಂದ ನೂರರ ನೋಟನ್ನೂ ಅವನೇ ಒಳಗೆ ಹಾಕಿದ್ದನ್ನೂ ಹೇಳಿಬಿಟ್ಟ. ನನ್ನ ಜೀವವನ್ನು ತಿನ್ನಲು ಹೋದವನಿಗೆ ಹೊಡೆಯುವಾಗ ನನಗೆ ಕರುಣೆ ಹುಟ್ಟಲಿಲ್ಲ. ಆ ಜಟ್ಟಿಗಳು ಹೊಡೆದು ಹೊಡೆದು ಅವನ ಕಾಲು ಮುರಿದೇ ಇಟ್ಟರು.

"ನನ್ನಿಂದ ಆ ದೃಶ್ಯ ನೋಡಲಿಕ್ಕಾಗಲಿಲ್ಲ. ಅವನ ಮುಖದಿಂದ ರಕ್ತ ಸುರಿಯುತ್ತಿತ್ತು. ಎಡಗಾಲು ತುಂಡಾಗಿ ನೇತಾಡುತ್ತಿತ್ತು. ಆದರೂ ಅವನಿಗೆ ಆಯುಷ್ಯ ಗಟ್ಟಿ ಇದ್ದಿರಬೇಕು. ಅಂಥವನನ್ನು ಕೊಂದರೂ ಪಾಪ ಬರುವುದಿಲ್ಲವೆಂದು ನನಗೆ ನನ್ನ ಅಂತರಾತ್ಮ ಹೇಳುತ್ತಿತ್ತು. ಅಂತೇ ಆ ಜಟ್ಟಿಗಳಾದರೂ ಅವನನ್ನು ಬೇಕಾದಂತೆ ಹೊಡೆದರು. ಕಬ್ಬಿಣದ ಸಲಾಕೆಯಿಂದ ಹೊಡೆದು ಕಾಲು ಮುರಿದಿದ್ದರು. ಒದರಬಾರದೆಂದು ಬಾಯಿಯೊಳಗೆ ಒಂದು ಅರಿವೆಯನ್ನು ತುರುಕಿದ್ದರು.

"ಅಪರಾಧಕ್ಕೆ ತಕ್ಕ ಶಿಕ್ಷೆ ವಿಧಿಸಿಯಾಯಿತು. ಏಳೆಂಟು ದಿನಗಳ ವರೆಗೆ ಅವನನ್ನು ಆ ಕೋಣೆಯಿಂದ ಹೊರಗೆ ತೆಗೆಯಲಿಲ್ಲ. ಆದರೂ ಆತ ಜೀವಂತ ಇದ್ದ. ಆಮೇಲೆ ಒಂದುದಿನ ಆದೇ ಜಟ್ಟಿಗಳಿಗೆ ಹೇಳಿ ಅವನನ್ನು ಪರಿವೂರಿಗೆ ಕಳುಹಿಸಿ ಬಿಟ್ಟೆ. ಅಲ್ಲಿ ಬಹಳ ದಿವಸ ಅವನು ಉಳಿದಿರಲಿಕ್ಕಿಲ್ಲ. ತಿಳಿಯಿತೇ ಮುದುಕೀ ?" ಎಂದು ಅವರು ಕೇಳುವಾಗ ಮುದುಕಿಯ ಕಣ್ಣಲ್ಲಿ ನೀರು ಬಂದಿತ್ತು. ಆದರೆ ಚೌಡಪ್ಪನವರ ಮುಖದಲ್ಲಿ ನಗೆ ಸೂಸುತ್ತಿತ್ತು. "ಏನಾದರೂ ಹೆಚ್ಚು ಕಡಿಮೆ ಮಾಡಿದರೆ ನನಗೂ ಅದೇ ಗತಿ ಬರಬಹುದು —ಇವನ ಕೈಯಲ್ಲಿ !" ಎಂದು ನೆನೆದು ಆಕೆಗೆ ದುಃಖ ಬಂದಿತ್ತು.

ಅದನ್ನು ನೆನೆದು ಆಕೆ ಸ್ವಲ್ಪ ಹೊತ್ತು ಸುಮ್ಮನೆ ಕೂತಳು. "ನನಗೆ ಮಾತ್ರ ಅಂಥ ಕಷ್ಟ ಕೊಡಿಸಬೇಡಿ ದಮ್ಮಯ್ಯ ಧನಿಗಳೇ !" ಎಂದು ಅಳುತ್ತ ಅವರ ಕಾಲಿಗೆ ಬಿದ್ದಳು.

"ನೀನು ಎಂಥ ಹುಚ್ಚಿ ಮುದುಕೀ. ಅಳಬೇಡ, ನಿನ್ನಂಥವಳಿಗೆ ಅವನ ನೀಚತನ ಗೊತ್ತಿದೆಯೇ ? ಅವನ ನೀಚತನದ ಒಂದು ಸಾಸಿವೆಯ ಕಾಳಿನ ಸಹಸ್ರಾಂಶದಷ್ಟಾದರೂ ನಿನಗೆ ಬರಲಿಕ್ಕಿಲ್ಲ—ಅದು ನಿನ್ನಿಂದ ಸಾಧ್ಯ

ವಿಲ್ಲ. ನೀನು ಹೆದರಬೇಡ. ದೇವರ ಆಣೆಯೆಂದರೂ ನಿನಗೆ ಒಂದು ಕೆಟ್ಟ ಮಾತು ಆಡುವುದಿಲ್ಲ ಮುದುಕೀ. ನಿನ್ನ ಮೇಲೆ ನನಗೆ ವಿಶ್ವಾಸವಿದೆ. ನಾನೂ ಮನುಷ್ಯನಿದ್ದೇನೆ. ನನಗೂ ಹೃದಯ ಉಂಟು. ಹಾಗೆಲ್ಲ ದರ್ಪ ತೋರಿಸುವುದಿದ್ದರೆ ಸುಂದರಿಯನ್ನು ಇಷ್ಟರಲ್ಲಿ ಏನು ಮಾಡುತ್ತಿದ್ದೆನೋ ದೇವರೇ ಬಲ್ಲ! ನನಗೂ ಕರುಣೆ ಇದೆ. ಅವಳು ನನಗೆ ನೀಡಿದ ಪ್ರೇಮದ ಋಣದ ನೆನಪು ಇದೆ. ಅವಳು ನನ್ನನ್ನು ಕೈಹಿಡಿದ ಹೆಂಡತಿಗಿಂತ ಹೆಚ್ಚಿನ ಪ್ರೇಮದಿಂದ ಎಷ್ಟೋ ವರುಷ ನೋಡಿಕೊಂಡಿದ್ದಳು. ನಾನು ಕೊಟ್ಟ ಪಶು ಹಿಂಸೆಯನ್ನೆಲ್ಲ ಆಕೆ ತಡೆದುಕೊಂಡಿಲ್ಲವೇ? ಅದೆಲ್ಲ ನನಗೂ ಗೊತ್ತಿದೆ. ಇಲ್ಲದಿದ್ದರೆ ನಾನವಳಿಗೆ ಈ ಕಂಪೌಂಡು ಬಿಟ್ಟುಕೊಡುತ್ತಿದ್ದೆನೇ? ನನಗೂ ಅನಿಸುತ್ತದೆ—ನಾನು ಅವನಿಗೆ ಕೊಟ್ಟ ಹಿಂಸೆ ಪಾಪಕರವಾದದ್ದು ಎಂದು. ಆದರೆ ಅವನು ಮಾಡಿದ ನೀಚ ಕೃತ್ಯಗಳನ್ನು ನೆನೆದಾಗ ಮಾತ್ರ 'ನಾನು ಮಾಡಿದ್ದು ಸರಿ' ಎಂದು ಧೈರ್ಯ ಬರುತ್ತದೆ. ಅಲ್ಲದೆ ಎಲ್ಲರಿಗೂ ಬೇಡವಾಗಿ ಭೂಮಿಗೆ ಭಾರವಾದ ಒಬ್ಬ ನೀಚನನ್ನು ನಾಶ ಮಾಡುವುದು ನಿಸರ್ಗದ ನಿಯಮ. ಕೃಷ್ಣ ಕಂಸನನ್ನು ಕೊಲ್ಲಲಿಲ್ಲವೇ? ರಾಮ ರಾವಣನನ್ನು ಕೊಂದದ್ದು ತಪ್ಪೇ? ಹಾಗೆ ದುಷ್ಟರನ್ನು ದಮನ ಮಾಡದಿದ್ದರೆ ಧರೆ ತಿರುಗೀತೇ?" ಎಂದು ಎಷ್ಟೋ ಹೊತ್ತು ಆ ಮುದುಕಿಗೆ ಚೌಡಪ್ಪ ಸಮಾಧಾನ ಹೇಳಿದರು. ತಮ್ಮ ಹೃದಯವನ್ನೇ ಅವಳ ಮುಂದೆ ತೋಡಿಕೊಂಡರು. ಆಗ ಮುದುಕಿಗೆ ಆನಂದವಾಯಿತು. "ನಿನ್ನಂಥವರು ಬೇಕು ಚೌಡಣ್ಣಾ" ಎಂದು ಅವರನ್ನು ಹೊಗಳಿದಳು.

ಆಕೆ ಅವರೊಡನೆ ಕೇಳಲು ಬಯಸಿದ ವಿಷಯ ಒಂದು, ಅವರು ಅವಳಿಗೆ ಹೇಳಿದ ಕಥೆ ಮತ್ತೊಂದು. ಹೀಗಾಗಿ ಅವಳು ಕೇಳುವ ವಿಷಯ ಹಾಗೇ ಉಳಿದಿತ್ತು. ಈಗ ಅದನ್ನು ಕೇಳಲು ಯೋಗ್ಯವಾದ ಸಮಯ ಕೂಡಿ ಬಂತು.

"ಅವನು ಹಾಳಾಗಿ ಹೋಗಲಿ ಬಿಡು..........ನಿನ್ನ ವಿಷಯದಲ್ಲಿ ಈಗ ಸುಂದರಿ ಹೇಗೆ ನಡೆದುಕೊಳ್ಳುತ್ತಿದ್ದಾಳೆ?" ಎಂದಳು ಮುದುಕಿ.

"ನಾನು ಹೇಳಿದೆನಲ್ಲ ಮುದುಕೀ? ನನ್ನ ಮಟ್ಟಿಗೆ ಅವಳು ಪ್ರಾಮಾಣಿಕತನದಿಂದ ಇದ್ದಾಳೆಂದು ನನಗೆ ಖಾತ್ರಿಯಾಗಿದೆ" ಎಂದು ಚೌಡಪ್ಪ ಸತ್ಯ

ವಾದ ಮಾತನ್ನೇ ಆಡಿದರು.

“ ಅವಳಿಗೂ ಈಗ ವಯಃಸ್ಸಾಯಿತು............ಈಗ :ಇದು ಅವಳಿಗೆ—ಮೂವತ್ತೋ—ನಾಲ್ವತ್ತು ? ”

“ ಮೂವತ್ತು—ಮೂವತ್ತೈದು ಇರಬಹುದು. ”

“ ಆದರೆ ನೋಡುವಾಗ ನನಗಿಂತಲೂ ಮುದುಕಿಯಂತೆ ಕಾಣುತ್ತಾಳೆ ....ನೀನೂ ಈಗ ಇಲ್ಲಿಗೆ ಬರುವುದನ್ನು ಕಡಿಮೆ ಮಾಡಿದ್ದು ಒಳ್ಳೆಯದಾಯಿತು. ನಿನ್ನ ಜೀವ ನೋಡಪ್ಪಾ........ಇನ್ನೂ ಇಪ್ಪತ್ತೈದು ವರುಷದ ಹುಡುಗನ ಹಾಗೆ ಕಾಣುತ್ತದೆ. ನೆಲ ಒದ್ದು ನೀರು ತೆಗೆಯುವಷ್ಟು ತ್ರಾಣ ವುಂಟು ನಿನಗೆ............ಮತ್ತು ನೋಡು ಚೌಡಣ್ಣಾ—ಮೈ ಹಾಳು ಮಾಡಿಕೊಳ್ಳಬೇಡ............... ” ಎಂದು ಮುದುಕಿ ಗುಪ್ತವಾಗಿ ಏನೋ ಹೇಳಿದಳು.

“ ಛೆ, ಛೆ, ಅದೆಂದೂ ಸಾಧ್ಯವಿಲ್ಲ. ಈ ಸುಂದರಿಯ ಮಗಳಿಗೆ ಒಂದು ನೌಕರಿ ಹಚ್ಚಿಕೊಡಬೇಕೆಂಬ ಹಂಬಲ ನನಗೂ ಇದೆ ” ಎಂದು ಚೌಡಪ್ಪ ಅಲ್ಲಿಂದ ಎದ್ದು “ ಹೊತ್ತಾಯಿತು ” ಎನ್ನುತ್ತ ಹೊರಟರು.

ಆರನೆಯ ಅಧ್ಯಾಯ

ತಲೆ ಬಾಚುತ್ತ ಕುಳಿತಿದ್ದಳು ಸುಂದರಿ. ಕನ್ನಡಿಯೊಳಗೆ ಕಂಡ ತನ್ನ ಮುಖವನ್ನು ನೋಡಿ ಅವಳಿಗೇ ಆಶ್ಚರ್ಯವಾಯಿತು. ಬಾಚಣಿಕೆಯನ್ನು ಮುಂದೆ ಮಾಡಿ ಅದರೊಳಗೆ ಸಿಕ್ಕಿಕೊಂಡ ಹತ್ತಾರು ಕೂದಲುಗಳನ್ನು ಕಂಡಳಾಕೆ. ಆಗ ಅವಳ ವಿಸ್ಮಯ ಮತ್ತೂ ವರ್ಧಿಸಿತು. ಬಿಳಿಯ ಕೂದಲುಗಳನ್ನು ಕೈಯೊಳಗೆ ತೆಗೆದುಕೊಂಡು “ಇವು ನನ್ನ ತಲೆಕೂದಲಿರಬಹುದೇ?” ಎಂದು ತನ್ನನ್ನೇ ಕೇಳಿಕೊಂಡಳು. ಸ್ವಲ್ಪ ಹೊತ್ತು ಸುಮ್ಮನಿದ್ದು ಮತ್ತೊಮ್ಮೆ ಬಲವಾಗಿ ಬಾಚಿಕೊಂಡಳು. ಮತ್ತೆ ನಾಲ್ಕಾರು ಬಿಳಿಯ ಕೂದಲುಗಳನ್ನು ಬಾಚಣಿಕೆ ಕಿತ್ತು ತಂದಿತು! “ ಹಾ ! ನಾನು ಮುದುಕಿಯಾದೆನಲ್ಲ. ನಾನು

ಇನ್ನು ಎಷ್ಟು ದಿನ ಬದುಕಬಹುದು ? ನನಗೀಗ ಎಷ್ಟು ವರುಷ ? ಕೂದಲು ಹಣ್ಣಾಗತೊಡಗಿದವು. ಹಿಂದೆ ಹೋದ ಆಯುಷ್ಯ ದೊಡ್ಡದು. ಇನ್ನು ಉಳಿದ ಆಯುಷ್ಯ ತೀರ ಚಿಕ್ಕದು. ತಲೆಗೂದಲು ಬೆಳ್ಳಗಾದ ಮೇಲೆ ಉಳಿಯಿತೇನು ? ಯಮನ ದೂತರು ಯಾವಾಗ ಬರುತ್ತಾರೆ ಎಂಬ ನಿಶ್ಚಯವಿಲ್ಲ. ನಾನು ಇನ್ನೇನು ಮಾಡುವುದಿದೆ..............ನನ್ನ ಆಯುಷ್ಯ ಮುಗಿಯಿತೇ ? ನನಗೆ ಇದುವರೆಗೆ ಸಿಕ್ಕ ಸುಖ-ಕಷ್ಟಗಳು ಕಡಿಮೆಯಲ್ಲ. ಇನ್ನು ಮುಂದೆ ಏನೇನು ಆಗುವುದಿದೆಯೋ ಏನೋ ! ಯಾರು ಬಲ್ಲರು ? ಆದರೂ ಒಂದು ಆಸೆ.... ನನ್ನ ಹೃದಯದೊಳಗಿನ ಆಸೆಯದು. ಆದನ್ನೊಂದು ಪರಮಾತ್ಮ.......... ಆ ಹನುಮ ನೆರವೇರಿಸಿ ಕೊಡುತ್ತಿದ್ದರೆ........ನನಗೆ ಸಿಕ್ಕ ಎಲ್ಲ ಕಷ್ಟಗಳನ್ನೂ ಮರೆತು ಬಿಡುತ್ತಿದ್ದೆ. ನಾನು ಸತ್ತರೂ ಸ್ವರ್ಗ ಕಾಣುತ್ತಿದ್ದೆ. ಯಾಕೆ ? ಜೀವಂತ ಇರುವಾಗಲೇ ಸ್ವರ್ಗ ಸುಖಕ್ಕಿಂತ ಹೆಚ್ಚಿನ ಆನಂದ ನನಗಾಗ ಬಹುದು. ಯಾವಾಗ ?..............ನನ್ನ ಮುದ್ದು ಮಗು—ಅವಳು ಈಗ ಮಗುವೇ ? ನನ್ನ ಮಟ್ಟಿಗೆ ಮಗು. ಊರಿಗೆ ಅರಸನಾದರೂ ತಾಯಿಗೆ ಮಗನಂತೆ !—ಗೋದಿ, ಹಾದಿ ಕಾಣಬೇಕು........ದೇವರು ಅಂಥ ಪುಣ್ಯಾತ್ಮ ನನ್ನು ಕಳುಹಿಸಲಾರನೇ ? ನಾನು ಯಾರಿಗೆ ಯಾವ ಪಾಪ ಮಾಡಿದ್ದೇನೆ ? ಬದಲು ನನಗೇ ಎಷ್ಟೋ ಜನ ನೀಚರು ಪಾಪ ಮಾಡಿದ್ದಾರೆ..........ನಾನು ಯಾರಿಗೂ ಉಪಕಾರ ಮಾಡಿರಲಿಕ್ಕಿಲ್ಲ ನಿಜ. ಆದರೆ ನಾನಾರಿಗೂ ಅಡ್ಡ ಹಾದಿಗೆ ಹಚ್ಚಲಿಲ್ಲ. ಯಾರ ತುತ್ತನ್ನೂ ಕಸಿದುಕೊಳ್ಳಲಿಲ್ಲ. ಎಂದಮೇಲೆ ದೇವರು ನನ್ನ ಆಸೆಯನ್ನೇಕೆ ಈಡೇರಿಸಬಾರದು ? ಗೋದಿಗಿದು ಹನ್ನೆರಡು ವರುಷ ಪ್ರಾಯ. ಈಗಲೇ ಅವಳಿಗೊಬ್ಬ ವರನನ್ನು ಹುಡುಕಬೇಕು.............. ಇನ್ನೆರಡು ವರುಷ ಹೋದರೆ ಅವಳ ವಿದ್ಯಾಭ್ಯಾಸ ಮುಗಿಯುತ್ತದೆ. ಸಾಲೆಯ ಶಿಕ್ಷಕಿಯಾಗಲು ಅವಳು ಕಲಿತ ವಿದ್ಯೆ ಸಾಕು. ದೇವರ ದಯೆಯಿಂದ ಅವಳಿ ಗೊಂದು ವೃತ್ತಿ ಸಿಗಬಹುದು..............ಆದರೆ ಅದಕ್ಕೂ ಮುಖ್ಯವೆಂದರೆ ಅವಳಿ ಗೊಬ್ಬ ವರ ಬೇಕು. ಅವಳ ಮದುವೆಯಾಗಬೇಕು. ಮದುವೆ........ ಹೌದು ಮದುವೆಯೇ. ಆಡಂಬರದ ಮದುವೆಯಲ್ಲ........ಅಂಥ ಆಡಂಬರ ಅಬ್ಬರ ನನ್ನ ಮಗುವಿನ ಮದುವೆಗೆ ಬೇಡ. ಉತ್ತಮವಾದ ಒಬ್ಬ ವರ ಗೋದಿಯ ಕೊರಳಿಗೆ ಹೂಮಾಲೆ ಹಾಕಿದರೆ ಸಾಕು. ಅವಳ ಬಾಳ ಬತ್ತಿ

ಯನ್ನು ಆತ ಕಾಪಾಡಿಕೊಂಡು ಬೆಳಗಿಸಲಿ........ನನ್ನ ಈ ಹಾಳು ವೃತ್ತಿ—ಬೇಡ—ಸುಡಲಿ ಇದನ್ನು........ನಾನು ಸೂಳೆಯಂತೆ!...........ಸಾಯಲಿ ಆ ಮಾತು—ಅದನ್ನು ನಾನು ತಲೆಗೆ ಹಚ್ಚಿಕೊಳ್ಳುವುದಿಲ್ಲ. ಸೂಳೆಯೆಂಬ ಶಬ್ದ ಕೇಳಿದೊಡನೆ ನನ್ನ ತಲೆ ನೋವಿನಿಂದ ಕಳಚಿ ಬಿದ್ದಂತಾಗುತ್ತದೆ. ನಾನು ಸೂಳೆಯೇ ?...........ಸಾಯಲಿ, ಈ ಹಳ್ಳದ ಜೀವನ...........ನನ್ನ ಮುಂದಿನ ಪೀಳಿಗೆಯಾದರೂ ಹಾದಿ ಹಿಡಿಯಲಿ........ಚೌಡಪ್ಪನವರೂ ನನಗೆ ಸಹಾಯ ಮಾಡುತ್ತೇನೆಂದಿದ್ದಾರೆ...........'ಪೀಳಿಗೆಯಿಂದ ಪೀಳಿಗೆಗೆ ಈ ಜೀವನ ಸಾಗದಂತೆ ನೋಡಬೇಕು' ಎಂದು ಅವರೂ ನನಗೆ ಉಪದೇಶಿಸಿದ್ದಾರೆ..........." ಹೀಗೆ ಆಲೋಚಿಸುತ್ತ ಮನದಲ್ಲಿ ಮಾತಾಡುವಾಗ ಅವಳ ಮನೋಭೂಮಿಯಲ್ಲಿ ಗೋದಿ ಬೆಳೆದು ಹೆಣ್ಣಾಗಿ ಕಂಡು ತುಂಬಿದ ಜವ್ವನದಿಂದ ಮುಂದೆ ನಿಂತಿದ್ದಾಳೆ.

"ಎಷ್ಟು ಚಂದವಾಗಿದ್ದಾಳೆ ನನ್ನ ಮಗಳು!........ನನ್ನ ಮಗಳ ಚಂದವನ್ನು ನಾನೇ ಹೊಗಳಬಾರದು........ಎಂಥ ಮುಖ! ಹೋ! ಅಯ್ಯೋ.... ಇದೇ ವಯಸ್ಸಿನಲ್ಲಿ ನಾನು..........ಹಾಳಾದೆ........ಅಯ್ಯೋ ಹಾಳಾದೆ! ಅಡ್ಡ ಹಾದಿಗೆ ಬಿದ್ದೆ! ಕ್ಷಮಿಸು ಹನುಮಾ ಕ್ಷಮಿಸು..........ನನ್ನ ಅಪರಾಧವನ್ನು ಕ್ಷಮಿಸು. ದಮ್ಮಯ್ಯ! ಕ್ಷಮಿಸು........ನನ್ನನ್ನು ಬೇಕಾದಷ್ಟು ಪೀಡಿಸು ಮನುಷ್ಯ ಜಾತಿಗೆ ಬರಬಹುದಾದ ಎಲ್ಲ ಕಷ್ಟಗಳನ್ನು ನನಗೆ ಕೊಡು........ ಆದರೆ ನನ್ನ ಮಗುವಿಗೆ..........ಮುನಿಯಬೇಡ. ಅವಳಿಗೆ ನನ್ನ ಪಾಪದ ಶಿಕ್ಷೆ ಕೊಡಬೇಡ" ಎಂದು ಮುಖ ವಿಕಾರಗೊಳಿಸಿ ಆಕೆ ಒಳಗೆ ಓಡಿದಳು. ಹನುಮನ ಫೋಟೋದ ಕೆಳಗೆ ಭಕ್ತಿಯಿಂದ ಕೂತು ಗಳಗಳನೆ ಅಳತೊಡಗಿದಳು. ಮನೆಯಲ್ಲಿ ಯಾರೂ ಇರಲಿಲ್ಲ. ಸಂಜೆಯ ಸಮಯವದು.

ಅಲ್ಲಿ ಕುಳಿತುಕೊಂಡು ಹನುಮನೊಡನೆ ಬೇಡಿಕೊಳ್ಳತೊಡಗಿದಳು. ಏನನ್ನು ? 'ನನಗೆ ಶಿಕ್ಷೆ ಬೇಕಾದಷ್ಟು ವಿಧಿಸು..........ಆದರೆ ನನ್ನ ಮಗಳನ್ನು ರಕ್ಷಿಸು........ಅಡ್ಡ ಹಾದಿಗೆ ಹೋದರೆ ನೀನೇ ಅದಕ್ಕೆ ಕಾರಣ' ಎಂದೂ ಅವಳ ಮನಸ್ಸು ಅವನನ್ನು ಬೆದರಿಸಿತು. ಅವಳ ಚಿತ್ತಪಟಲದ ಮೇಲೆ—ಅವಳ ಹಿಂದಿನ ಜೀವನವೆಲ್ಲ ಜೀವ ತಾಳಿ ರುದ್ರಾವತಾರದಿಂದ ಕುಣಿಯತೊಡಗಿತು.

ಆಕೆ ಜನ್ಮ ತಾಳಿದ್ದೂ ಒಂದು ವೇಶ್ಯೆಯ ಸಂಗಡದಲ್ಲೇ. ತನ್ನ ಎಳೆಯ ಪ್ರಾಯದಲ್ಲಿ ಆಕೆ ಆ ವೃತ್ತಿಗೆ ಹೇಸಿಕೊಂಡಿದ್ದಳು. ದೊಡ್ಡವಳಾಗುತ್ತ ಬಂದಂತೆ ಅವಳನ್ನೂ ಅವಳ ತಾಯಿ ತನ್ನ ಮನೆತನದ ಕಸುಬಿಗೆ ಎಳೆಯಲು ಪ್ರಯತ್ನಿಸಿದಳು. ಆದರೆ ಇವಳಿಗೆ ಆ ಜೀವನದಲ್ಲಿ ಜಿಗುಪ್ಸೆ ಹುಟ್ಟಿತಷ್ಟೆ. ಮೊದಲಿನಿಂದಲೂ ಅವಳು ತಾಯಿಯನ್ನು ದ್ವೇಷಿಸತೊಡಗಿದ್ದಳು. ಅವರ ಮನೆಗೆ ಬರುವವರಲ್ಲಿ ಶ್ರೀಮಂತರೇ ಹೆಚ್ಚು. ಅವರಲ್ಲಿ ಒಬ್ಬ ಕುಡುಕನು ಸುಂದರಿಯನ್ನು ಯಾವಾಗಲೂ ಕಡೆಗಣ್ಣಿನಿಂದ ನೋಡುತ್ತಿದ್ದ. ಹಲವಾರು ಸಲ ಆತ ಅವಳ ತಾಯಿಗೆ "ಈಕೆಯನ್ನು ನನಗೇ ಬಿಟ್ಟುಬಿಡು. ನಿನಗೆ ಎಷ್ಟು ಬೇಕೋ ಅಷ್ಟು ಹಣ ಕೊಡುತ್ತೇನೆ" ಎಂದು ವಾರಕ್ಕೆ ಹತ್ತೋ ಇಪ್ಪತ್ತೋ ರೂಪಾಯಿ ಕೊಡುವ ಪರಿಪಾಠವನ್ನು ಇಟ್ಟಿದ್ದ. ಅವನ ವರ್ತನೆಯನ್ನು ನೋಡಿ ಸುಂದರಿ ಮನೆಗೆ ಬರುವುದನ್ನೇ ನಿಲ್ಲಿಸತೊಡಗಿದಳು ಕಾರಣ ತಾಯಿ–ಮಗಳಲ್ಲಿ ಬೇಕಾದಂತೆ ಜಗಳವಾಯಿತು. ಆದರೂ ಸುಂದರಿ ಸೋಲಲಿಲ್ಲ. ಆಕೆ ತನ್ನ ದಿನದ ಬಹು ಭಾಗವನ್ನು ಊರಹೊರಗಿನ ಹಳೆಯ ಹನುಮನ ಗುಡಿಯಲ್ಲೇ ಕಳೆಯತೊಡಗಿದಳು. ತಾಯಿಗೆ ಮಗಳು ಎಲ್ಲಿಗೆ ಹೋಗುತ್ತಾಳೆಂದು ತಿಳಿಯಲಿಲ್ಲ. ಆ ನಿಟಸಿಗೂ ಅದು ತಿಳಿಯುವುದು ಕಷ್ಟವಾಗಿತ್ತು. ಆ ವೇಳೆಯಲ್ಲಿ ಸುಂದರಿಗೆ ಹದಿನಾಲ್ಕು ವರುಷ ಪ್ರಾಯ. ಅದೇ ವರುಷ ಋತುಮತಿಯಾಗಿದ್ದಳು. ಅವಳ ದೇಹ ಕಾಮದ ಹಸಿವಿನಿಂದ ಬಳಲುತ್ತಿತ್ತು. ಆದರೆ ಅದಕ್ಕೂ ಆಸೆ—ತನ್ನದೇ ಆದ ಒಂದು ಆಸೆ ಇರದೆ ಹೋಗಿರಲಿಲ್ಲ. ಒಮ್ಮೆ ರಾತ್ರಿಯೂ ಸುಂದರಿ ಆ ಹನುಮನ ಗುಡಿಯಲ್ಲೇ ವಸತಿ ಹೂಡಿದಳು. ಅದಕ್ಕೆ ಕಾರಣವಿರದೆಯೂ ಇಲ್ಲ. ನೆರೆಯೂರ ನಿಂಗಪ್ಪ ಅಲ್ಲಿಂದ ತನ್ನ ಗೋವುಗಳನ್ನು ಅಟ್ಟಿಕೊಂಡು—ಗುಡ್ಡಕ್ಕೋ, ಬಯಲಿಗೋ ಹೋಗುತ್ತಿದ್ದ. ಆತ ಇವಳನ್ನು ಎಷ್ಟೋ ಸಲ ನೋಡಿದ್ದ. ದಿನಗಳು ಕಳೆದಂತೆ ಅವರಿಬ್ಬರಲ್ಲಿ ಮಾತುಕತೆಯೂ ನಡೆಯತೊಡಗಿತು. ಗುಡ್ಡೆಯಲ್ಲಿ ಬೆಳೆಯುವ ಹಣ್ಣುಹಂಪಲುಗಳನ್ನೂ ಆತ ತಂದುಕೊಟ್ಟು ಈಕೆಯನ್ನು ಆರಾಧಿಸುತ್ತಿದ್ದ. ಇವಳ ವಿಚಿತ್ರವಾದ ಒನಪು ಒಯ್ಯಾರಗಳನ್ನು ಕಂಡು ಆತ ಹುಚ್ಚನಾಗಿದ್ದ. ಅವನಿಗೂ ಅದೇ ಹತ್ತೊಂಬತ್ತರ ಹರಯ. ತುಂಬಿದ ಮೈ, ಅಗಲವಾದ ಮುಖದಲ್ಲಿ ಅದೇ ಕುಡಿಯೊಡೆದ ಮೀಸೆಗಳು, ಹರನಾದ ಎದೆ

ಬೆಳ್ಳಿಯಂಥ ದಂತಪಕ್ತಿ, ಸುಂದರವಾದ ಉಂಗುರಗೂದಲು—ಅವನ ಆ ವಯಸ್ಸಿನ ಶರೀರಕ್ಕೆ ಕುಂದಣವಿಟ್ಟದ್ದವು.

"ನಿನ್ನ ಮನೆಯೆಲ್ಲಿ ?" ಎಂದು ಆತ ಒಮ್ಮೆ ಕೇಳಿದ್ದ. ಈಕೆ ಅವನನ್ನು ಮರುಳನಾಗಿ ಮಾಡಿದಳು ನಗುನಗುತ್ತ "ನೀನು ಯಾಕೆ ಈ ಹನುಮನ ಗುಡಿಯಲ್ಲಿ ಹೊತ್ತು ವೇಳೆ ಇಲ್ಲದೆ ವಸ್ತಿ ಹೂಡುವಿ ?" ಎಂದು ಆತ ಕೇಳಿದರೂ ಅವಳು ಅವನಿಗೆ ನಿಜವಾದ ಉತ್ತರ ಕೊಟ್ಟಿರಲಿಲ್ಲ. ಅವರಿಬ್ಬರ ನಡುವಿನ ಸಲುಗೆ ಬಹು ದೂರದ ತನಕ ಮುಟ್ಟಿತ್ತು ಅವಳ ತೊಡೆಯ ಮೇಲೆ ಆತ ಮಲಗುತ್ತಿದ್ದ. ಅವಳು ಅವನ ತಲೆಯೊಳಗಿನ ಹೇನು ಹೆಕ್ಕುವ ಕೆಲಸ ಮಾಡತೊಡಗಿದಳು.

ಆ ಗುಡಿಯನ್ನು ನೆರಳಲ್ಲಿ ನಿಲ್ಲಿಸಿದ ಆಲದ ಮರವೊಂದು ವಿಶಾಲವಾಗಿ ಹಬ್ಬಿತ್ತು. ಅದೇ ಆ ಗುಡಿಗೆ ಮಾಡು. ಅದರ ನಡುವಿನಲ್ಲಿ ಸ್ವಲ್ಪ ಎತ್ತರದ ಮೇಲೆ ಬಾಲ ತುಂಡಾದ ಹನುಮ ನಿಂತಿದ್ದ. ಅವನು ವಾರದ ಆರು ದಿವಸ ಉಪವಾಸ ಬೀಳುತ್ತಿದ್ದ. ಶನಿವಾರ ಮಾತ್ರ ಅವನಿಗೆ ಹಣ್ಣುಕಾಯಿಗಳ ಸಮಾರಾಧನೆ ಅಂದು ಎಲ್ಲೆಲ್ಲಿಂದಲೋ ಜನ ಅಲ್ಲಿಗೆ ಬಂದು ಹರಿಕೆ ಸಲ್ಲಿಸಿ ಹೋಗುತ್ತಿದ್ದರು. ಆದರೆ ಆ ಶನಿವಾರ ದಿನ ಮಾತ್ರ ನಿಂಗಪ್ಪ ಮತ್ತು ಸುಂದರಿಯರ ಸಮಾಗಮವಾಗುತ್ತಿರಲಿಲ್ಲ. ಮರುದಿನ ಅಲ್ಲಿಗೆ ಬಂದೊಡನೆ ಅವರಿಬ್ಬರು ಮೊದಲು ಒಬ್ಬರಿಗೊಬ್ಬರು ಬಿಗಿಯಾಗಿ ಅಪ್ಪಿಕೊಳ್ಳುತ್ತಿದ್ದರು. ಅಷ್ಟು ದಿವ್ಯವಾಗಿತ್ತು ಅವರ ಪ್ರೇಮ. ಬರಬರುತ್ತ ನಿಂಗಪ್ಪ ಅವಳನು ಮುದ್ದಿಡುವುದಕ್ಕೂ ಪ್ರಾರಂಭಿಸಿದ. ಅವಳೂ ಬಿಗಿಯಾಗಿ ಅವನ ತುಟಿಗಳಿಗೆ ತನ್ನವುಗಳನ್ನು ತಾಗಿಸುತ್ತಿದ್ದಳು. ಆತನ ತೋಳತೆಕ್ಕೆಯಲ್ಲಿ ಸಿಲುಕಿ ಆಕೆ ಸ್ವರ್ಗಸುಖವನ್ನೇ ಕಾಣುತ್ತಿದ್ದಳು. ಅವನು ಹಾಗೆ ಮುದ್ದಿಸುವಾಗ ಅವಳು ಅವನಿಂದ ದೂರ ಸರಿಯಲು ಯತ್ನಿಸುತ್ತಿರಲಿಲ್ಲ. ಆಕೆಗೆ ಅದರಿಂದ ಕೇವಲ ಆನಂದವಷ್ಟೇ ದೊರೆಯುತ್ತಿತ್ತು.

"ಇದನ್ನೆಲ್ಲ ಯಾರು ಕಲಿಸಿದರು ನಿಂಗಾ ನಿನಗೆ ?" ಎಂದು ಆಕೆ ಅವನು ಅವಳನ್ನು ಚುಂಬಿಸಿದ ಮೇಲೆ ಆತನ ತೋಳಲ್ಲೇ ತಲೆಯಾನಿಸಿ ಕೇಳಿದಳು ಆಕೆ ಅಷ್ಟು ದೊಡ್ಡವಳಾದರೂ ತನ್ನ ಮನೆಯಲ್ಲಿ ನಡೆಯುವ ಅವ್ಯಾಪಾರವನ್ನು ನೋಡಿದವಳಲ್ಲ. ಅಲ್ಲದೆ ಅದನ್ನು ನೋಡುವುದಕ್ಕೂ ಅವ

ಗೆ ಎಡೆಯಿರಲಿಲ್ಲ. ಆಕೆ ಅಲ್ಲಿಗೆ ಬರುವ ಪುರುಷರ ಬಗ್ಗೆ ಮೊದಲಿನಿಂದಲೂ ಹೇಸಿಗೆ ಪಡುತ್ತಿದ್ದಳು. ಅಂತೇ ಅಂಥವರು ಮನೆಗೆ ಬರುವ ಹೊತ್ತಿಗೆ ಸುಂದರಿ ದೂರ ಹೋಗುವ ರೂಢಿಯಿಟ್ಟಿದ್ದಳು.

ನಾಲಗೆಯಿಂದ ತುಟಿ ಒರಸಿಕೊಳ್ಳುತ್ತ " ಇದಕ್ಕೂ ಹೆಚ್ಚಿನ ಸುಖವೊಂದಿದೆ. ಯಾಕೆ ? " ಎಂದು ಕೇಳಿದ ನಿಂಗ.

" ನೀನು ಹಾಗೆ ಇನ್ನೊಮ್ಮೆ ಮಾಡು. ನನಗೆ ಸುಖವಾಗುತ್ತದೆ ನಿಂಗಾ, ನಾವಿಬ್ಬರೂ ಇಲ್ಲಿಯೇ ಇರೋಣ " ಎಂದಳು ಆಕೆ ಆತ್ಮಾನಂದದಿಂದ. ಆಗ ಆವನು ಅವಳನ್ನು ದೂರ ಸರಿಸಿದ. ಅಂದು ಅವರಿಬ್ಬರೂ ಮನೆಗೆ ಹೋದರು.

ಹೀಗೇ ಅವರ ಪ್ರೇಮ ಎಷ್ಟೋ ದಿನಗಳು, ತಿಂಗಳುಗಳ ವರೆಗೂ ನಡೆಯಿತು. ಅವನು ಅವಳು ಯಾರು ಎಂದು ತಿಳಿಯಲು ತವಕಿಸಲಿಲ್ಲ. ಆಕೆಯೂ ಅವನ ಕುಲಗೋತ್ರ ಶೋಧಿಸಲು ಮನಸ್ಸು ಮಾಡಲಿಲ್ಲ.

ಅಂದು ಮಂಗಳವಾರ ಅವರಿಬ್ಬರೂ ಆ ಆಲದ ಮರದ ಅಡಿಯಲ್ಲಿ ಕುಳಿತಿದ್ದರು. ಎಷ್ಟೋ ಹೊತ್ತಿನವರೆಗೆ ಪ್ರೇಮಕ್ರೀಡೆ ನಡೆಯಿತು. ಆಗ ಅವಳಿಗೆ ಏನಾಯಿತೋ ಏನೋ ! " ಬಾ ನಿಂಗಾ ಒಳಗೆ ಹೋಗೋಣ. ಇಲ್ಲಿ ಇದ್ದರೆ ಯಾರಾದರೂ ನಮ್ಮನ್ನು ನೋಡಬಹುದು. ಬಾ ಒಳಗೆ— ಇವತ್ತು ಮಂಗಳವಾರ. ಯಾರೂ ಬರುವುದಿಲ್ಲ " ಎನ್ನುತ್ತ ಅವನನ್ನು ಎಳೆದುಕೊಂಡು ಗುಡಿಯೊಳಗೆ ಹೋದಳು.

ಹನುಮನ ಮೂರುತಿಯ ಹಿಂದೆ ಹೋದರು. ಅಲ್ಲಿ ಸ್ವಲ್ಪ ಕತ್ತಲೆಯೂ ಕವಿದಿತ್ತು. ಯಾಕಂದರೆ ಒಂದೆರಡು ಬೃಹದಾಕಾರದ ಬಂಡೆಗಳು ಹೇಗೋ ಬಿದ್ದು ಗವಿ ಮಾಡಿಟ್ಟಿದ್ದವು.

ನಿಂಗನಿಗೂ ಮೈಯ ಕಾವು ತಡೆಯುವುದಾಗಲಿಲ್ಲ. ಅವನು ಆಕೆಯನ್ನು ಬಿಗಿಯಾಗಿ ಅಪ್ಪಿಕೊಂಡ. ಆಗ ಅವನಿಗೆ ಒಮ್ಮೆಲೇ ಹೆದರಿಕೆ ಹುಟ್ಟಿತು. ಥಟ್ಟನೇ ಅವಳನ್ನು ಬಿಟ್ಟ.

" ಹೋ ! ಅದೋ ಆ ಹನುಮ........ಅವನದು ಈ ಗುಡಿ. ಅವನು ನೋಡುತ್ತಾನೆ..................ಇಲ್ಲಿ ಬೇಡ " ಎಂದು ಆತ ಹಿಂದೆ ಸರಿಯುತ್ತಿದ

ವಷ್ಟರಲ್ಲಿ ಅವಳೇ ಇವನನ್ನು ಮುದ್ದಿಸಿದಳು. ನಿಂಗ ಮುಂದೆ ಬಹಳ ವೇಳೆ ಕಳೆಯಲಿಲ್ಲ.

ಎಷ್ಟೋ ಹೊತ್ತು ದಾಟಿದ ಮೇಲೆ ಅವರು ಅಲ್ಲಿಂದ ಹೊರಗೆ ಬಂದರು. ಸುಂದರಿ ಮೊದಲು ಗುಡಿಯನ್ನು ತೊರೆದಳು. ಹೊರಗೆ ಬಂದು ಆಕೆ ಅತ್ಯಾ ನಂದದಿಂದ ಜಗತ್ತನ್ನೆಲ್ಲ ನೋಡುತ್ತಿದ್ದಳು. ಆಗ ನಿಂಗ ದೆವ್ವದಂತೆ ಕಿರುಚಿ ಕೊಂಡ. "ಅಯ್ಯೋ! ನಾಗರ—ಮಿಡಿನಾಗರ ಕಡಿಯಿತು ಸುಂದರೀ...... ಅಯ್ಯೋ ಸತ್ತೆ......ಅವ್ವಾ ಅಪ್ಪಾ!" ಎಂದು ಕಾಲು ಹಿಡಿದುಕೊಂಡು ಹೊಯ್ಕೊಳ್ಳಲಿಕ್ಕೆ ಪ್ರಾರಂಭಿಸಿದ. ಆಗ ಸುಂದರಿಗೆ ಏನು ಮಾಡಬೇಕೆಂದು ತಿಳಿ ಯಲಿಲ್ಲ. ಅವಳು ಅಳುತ್ತ ಹೊಯ್ಕೊಂಡಳು!

ನಿಂಗ "ನೀರೂ, ನೀರೂ! ಸುಂದರಿ!" ಎಂದು ಬೊಬ್ಬಿಡುತ್ತಿದ್ದ. ಅವನ ಮೇಲೆ ಬಿದ್ದು ಸುಂದರಿಯೂ ಬೊಬ್ಬಿಟ್ಟಳು. ಅವನ ಬೊಬ್ಬೆ ಕೇಳ ಲಾರದೆ, ಒಂದು ಎಲೆಯ ದೊಣ್ಣೆ ಮಾಡಿ ನೀರು ತಂದುಕೊಟ್ಟಳು ಸುಂದರಿ. ನೀರು ಕುಡಿದ ಕೂಡಲೇ ಅವನ ಮೈ ಸಂಪೂರ್ಣ ಕಪ್ಪಾಯಿತು. ಆತನಿಗೆ ಅಲ್ಲಿಂದ ಏಳಲಾಗಲಿಲ್ಲ. ಅಲ್ಲಿಯೇ ಬಿದ್ದುಬಿಟ್ಟ. ಬಾಯಿಯೂ ಚೆನ್ನಾಗಿ ಬಾರದಾಯಿತು. ಆಗ ಆತ ಇವಳನ್ನು ಕರೆದು "ನಾವು ಪಾಪ ಮಾಡಿದೆ.... ವು....ಹೀಗಾಯಿತು....ಗುಡಿಯಲ್ಲಿ....ನೀನು....ಹನುಮನನ್ನು...." ಎನ್ನುವ ಷ್ಟರಲ್ಲಿ ಅವನ ಜೀವ ಹಾರಿಹೋಯಿತು. ಆ ಹೊತ್ತಿನಲ್ಲಿ ಸುಂದರಿಗೆ ಅವನು ಹೇಳಿದ ಮಾತಿನ ಅರ್ಥವಾಗಲಿಲ್ಲ.

ಆತನ ಜೀವ ಹೋದೊಡನೆ ಸುಂದರಿ ಬೊಬ್ಬಿಟ್ಟು ಜನ ಕೂಡಿಸಿದಳು. ಬಂದವರು ನಿಂಗನ ತಂದೆ, ತಾಯಿ, ಮತ್ತಿನರು ಹಳ್ಳಿಯವರು. ಅವನ ಹೆಣ ಒಯ್ದರು. ಸುಂದರಿಯೂ ಅಳುತ್ತ ಅವರ ಹಿಂದೆ ಹೊರಟಿದ್ದಳು. ಆದರೆ ಅವರಲ್ಲಿ ಒಬ್ಬ ಆವಳನ್ನು ಸುರಕ್ಷಿತವಾಗಿ ಅವಳ ಮನೆಗೆ ಒಯ್ದು ತಲುಪಿಸಿದ. ಅಂದಿನಿಂದ ಸುಂದರಿ ಹನುಮನ ಗುಡಿಗೆ ಬರುವುದನ್ನು ಬಿಟ್ಟಳು. ಹುಚ್ಚ ರಂತೆ ನಾಲ್ಕು ದಿನ ನಟಿಸಿದಳು. ಕೆಲವು ದಿನಗಳಾದ ಮೇಲೆ ಹುಚ್ಚೇ ಹಿಡಿ ಯಿತು. ಕಾರಣ ಹುಚ್ಚರ ಆಸ್ಪತ್ರೆಗೆ ಅವಳನ್ನು ಹಾಕುವುದೆಂದು ಅವಳ ತಾಯಿ ನಿರ್ಣಯಿಸಿದಳು.

ಚೌಡಪ್ಪನವರ ಮುನ್ಸಿಪಾಲ್ಟಿಯ ದವಾಖಾನೆಯೆಂದರೆ ಸರಕಾರದ 'ಹಾಸ್ಪಿಟಲ್' ಗಳನ್ನು ಮೀರಿಸುವಂತಹದ್ದು. ಅಲ್ಲಿಯೇ ಸುಂದರಿಯನ್ನು ಬಿಟ್ಟರು.

ಐದಾರು ತಿಂಗಳು ದಾಟಿದವು. ಆಗ ಆಸ್ಪತ್ರೆಯ ಡಾಕ್ಟರರು "ಈ ಹುಡುಗಿಯ ಹೊಟ್ಟೆಗೆ ಐದು ತಿಂಗಳಾಗಿರಬಹುದು" ಎಂದು ಪರೀಕ್ಷೆ ಮಾಡಿ ಅವಳ ತಾಯಿಗೆ ಹೇಳಿದರು. ಅವಳಿಗೆ ವಿಚಿತ್ರವೆನಿಸಿತು! ಏನು ಮಾಡಬೇಕೆಂದು ತಿಳಿಯದೆ ಅವಳಿಗೂ ಹುಚ್ಚು ಹಿಡಿದಂತಾಯಿತು.

ಆದರೆ ಆಸ್ಪತ್ರೆಯಲ್ಲಿ ಬೇರೆಯೇ ಸುದ್ದಿ ಹಬ್ಬಿತು. ಚೌಡಪ್ಪನವರು ಆಗಾಗ ಆ ದವಾಖಾನೆಗೆ ಬಂದುಹೋಗುವ ರೂಢಿ ಇಟ್ಟಿದ್ದರು. ಅದೇಹೊತ್ತಿನಲ್ಲಿ ಅವರ ಹೆಂಡತಿಯೂ ಅದೇ ದವಾಖಾನೆಯಲ್ಲಿ ಉಪಚಾರ ಪಡೆದುಕೊಳ್ಳುತ್ತಿದ್ದಳು. ಹೀಗಾಗಿ ಚೌಡಪ್ಪನವರ ಮೇಲೆ ಹಾಕಿದ ಅಪವಾದ ನಿಜವೆಂದು ಜನ ನಂಬಿದರು. ಕಿವಿಯಿಂದ ಕಿವಿಗೆ ಬಿದ್ದು ಸುಂದರಿಯ ತಾಯಿಗೂ ಸುದ್ದಿ ತಿಳಿಯಿತು.

ಅವಳು ರಣಾಗ್ರ ಹೂಡಿಕೊಂಡೇ ಮುನ್ಸಿಪಾಲ್ಟಿಯ ಪ್ರೆಸಿಡೆಂಟರ ಮನೆಗೆ ಓಡಿದಳು. ಚೌಡಪ್ಪನವರ ಅಭಿಮಾನ ಕೆರಳಿ, ಸಿಟ್ಟು ಉಕ್ಕಿತು. ಕೂಡಲೇ ಆ ಸುಂದರಿಯ ತಾಯಿಯನ್ನು ಹೊಸ ಅಪರಾಧ ಹುಟ್ಟಿಸಿ, ಜೈಲಿಗೆ ಕಳುಹಿಸಿದರು. ಆ ಮುದಿ ಹೆಣ್ಣು ಜೈಲಿನಲ್ಲೇ ಕೊನೆ ಕಂಡಳು. ಅಂದೇ ಈ ಸುಂದರಿಯೂ ಬಾಣಂತಿಯಾದಳು. ಅವಳ ಹುಚ್ಚು ಬಿಟ್ಟಿತು. ಚೌಡಪ್ಪನವರ ಹೆಂಡತಿಯೂ ಇಹಲೋಕ ತೊರೆದಳು.

ಡಾಕ್ಟರರ ಸಲಹೆಯನ್ನು ಗುಪ್ತವಾಗಿ ಚೌಡಪ್ಪ ತಿಳಿದುಕೊಂಡರು— ಸುಂದರಿಯ ಬಗ್ಗೆ. ಒಳ್ಳೆಯ ಉಪದೇಶವೇ ಡಾಕ್ಟರರಿಂದ ಬಂತು. ಸುಂದರಿಗೆ ಎಲ್ಲಿ ಹೋಗಬೇಕೆಂದು ತಿಳಿಯಲಿಲ್ಲ..........ಚೌಡಪ್ಪನವರು ಖರೀದಿ ಮಾಡಿದ ಆ ಬಂಗಲೆಯಲ್ಲಿ ಅವಳ ಪ್ರವೇಶವಾಯಿತು. ಯೋಗಾಯೋಗದಿಂದ..........ಅವರು ಅವಳನ್ನು ಕೈಹಿಡಿದ ಹೆಂಡತಿಗಿಂತ ಹೆಚ್ಚು ಪ್ರೀತಿಸತೊಡಗಿದರು. ಸುಂದರಿಯೂ ತನ್ನ ದುರಂತ ಕಥೆಯನ್ನು ಅವರಿಗೆ ಹೇಳಿದಳು. ಅವರೂ ತಮ್ಮ ಮನಸ್ಸು ಬಿಚ್ಚಿ "ನೀನು ನನ್ನೊಡನೆ ಪ್ರಾಮಾಣಿಕತನದಿಂದ ವರ್ತಿಸು—ಅಂದರೆ ನಿನ್ನ ಭವಿಷ್ಯ ಉಜ್ವಲವಾಗುವುದರಲ್ಲಿ ಸಂದೇಹ

ವಿಲ್ಲ. ನೀನು ಯಾರೇ ಆಗಲಿ, ನಾನು ನಿನ್ನನ್ನು ಪ್ರೀತಿಸಿದ್ದೇನೆ " ಎಂದು ಒಮ್ಮೆ ಹೇಳಿದ್ದರು. ಆ ಕಾಲದಲ್ಲಿ ಅವರಿಬ್ಬರು ಅತ್ಯಂತ ಸಲುಗೆಯಿಂದ ವರ್ತಿಸುತ್ತಿದ್ದರು. ಆದರೆ............ಅವಳ ಮನಸ್ಸಿನಿಂದ ಅಂದು ಆಕೆ ಗುಡಿಯಲ್ಲಿ ಮಾಡಿದ ಪಾಪ—ಹನುಮನನ್ನು ವೈಲಿಗೆ ಮಾಡಿದ್ದೋ!—ಮರೆಯಲಿಲ್ಲ. ಅದಕ್ಕಾಗಿಯೇ ಆಕೆ ಈಗಲೂ ಹನುಮನನ್ನು ಪೂಜಿಸುತ್ತಿದ್ದಾಳೆ..............ಇವೆಲ್ಲ ಘಟನೆಗಳು ಸುಂದರಿಯ ತಲೆಯಲ್ಲಿ ಒಮ್ಮೊಮ್ಮೆ ತಾವಾಗಿ ಬಂದು ದಾಳಿ ಮಾಡುತ್ತವೆ. ಅವುಗಳನ್ನು ಆಕೆ ಮರೆಯುವುದು ಕಷ್ಟ. ಆದರೂ ಅವಳು ಇಲ್ಲಿಯ ವರೆಗೆ ಜೀವ ಹಿಡಿದುಕೊಂಡು ಬದುಕಿದ್ದು ಆ ಒಂದು ಮಗುವಿಗಾಗಿ. ಅವಳನ್ನು ದಾರಿಗೆ ಹಚ್ಚಬೇಕೆಂಬುದೇ ಅವಳ ಜೀವನದ ಉದ್ದೇಶ. ಆದರೆ ವಯಸ್ಸಾದಂತೆ ಆಕೆಯ ಮನಸ್ಸೂ ಪಾಪ-ಪುಣ್ಯಗಳ ವಿವೇಚನೆಯಲ್ಲಿ ತಾನಾಗಿ ಹೆಚ್ಚಿನ ಸಮಯ ಕಳೆಯತೊಡಗ್ಗಿದೆ. ಹನುಮನ ಮೇಲಿನ ಭಕ್ತಿ ವಿಪರೀತವಾಗುತ್ತ ಬಂದಿದೆ. ಈಗ ಹನುಮನ ಫೋಟೋವಿನ ಕೆಳಗೆ ಕುಳಿತಾಗ ಅವಳ ತಲೆಯಲ್ಲಿ ಮೇಲೆ ವಿವೇಚಿಸಿದ ಕತೆ—ಅವಳ ಬಾಳಿನ ಕತೆಯೇ—ಮಿಂಚಿನಂತೆ ಹಾರಿ ಮಾಯವಾಯಿತು. ಎಷ್ಟೋ ಹೊತ್ತು ಅಲ್ಲಿಯೇ ಕೂತಿದ್ದಳಾಕೆ.

ಈಗಲಾದರೂ ಸುಂದರಿ ಆ ನೀಚ ಸಿದ್ದಪ್ಪನ ನಾಶವನ್ನು ಹನುಮನೊಡನೆ ಬೇಡಿಕೊಳ್ಳುವುದನ್ನು ಬಿಟ್ಟಿರಲಿಲ್ಲ. ಅದು ಅವಳ ಪ್ರಾರ್ಥನೆಯ ಕೊನೆಯ ಪಲ್ಲವಿ ಎಂದರೂ ತಪ್ಪಾಗದು. ಇಂದಾದರೂ ಅದನ್ನು ತೀರಿಸಿಯೇ ಆಕೆ ಅಲ್ಲಿಂದ ಎದ್ದಳು.

ಹೊರಗೆ ಬರುವಾಗ ಚೌಡಪ್ಪನವರೂ ಅವಳ ಕಣ್ಣಿಗೆ ಬಿದ್ದರು. ಆಕೆಯನ್ನು ನೋಡಿ ನಗುತ್ತ ಅವರು ಅಲ್ಲಿಯ ಕುರ್ಚಿಯ ಮೇಲೆ ಕುಳಿತುಕೊಂಡಾಯಿತು. " ಯಾವಾಗ ಬಂದಿರಿ ? " ಎಂದು ಕೇಳಿದಳು ಸುಂದರಿ—ಚೌಡಪ್ಪನವರಿಗೆ.

" ಬೆಳಿಗ್ಗೆ ಬಂದಿದ್ದೆ. ಆದರೆ ಇಲ್ಲಿಗೆ ಈಗ ಬರಲಿಕ್ಕೆ ಸೌಡು ಸಿಕ್ಕಿತು. "

" ಈ ಸಲವೂ ಮುನಿಸಿಪಾಲ್ಟಿಗೆ ನೀವೇ ಆರಿಸಿ ಬಂದಂತಾಯಿತು."

" ಅದೇನು ದೊಡ್ಡ ಮಾತು ? ಆದರೆ ನಾನು ಈ ಸಲ ' ಪ್ರೆಸಿಡೆಂಟ ' ಜಾಗಕ್ಕೆ ಸ್ಪರ್ಧಿಸುವುದಿಲ್ಲ............ಆದರೂ ನಾನೇ ಪ್ರೆಸಿಡೆಂಟ ಇದ್ದ ಹಾಗೆ.

ಯಾಕಂದರೆ ನನ್ನಷ್ಟು ಅನುಭವ ಉಳಿದ ಜನರಿಗೆ ಇಲ್ಲ. ಅಂತೇ ನಾನು ಪ್ರೆಸಿಡೆಂಟ ಇಲ್ಲದೆ ಇದ್ದರೂ ಪ್ರೆಸಿಡೆಂಟ ಆದವನು ನಾನು ಹೇಳಿದಂತೆ ಕೇಳಬೇಕಾಗುತ್ತದೆ, ಕೇಳಿಯೂ ಕೇಳುತ್ತಾನೆ. ನನ್ನ ಮನಸ್ಸೇ ಈ ವರುಷ ಯಾಕೋ ಅದಕ್ಕೆ ಒಪ್ಪಲಿಲ್ಲ."

"ನಿಮ್ಮ ವಿರೋಧಿ ಪಕ್ಷದವನೂ ಚೆನ್ನಾಗಿ ಪ್ರಚಾರ ಮಾಡಿದ್ದ" ಎಂದು ಸುಂದರಿ ನಗಲಿಕ್ಕೆ ಪ್ರಾರಂಭಿಸಿದಳು.

"ಇದೇನು ನಗುತ್ತಿ?" ಎಂದು ಚೌಡಪ್ಪನವರೂ ನಕ್ಕರು.

"ಆವನ ಚುನಾವಣೆಯ ಪ್ರಚಾರ ನೆನೆದು ನನಗೆ ನಗು ಬಂತು. ಅದನ್ನು ಕೇಳಿದರೆ ನಿಮಗೂ ನಗೆ ಬಾರದಿರದು."

"ಸ್ವಲ್ಪ ಹೇಳು ನೋಡೋಣ"

"ನಾನು ಅಂದಿನ ರಾತ್ರಿ ಸುಮಾರು ಹತ್ತುಗಂಟೆಯ ಹೊತ್ತಿಗೆ ಹೊರಗೆ ಬಂದಿದ್ದೆ. ಆಗ ಅವನ 'ಪ್ರಚಾರ ಮಾಡುವ ಪಂಗಡದವರ' ಮೆರವಣಿಗೆ ಹೊರಟಿತ್ತು."

"ರಾತ್ರಿಯಲ್ಲೇ?"

"ಹೌದು, ಮೊದಲು ನಾನು ಹೇಳುವುದನ್ನು ಕೇಳಿಕೊಳ್ಳಿ. ಅದೇ ಆ ಮೇನ್ (Main) ರೋಡಿನಿಂದ ಹೊರಟಿತ್ತು. ಅದು ಚುನಾವಣೆಯ ಪ್ರಚಾರದ ಮೆರವಣಿಗೆ ಎಂದು ಮೊದಲು ನನಗೆ ತಿಳಿಯಲಿಲ್ಲ. ಅದನ್ನು ನಾನು....................ತಿಳಿದುಕೊಂಡೆ...............ಅದಕ್ಕೇ ನಗು ಬಂತು ನನಗೆ."

"ಅಂದರೆ ಅರ್ಥವಾಗದಲ್ಲ!"

"ಯಾರದೋ ಸ್ಮಶಾನಯಾತ್ರೆ ಹೊರಟಿದೆಯೆಂದು ನಾನು ಮೊದಲು ತಿಳಿದುಕೊಂಡಿದ್ದೆ."

"ಹೌದೇ!" ಎನ್ನುತ್ತ ಚೌಡಪ್ಪ ನಕ್ಕೇ ನಕ್ಕರು.

"ಯಾಕಂದರೆ ಆ ಮೆರವಣಿಗೆ ಸರಕಾರೀ ದವಾಖಾನೆಯತ್ತಲಾಗಿಸಿಂದ ಬರತೊಡಗಿತ್ತು. ರಸ್ತೆಯ ದೀಪಗಳು ಉರಿಯುತ್ತಿದ್ದರೂ ನಾಲ್ಕು ಪೆಟ್ರೋ ಮ್ಯಾಕ್ಸ ಹೊತ್ತಿಸಿಕೊಂಡು ದೊಡ್ಡ ಗುಂಪು ನಡೆದು ಬರುತ್ತಿತ್ತು. ಆ ಬೆಳಕು

ಈ ಅಂಗಳಕ್ಕೂ ಬಿತ್ತು. ಇದೇನಪ್ಪಾ........ಎಂದು ನಾನು ಹೊರಗೆ ಬಂದೆ. ನೋಡಿದೆ. 'ಯಾರದೋ ಹೆಣ ಇರಬೇಕು, ಸ್ಮಶಾನಕ್ಕೆ ಒಯ್ಯುತ್ತಿದ್ದಾರೆ' ಎಂದು ಎಣಿಸಿ ಒಳಗೆ ಬಂದೆ. ಅಷ್ಟರಲ್ಲಿ ನಮ್ಮ ಮನೆಯತ್ತ ಆ ಮೆರವಣಿಗೆ ಬಂದೇ ಬಿಟ್ಟಿತ್ತು. ನಾನು ಕೂಡಲೇ ಹೊರಗೆ ಹೋಗಿ ನೋಡಿದೆ. ನಿಮ್ಮ ಪ್ರತಿಸ್ಪರ್ಧಿ ನಾಲ್ಕು ಫೂಟು ಉದ್ದದ ಟಾರ್ಚ ಹಿಡಿದುಕೊಂಡಿದ್ದ. ಹೊಟ್ಟೆ ಮುಂದೆ ಮಾಡಿಕೊಂಡು ಬರುತ್ತಿದ್ದ. ಅವನ ನಾಲ್ಕು ಬದಿಗೆ ನಾಲ್ವರು ತಲೆಯ ಮೇಲೆ ಗ್ಯಾಸ್ ಹೊತ್ತುಕೊಂಡು ಹೆಜ್ಜೆ ಹಾಕುತ್ತಿದ್ದರು. ಅವರ ಆ ಮೆರವಣಿಗೆ ನೋಡಿದೊಡನೆ ನನಗೆ ನಗೆಯಿಂದ ಅಲ್ಲಿ ನಿಲ್ಲುವುದಕ್ಕಾಗಲಿಲ್ಲ."

"ಅವನು ಇಲ್ಲಿಗೂ ಬಂದು ಕ್ಯಾನವಾಸ್ (Canvass) ಮಾಡಿದನೇ?" ಎಂದು ಚೌಡಪ್ಪ ಕೇಳಿದರು.

"ನಾನು ಯಾರು ಎಂಬುದು ಅವನಿಗೆ ಗೊತ್ತಿಲ್ಲವೋ? ಅವನು ನನಗೆ ಹೇಗೆ ಹೇಳಲಿಕ್ಕಾಗುತ್ತದೆ ನಮ್ಮ ಈ ಮನೆಯ ಮುಂದಿನಿಂದಲೇ ಆ ಪಕ್ಕದ ಮನೆಗಳಿಗೆ ಹೋದ. ಆದರೆ ಇಲ್ಲಿಗೆ ಬರಲಿಲ್ಲ."

"ಬಹುಶಃ ತನ್ನ ಜಂಬ ತೋರಿಸಲಿಕ್ಕೇ ಇಲ್ಲಿಂದ ಹೋಗಿರಬೇಕು. ಬೇಕೆಂಬೇ ಅವನು ಆ ರಾತ್ರಿಯಲ್ಲಿ ಹಾಗೆ ಹೋದದ್ದು ಬಿಡು. ಆದರೆ ಅವನು ಸೋತು ಬಿಟ್ಟ! ಏನು ಉಪಯೋಗವಾಯಿತು? ನಾನು ನೋಡು ಸುಂದರೀ, ಹಾಗೆಲ್ಲ ಇಲ್ಲದ ಸಪ್ಪಳ ಮಾಡಲಿಕ್ಕೆ ಹೋಗಲಿಲ್ಲ. ಕಾಲಕಾಲವೂ ಮಾಡುವಷ್ಟು ಕ್ಯಾನವಾಸ್ ಮಾಡಿಸಿದೆ. ಆದರೂ ನಾನು ಆರಿಸಿ ಬಂದೆ. ಒಟ್ಟಾರೆ ಈ ಊರವರಿಗೆ ನನ್ನ ಮೇಲೆ ವಿಶ್ವಾಸ ಹೆಚ್ಚು. ಅವನಿಗೆ ಹಾಗೆಲ್ಲ ನನಗೆ ಬಿದ್ದ ಹಾಗೆ ಸಾಲಿಡ್ (Solid) ಓಟು ಬೀಳಲಿಕ್ಕೆ ಸಾಧ್ಯವೇ ಇಲ್ಲ. ಈಗ ನನ್ನ ತಲೆ ಶಾಂತವಾಗಿದೆ" ಎಂದು ಚೌಡಪ್ಪ ತನ್ನ ಮೇಲ್ಮೆಯನ್ನು ಹೇಳಿಕೊಂಡರು. ಹದಿನೈದು ದಿವಸಗಳ ಹಿಂದೆ ಅವರು ಮುನಿಸಿಪಾಲ್ಟಿಯ ಸದಸ್ಯರಾಗಿ ಆರಿಸಿ ಬಂದಿದ್ದರು. ಆದ್ದರಿಂದ ಈಗ ಅವರ ತಲೆ ನಿಜಕ್ಕೂ ಶಾಂತವಾಗಿತ್ತು.

"ನಾನು ಮೊನ್ನೆ ಮುದುಕಿಯ ಊರಿಗೆ ಹೋಗಿ ಬಂದೆ ಸುಂದರೀ" ಎಂದು ಚೌಡಪ್ಪ ಪುನಃ ಮಾತಾಡಲಿಕ್ಕೆ ಪ್ರಾರಂಭಿಸಿದರು.

" ಎಲ್ಲರೂ ಸುಖವಾಗಿದ್ದಾರೆಯೇ ? "

" ಗೋದಿಯಂತೂ ಮೈತುಂಬಿ ಬೆಳೆದಿದ್ದಾಳೆ. ಅವಳಿಗೆ ಈಗ ಎಷ್ಟು ವರುಷ ? ವಯಸ್ಸಿಗೆ ಮೀರಿದ ಬೆಳವಣಿಗೆ ಅವಳದು "

" ಹನ್ನೆರಡೋ, ಹದಿಮೂರೋ ಇರಬೇಕು "

" ಗೋದಿಯ ಬಣ್ಣವೇ ಬಂದಿದೆ ನೋಡು ನಿನ್ನ ಮಗಳಿಗೆ ! "

" ಹೆಣ್ಣು ಬೆಳೆಯುವುದು ಬೇಗವಲ್ಲವೇ ? "

" ಆದರೂ ಗೋದಿ ಗೋದಿಯೇ ಆಗಿದ್ದಾಳೆ ಸುಂದರೀ "

" ಏಳೆಂಟು ತಿಂಗಳಲ್ಲಿ ಅಷ್ಟು ಚೆನ್ನಾಗಿ ಬೆಳೆದಿದ್ದಾಳೆಯೇ ? "

" ನೀನು ಇತ್ತೀಚೆಗೆ ಅವಳನ್ನು ನೋಡಿಲ್ಲವೆಂದು ಕಾಣುತ್ತದೆ "

" ಇನ್ನೇನು ? ಅವಳ ಪರೀಕ್ಷೆಯೂ ಬಂತಲ್ಲ. ಅದನ್ನು ಮುಗಿಸಿ ಕೊಂಡೇ ಬರಲಿ ಎಂದು ನಾನೂ ಸುಮ್ಮನೇ ಕೂತಿದ್ದೇನೆ. "

" ಅವಳ ಓದು ಮುಗಿಯುವಷ್ಟರೊಳಗೇ ನಮ್ಮ ಮುನ್ಸಿಪಾಲ್ಟಿಯ 'ಕನ್ನಡ ಸಾಲೆ' ಪ್ರಾರಂಭವಾಗಬಹುದು. ಅಲ್ಲಿಯೇ ಅವಳಿಗೊಂದು ಶಿಕ್ಷಕಿಯ ಕೆಲಸ ಕೊಡಿಸುತ್ತೇನೆ "

" ಅದಕ್ಕೂ ಮುಖ್ಯವೆಂದರೆ ಅವಳಿಗೊಬ್ಬ ಯೋಗ್ಯ ವರನನ್ನು ಸಂಪಾದಿಸುವುದಲ್ಲವೇ ? "

" ಥೂ ಸುಂದರೀ, ನಿನಗೆ ಇನ್ನೂ ಅನುಭವ ಕಡಿಮೆ. "

" ಯಾಕೆ ? "

" ನಿನ್ನ ಮಾತಿಗೆ ! ನೀನು ಗೋದಿಯನ್ನು ಕೇಳಿದ್ದಿಯಾ ? "

" ಏನೆಂದು ? "

" ಮದುವೆಯ ವಿಷಯ ಅವಳೊಡನೆ ಪ್ರಸ್ತಾಪಿಸಿದ್ದಿಯಾ ? "

" ಅವಳಿಗೇನೆಂದು ಕೇಳುವುದು ಅದನ್ನು ? "

" ಅಲ್ಲಿಯೇ ನಿನ್ನ ತಪ್ಪು ಇದೆ ನೋಡು "

" ಹಾಗಾದರೆ ನೀವು ಹೇಳುವುದಾದರೂ ಏನು ? "

" ಅವಳು ಎಷ್ಟೆಂದರೂ ಕಲಿತ ಹೆಣ್ಣು. ನೀನು ಹೇಳಿದಂತೆ—ಆ ಒಂದು ವಿಷಯದಲ್ಲಿ—ಅಂದರೆ ಮದುವೆಯ ವಿಷಯದಲ್ಲಿ ಆಕೆ ಕೇಳಲಿಕ್ಕೆ ಸಾಧ್ಯವಿಲ್ಲ ಎಂದು ನನಗೆ ಅನಿಸುತ್ತದೆ. ಮತ್ತು ಅವಳು ಒಂದು ನೌಕರಿ

ದೊರಕಿಸಿಕೊಂಡಳೆಂದರೆ ಗಂಡ ತಾನಾಗಿಯೇ ಬರುತ್ತಾನೆ..........ನೀನು ತಪ್ಪು ತಿಳಿದುಕೊಳ್ಳಬೇಡ ಸುಂದರೀ ನಾನು ನಿನ್ನ ಹಿತವನ್ನೇ ಬಯಸುವವನು. ಅವಳ ಮದುವೆಯ ಚಿಂತೆ ನಿನಗೆ ಈಗಲೇ ಹಿಡಿದರೆ ಮುಂದಿನ ಗತಿಯೇನು ? ”

“ ಈಗಲೇ , ’ ಎಂಬ ನಿಮ್ಮ ಮಾತಿನ ಅರ್ಥವೇ ನನಗೆ ತಿಳಿಯದು ! ಗೋದಿಗೆ ಮದುವೆಯ ಪ್ರಾಯ ಆಗಲಿಲ್ಲವೇ ? ಸುಖಸಂಪತ್ತಿನಲ್ಲಿ ಬೆಳೆದ ಹುಡುಗಿಯವಳು. ಇನ್ನು ಒಂದೇ ವರುಷದೊಳಗೆ ಋತುಮತಿಯಾಗುತ್ತಾಳೆ. ಆಮೇಲಾದರೂ ಅವಳಿಗೆ ಲಗ್ನವಾಗುವುದು ಬೇಡವೇ ? ” ಎಂದು ಹೇಳುಹೇಳುತ್ತಲೇ ಸುಂದರಿಯ ಮುಖದ ಮೇಲಿನ ಛಾಯೆಯೇ ಬದಲಾಯಿತು. ಅಂತೇ ಆವಳ ಮಾತು ಭಾವನಾಲೋಕಕ್ಕೆ ಇಳಿಯತೊಡಗಿತು

“........ನಾನು ಪೇಟೆಗೋ, ಹೊರಗೋ, ಎಲ್ಲಿಗೂ ಹೋಗಲಿ; ನನ್ನ ಕಣ್ಣಿಗೆ........ಆಗಾಗ ಎಷ್ಟೋ ತರುಣರು ಕಾಣುತ್ತಾರೆ........ಅವರಲ್ಲಿ ಒಬ್ಬನನ್ನೋ........ಯಾವನನ್ನೊ ನೋಡುತ್ತ....ನಾನು ನಿಲ್ಲುವುದುಂಟು. ‘ ಇಂಥವನೇ ಒಬ್ಬ ತರುಣ ನನ್ನ ಗೋದಿಯ ಗಂಡನಾಗುತ್ತಿದ್ದರೆ ’..........ಅಷ್ಟೇ ಅಲ್ಲ, ಒಮ್ಮೊಮ್ಮೆ ನನ್ನ ಮನಸ್ಸು, ‘ ಓ ತರುಣಾ, ನನ್ನ ಮುದ್ದು ಮಗಳ ಕೈ ಹಿಡಿಯುತ್ತೀಯಾ ? ನನ್ನ ಮುಂದಿನ ಪೀಳಿಗೆಯನ್ನು ಯೋಗ್ಯ ದಾರಿಗೆ ಹಚ್ಚುವ ಪುಣ್ಯ ಕಟ್ಟಿಕೊಳ್ಳುತ್ತೀಯಾ ?........ನಿನಗೆ ಮದುವೆಯಾಗಿರಲಿಕ್ಕಿಲ್ಲವಷ್ಟೇ? ಆಗಿದ್ದರೆ ನನ್ನನ್ನು ಕ್ಷಮಿಸು ’ ಎಂದು ಅವನನ್ನು ಕೇಳಲಿಕ್ಕೂ ಮುಂದೋಡುತ್ತದೆ. ಆದರೆ........ಬಾಯಿ ಮಾತ್ರ ಆ ಶಬ್ದಗಳನ್ನು ಹೊರಡಿಸುವುದಿಲ್ಲ. ನನ್ನ ಪ್ರಾರ್ಥನೆಯಾದರೂ ಒಂದೇ. ‘ ಹನುಮಾ ನನ್ನ ಮುದ್ದು ಕಂದನಿಗೊಬ್ಬ ಯೋಗ್ಯ ವರನನ್ನು ದೊರಕಿಸಿ ಕೊಡು ’ ಎಂದು ನಾನು ಹಗಲೂ ರಾತ್ರಿ ಅವನನ್ನು ಕೇಳಿಕೊಳ್ಳುತ್ತೇನೆ.......... ”

ಆಕೆಯನ್ನು ಹಾಗೇ ಮುಂದೆ ಮಾತಾಡಗೊಡದೆ ಚೌಡಪ್ಪ, “ ಇದೇನು ಸುಂದರೀ ?........ಹೀಗೇಕೆ ಮಾತಾಡುವಿ ? ನೀನು ಹೀಗೆ ಚಿಂತೆ ಮಾಡಲಿಕ್ಕೆ ಹತ್ತಿದಿಯೆಂದರೆ ಬಹಳ ದಿನ ಬದುಕುವುದಿಲ್ಲ ” ಎಂದು ಅವಳಿಗೆ ಸಮಾಧಾನ ಹೇಳತೊಡಗಿದರು.

"ನಾನು ಯಾರನ್ನು ಕೇಳಲಿ? ನನಗೆ ಯಾರಿದ್ದಾರೆ?............ ಯಾರೇಕೆ ಬೇಕು? ಕುಲದವರೇಕೆ ಬೇಕು? ಯಾರೇ ಆಗಲಿ—ಒಬ್ಬ ಉತ್ತಮ ಗುಣದ ತರುಣ ನನ್ನ ಅಳಿಯನಾಗನೇ?........ದೇವರ....ಆ ಹನು ಮನ ಮನಸ್ಸಿಗೆ ಬಂದರೆ ಏನು ಏನಾಗುವುದಿಲ್ಲ" ಎಂದು ಸುಂದರಿ ಪುನಃ ಮೊದಲಿನಂತೆ ಮಾತಾಡುವಾಗ ಚೌಡಪ್ಪ ಅವಳನ್ನು ತಡೆದರು.

"ನೀನು ಹೀಗೆಲ್ಲ ಮಾತಾಡಲಿಕ್ಕೆ ಹತ್ತಿದರೆ ನಾನಿಲ್ಲಿ ಬರುವುದಿಲ್ಲ ಸುಂದರೀ. ಇದೇ ಕಡೆಯ ಸಲ ನಾನಿಲ್ಲಿಗೆ ಕಾಲಿಟ್ಟದ್ದೆಂದು ತಿಳಿ. ಸುಮ್ಮನೆ ಆಗದ ಹೋಗದ ಕೆಲಸಗಳಿಗೆ ಚಿಂತಿಸಬೇಡ." ಎಂದು ಬುದ್ಧಿ ಹೇಳಿದರು ಚೌಡಪ್ಪ.

"ಅಯ್ಯೋ! ನೀವೂ ನನ್ನನ್ನು ಬಿಟ್ಟರೆ ನನಗೆ ಯಾರು ಗತಿ?" ಎಂದು ಆಕೆ ಅವರ ಭುಜದ ಮೇಲೆ ಕೈಯಿಟ್ಟು ಖಿನ್ನಳಾದಳು. ಆದರೆ ಚೌಡಪ್ಪ ನವರಿಗೆ ಸಂತೋಷವಾಯಿತು.

ಏಳನೆಯ ಅಧ್ಯಾಯ

ಅದೇ ಆಗ ಸುಂದರಿ ತನ್ನ ಇಷ್ಟದೇವನಿಗೆ ಪ್ರಾರ್ಥನೆ ಸಲ್ಲಿಸಿ ಹೊರಗೆ ಬಂದಳು. ಮಧ್ಯಾಹ್ನದ ಸಮಯವದು. ಎಂದಿನಂತೆ ಇಂದಾದರೂ ಆಕೆ ಕಟ್ಟಳೆ ಪ್ರಕಾರ ತನ್ನ ಭಕ್ತಿಗೀತವನ್ನು ಹಾಡಿದ್ದಳು ಅದರಲ್ಲಿ ಸಿದ್ದಪ್ಪನ ನಾಶದ ಪಲ್ಲವಿಯೂ ಇತ್ತು. ಮೊದಲು ದಿವಸಕ್ಕೆ ಎರಡು ಸಲ ನಡೆಯುತ್ತಿದ್ದ ಪ್ರಾರ್ಥನೆ ಈಗ ನಾಲ್ಕು ಸಲಕ್ಕೆ ಇಳಿದಿದೆ. ಆದ್ದರಿಂದ ಮಧ್ಯಾಹ್ನವೂ ಹನುಮನಿಗೆ ನಮಸ್ಕರಿಸಿದ್ದಳು.

"ಭಿಕ್ಷೆಯೊ?" ಎಂದು ಸುಂದರಿ ಹೊರಗೆ ಗೇಟಿನ ಹತ್ತರ ನಿಂತಿರುವ ಭಿಕ್ಷುಕನಿಗೆ ಕೇಳಿದಳು. ಮನೆಗೆ ಬಂದ ಭಿಕ್ಷುಕರಿಗೆ ಆಕೆ ಎಂದೂ ಬರಿಗೈಯಿಂದ ಕಳುಹಿಸುವವಳಲ್ಲ. ಅಂಥವರ ಮೇಲೆ ಆಕೆಯ ಕರುಣೆ ಅಪಾರವಾದದ್ದು. ಅದರಲ್ಲೂ ಕೈಕಾಲು ಕಳೆದುಕೊಂಡ ದುರ್ಭಾಗಿಗಳನ್ನು ಕಂಡರೆ

ಅವಳು ಕಣ್ಣೀರು ಸುರಿಸದೆಯೂ ಇಲ್ಲ. ಅವರ ಮೇಲೆ ಅಷ್ಟು ಮರುಕ ಅವಳದು.

ಆತ ಅಲ್ಲಿಯೇ ನಿಂತುಕೊಂಡಿದ್ದ. ಅವನು ಅಲ್ಲಿ ನಿಂತುಕೊಂಡು ಎಷ್ಟು ಹೊತ್ತಾಗಿತ್ತೋ ತಿಳಿಯದು. ಒಂದೂವರೆ ಕಾಲಿನ ಮುದುಕನವನು. ತಲೆಗೂದಲು, ಗಡ್ಡ ಎಲ್ಲವೂ ಬೆಳೆದು ವಿಕ್ರಾಳ ಸ್ವರೂಪಿಯಂತೆ ಅವನ ರೂಪ ವಾಗಿತ್ತು. ಅವನ ಮುಖವಾದರೂ ಗ್ಲಾನಿಯಿಂದ ವಿಕಾರವಾಗಿತ್ತು. ಬೆಳೆದಿರುವ ಕೂದಲುಗಳು ಅಸ್ತವ್ಯಸ್ತವಾಗಿ ಅವನ ಮುಖದ ಮೇಲೆ ಬಿದ್ದಿರುವುದರಿಂದ ನೋಡುವವರಿಗೆ ಅವನ ಕುರುಡುತನ ಕಾಣುತ್ತಿರಲಿಲ್ಲ. ಚೆನ್ನಾಗಿ ಪರೀಕ್ಷೆ ಮಾಡಿ ನೋಡಿದರೆ ಅವನ ಒಂದು ಕಣ್ಣಿನ ಬೊಂಬೆಯೇ ಹಾರಿ ಹೋದದ್ದನ್ನು ಕಾಣಬಹುದಾಗಿತ್ತು. ಮೊಣಕಾಲ ಮೇಲಿಂದ ಅವನ ಕಾಲು ತುಂಡಾಗಿ ಹೋಗಿತ್ತು. ಅದಕ್ಕಾಗಿ ಆತ ಉದ್ದದ ಬಡಿಗೆಯನ್ನೇ ಕಾಲಿನಂತೆ ಉಪಯೋಗಿಸಿಕೊಂಡು ನಡೆಯುತ್ತಿದ್ದ. ಅವನ ಅರಿವೆಗಳೆಲ್ಲ ಹೊಲಸು ನಾರುತ್ತಿದ್ದವು. ಅವನು ಆ ಮನೆಯ ಬಾಗಿಲಿಗೆ ಬಂದೊಡನೆ ಅವನ ಒಂದೇ ಕಣ್ಣಲ್ಲಿ ನೀರು ಒಸರಿತ್ತು. ಅಂತೇ ಆತ ಅಲ್ಲಿಯೇ ನಿಂತು ಕೊಂಡಿದ್ದ. ದುಃಖದಿಂದ ಅವನ ದೇಹವಿಡೀ ನಡುಗುತ್ತಲೂ ಇತ್ತು. ಆದರೂ ಆತ ಬಲಾತ್ಕಾರದಿಂದ ತನ್ನ ದೇಹವನ್ನು ಅಲ್ಲಿಯವರೆಗೆ ಎಳೆದು ತಂದಿದ್ದನು. ಅಷ್ಟೇ ಅಲ್ಲ, ಮತ್ತೂ ಅದನ್ನು ಮುಂದೂಡಲು ಪ್ರಯತ್ನಿಸುತ್ತಿದ್ದ. ಆದರೆ ಅವನ ಆ ಅವಯುವಗಳು ಕೇಳುತ್ತಿರಲಿಲ್ಲ. ಅವು ಅಲ್ಲಿಯೇ ನಿಂತು ಬಿಟ್ಟವು. ಆತನನ್ನು ಅಲ್ಲಿಯೇ ಕುಸಿದು ಬೀಳುವಂತೆಯೂ ಮಾಡಿದವು. ಅವನಿಗೆ ಅಳು ಉಕ್ಕಿ ಬರತೊಡಗಿತು. ಅದನ್ನು ಅದುಮಿ ಹಿಡಿದುಕೊಂಡು ಅವಳು ಭಿಕ್ಷೆ ತರುವ ತನಕ ಅಲ್ಲಿಯೇ ಕುಳಿತುಕೊಂಡ. ಅವಳು ಹೊರಗೆ ಬರುವ ಹಾದಿಯನ್ನೇ ಕಾಯುತ್ತ ಕುಳಿತ.

ಮಧ್ಯಾಹ್ನದ ಊಟದ ಹೊತ್ತಿಗೆ ಬಂದ ಭಿಕ್ಷುಕರಿಗೆ ತನ್ನ ಪಾಲಿನ ಅರ್ಧ ಊಟವನ್ನೇ ನೀಡುವುದು ಸುಂದರಿಯ ರೂಢಿ. ಇಂದಾದರೂ ಆಕೆ ಹಾಗೆಯೇ ಮಾಡಿದಳು.

"ಇದನ್ನು ಯಾವುದರಲ್ಲಿ ಹಾಕಲಿ ?" ಎಂದು ಭಿಕ್ಷೆಯನ್ನು ಕೈಯಲ್ಲಿ ಹಿಡಿದುಕೊಂಡು ಅವನಿಗೆ ಕೇಳಿದಳು.

ಆತ ಉತ್ತರವನ್ನೂ ಕೊಡಲಿಲ್ಲ. ಭಿಕ್ಷೆ ಪಡೆದುಕೊಳ್ಳಲು ತವಕಿಸಲೂ ಇಲ್ಲ. ಕೂಡಲೆ ಸುಂದರಿಗೆ ಅವನ ಸ್ವಭಾವದ ಬಗ್ಗೆ ಏನೋ ಅನಿಸಿತು. "ಇವನು ಯಾಕೆ ಹೀಗೆ ಸುಮ್ಮನಿದ್ದಾನೆ? ಉಳಿದವರು ಯಾರಾದರೂ ಆಗುತ್ತಿದ್ದರೆ ಇಷ್ಟರಲ್ಲಿ ಕುಣಿದಾಡುತ್ತಿದ್ದರು! ಇಂಥ ವಿಚಿತ್ರ ನಡತೆಯ ಭಿಕ್ಷುಕನನ್ನು ಇದೂವರೆಗೂ ನಾನು ಕಂಡಿಲ್ಲ" ಎಂದು ಆಕೆ ಮನಸ್ಸಿನಲ್ಲೇ ಆಶ್ಚರ್ಯಪಡುತ್ತ ಅವನ ಮುಖದತ್ತ ನೋಡಿದಳು. ಆದರೆ ಅವನ ಮುಖ ಅವಳಿಗೆ ಮಾನವ ಜಾತಿಯಲ್ಲಿ ಕಂಡುಬರುವ ಸರ್ವ ಪಾಪದ ಪುಂಜದಂತೆ ಕಂಡುಬಂದಿತು. "ಈ ಜೀವ ಎಷ್ಟೆಲ್ಲ ಪಾಪ ಮಾಡಿರಬಹುದು!" ಎಂದಾಕೆ ಅವನನ್ನು ದಿಟ್ಟಿಸಿ ನೋಡುತ್ತಿದ್ದಳು. ಆಗ ಅವನ ಒಂದೇ ಕಣ್ಣಲ್ಲಿ ಧಾರಾಕಾರವಾಗಿ ನೀರು ಹರಿಯಹತ್ತಿತು. ಅದನ್ನು ನೋಡಿದ ಅವಳಿಗೆ ಅವನೆದುರು ಬಹಳ ಹೊತ್ತು ನಿಲ್ಲುವುದಕ್ಕಾಗಲಿಲ್ಲ.

"ತಕೋ! ತಕೋ!" ಎಂದು ಅವಸರ ಮಾಡಿದಳು.

ಅವನು ಮಾತ್ರ ತಲೆ ಕೆಳಗೆ ಹಾಕಿ ಸುಮ್ಮನೆ ಕೂತಿದ್ದ. ಅವಳು ನಾಲ್ಕಾರು ಸಲ ಹಾಗೆ ಹೇಳಿದೊಡನೆ ತಲೆ ಮೇಲೆ ಮಾಡಿ ಅವಳ ಮುಖವನ್ನು ನೋಡಿದ. ಆಗ ಸುಂದರಿಯ ಕೈಗಳು ನಡುಗುತ್ತಿದ್ದವು.

"ವೈರಿಗೂ ಇಂಥ ಕೀಳು ಜೀವನ ದೊರೆಯಬಾರದು!" ಎಂದು ಅವಳ ಮನಸ್ಸು ಮರುಗಿತು.

ಅಷ್ಟರಲ್ಲಿ ಆ ಭಿಕ್ಷುಕ "ನಾನು ಯಾರು ಗೊತ್ತೇ?" ಎಂದು ಪ್ರಯತ್ನ ಪೂರ್ವಕವಾಗಿ ಬಾಯಿ ತೆರೆದು ಅವಳನ್ನು ಕೇಳಿದ.

ಅವನಾರೆಂದು ಸುಂದರಿಗೆ ಹೊಳೆಯಲಿಲ್ಲ. ಆ ಹೊತ್ತಿನಲ್ಲಿ ಅವಳಿಗೆ ಅವನ ನೆನಪು ಬರುವ ಹಾಗೂ ಇರಲಿಲ್ಲ.

"ನೆನಪು ಮಾಡು ತಾಯೀ! ....ವರುಷ....ವರುಷಗಳ ಹಿಂದೆ, ನಾನು ಯಾರಾಗಿದ್ದೆ?...............ಯಾರಾಗಿ ನಿನ್ನ ಮನೆಗೆ ಬಂದಿದ್ದೆ?" ಎಂದು ದೀನ ಸ್ವರದಲ್ಲಿ ಹೇಳಿ ಆತ ಅಲ್ಲಿಯೇ ನೆಲಕ್ಕೆ ಬಿದ್ದ. ಆದರೆ ಅವನ ಬಾಯಿಗೆ ಮಾತ್ರ ಈಗ ಅಪಾರವಾದ ಮಾತಿನ ಶಕ್ತಿ ಬಂದಿತ್ತು. ಅದು ಒಂದೇ ಸವನೆ ಕ್ಷಮೆ ಕೇಳುತ್ತಲಿತ್ತು.

ಸುಂದರಿಯ ಕಣ್ಣುಗಳೂ ನೀರು ಸುರಿಸುವುದರಲ್ಲಿ ಇದ್ದವು. ಅವ ನನ್ನು ನೋಡುತ್ತ ಅಲ್ಲಿ ಅವಳಿಗೆ ನಿಲ್ಲುವುದಾಗಲಿಲ್ಲ. ಕೈಯಲ್ಲಿರುವ ಭಿಕ್ಷೆ ಯನ್ನು ಅವನಿಗೆ ನೀಡಬೇಕೆಂದರೂ ಅವಳ ಕೈಗಳು ಅದನ್ನು ಬಲವಾಗಿ ಹಿಡಿದುಕೊಂಡಿದ್ದವು.

"ತಕೋ ಭಿಕ್ಷೆ........" ಎಂದು ಆಕೆ ಅದನ್ನು ಹಾಕಹೋದಳು.

"ಅಯ್ಯೋ ಬೇಡ ತಾಯೀ ಬೇಡ! ನಿನ್ನ ಋಣ ತೀರಿಸುವುದು ಯಾವ ಜನ್ಮದಲ್ಲಿ? ಈಗ ಇರುವ ಪಾಪವೇ ದೊಡ್ಡದು............ ಇನ್ನೂ ನನ್ನನ್ನು ಪಾಪದ ಬುತ್ತಿ ಹೊರುವಂತೆ ಮಾಡಬೇಡ........ನನ್ನ ಜೀವ............ ಹೋಗುವಂಥ........ಯಾವುದಾದರೂ ಪುಡಿಯನ್ನು ಹಾಕಿ ಕೊಡು, ನಿನಗೆ ಪುಣ್ಯ ಬರುತ್ತದೆ ತಾಯೀ ಪುಣ್ಯ ಬರುತ್ತದೆ!" ಎಂದು ಅವನು ನುಡಿಯು ವಾಗ ಸುಂದರಿಯ ಕೈಯೊಳಗಿನ ಭಿಕ್ಷೆ—ಪಾತ್ರೆ ಸಮೇತವಾಗಿ ಫಟಾಲನೆ ಕೆಳಗೆ ಉರುಳಿತು!

"ನೀನಾರು? ನೀನಾರು?" ಎಂದು ಆಕೆ ಹಿಂದೆಮುಂದೆ ಸರಿಯು ತ್ತಿದ್ದಳು. ಅವಳ ಮುಖದಲ್ಲಿ ಭಯಂಕರವಾದ ಬದಲಾವಣೆಯಾಯಿತು. ಬೆದ ರಿಕೆಯಿಂದ ಅವಳ ಮುಖ ಮುದುಡತೊಡಗಿತು.

"ಸರಿ ತಾಯೀ ಸರಿ! ನೀನು ನನ್ನಂಥ ಪಾಪಾತ್ಮನಿಗೆ ಹೆದರದೆ ಇನ್ನಾರಿಗೆ ಹೆದರಬೇಕು? ನೀನು ಕುಲೀನಳು........ನಾನು ನಿನ್ನನ್ನು........ ಅಲ್ಲ ನಿನ್ನಂಥ ಅನೇಕ ಕುಲೀನರನ್ನು ಹಾಳು ಮಾಡಿದ ಪಾಪಿ........ಇಗೋ ಇದೇ ನನಗೆ ಪ್ರಾಯಶ್ಚಿತ್ತ!" ಎಂದು ತನ್ನ ಕಣ್ಣು-ಕಾಲುಗಳನ್ನು ತೋರಿಸ ತೊಡಗಿದ. ಸುಂದರಿ ಅಷ್ಟರಲ್ಲಿ ಅವನಿಗಿಂತ ಹತ್ತಾರು ಅಡಿ ದೂರ ಸರಿ ದಾಗಿತ್ತು. ಆದರೂ ಅವನು ಆಡುವ ಮಾತೆಲ್ಲ ಅವಳಿಗೆ ಸ್ಪಷ್ಟವಾಗಿ ಕೇಳು ತ್ತಲೂ ಇತ್ತು.

"ಅಂದು ರಾತ್ರಿ........ವರುಷ ವರುಷಗಳ ಹಿಂದೆ........ನಾನು ನಾನೇ ....ಈ ಸಿದ್ದಪ್ಪ! ....ಅಯ್ಯೋ ಹೇಳಲಾರೆ! ....ಅದಕ್ಕಾಗಿ ನಿನ್ನೊಡನೆ ಕ್ಷಮೆ ಕೇಳಲು ಬಂದಿದ್ದೇನೆ ತಾಯೀ........ ನೀನೊಬ್ಬಳಾದರೂ ಅದನ್ನು ಅನುಗ್ರಹಿಸಬೇಕು........ಎಂದರೆ ನನ್ನ ಪಾಪ ಎಷ್ಟೋ ಕಡಿಮೆಯಾ

ದೀತೆಂದು ಬಂದೆ…… ….ತಾಯೀ……..ಇಲ್ಲಿಯ ವರೆಗೆ. ಇನ್ನು ನಾನು ಸತ್ತರೂ ಚಿಂತೆ ಇಲ್ಲ. ಇನ್ನು ನಾನು ಸಾಯುತ್ತೇನೆ—ಸಾವು ಬರಲಿ ನನಗೆ" ಎಂದು ಆತ ಅಲ್ಲಿಂದ ಥಟ್ಟನೆ ಎದ್ದು ಕಟ್ಟಿಗೆಯ ಆಧಾರ ಪಡೆದು ಕೊಂಡಾದರೂ ರಭಸದಿಂದಲೇ ಹೊರಟುಬಿಟ್ಟ. ಸುಂದರಿ ಹಾಕಿದ ಭಿಕ್ಷೆ ಯನ್ನು ಮುಟ್ಟಲಿಲ್ಲ ಅವನು. ಅವನು ವಿಶಾಲವಾದ ಜಗತ್ತಿನಲ್ಲಿ ನಡೆದು ನಡೆದು ಮಾಯವಾಗುವ ತನಕವೂ ಸುಂದರಿ ಅವನನ್ನು ನೋಡುತ್ತಿದ್ದಳು. ಅವನ ಪ್ರತಿಯೊಂದು ಮಾತೂ ಸುಂದರಿಯ ಹೃದಯವನ್ನು ಮೊಳೆಯಂತೆ ಚುಚ್ಚತೊಡಗಿದ್ದವು. ಅವಳು ಹುಚ್ಚಳ ಹಾಗೆ ನಿಂತುಕೊಂಡೇ ಇದ್ದಳು. ಅಷ್ಟರಲ್ಲಿ ಯಾವುದೋ ಒಂದು ಭಿಕ್ಷುಕರ ಬಳ್ಳಿ ಬಂದು ಅಲ್ಲಿ ಬಿದ್ದಿರುವ ಭಿಕ್ಷೆಯನ್ನು ಪಾತ್ರೆ ಸಮೇತವಾಗಿ ಸಾಗಿಸಿಕೊಂಡು ಹೋಯಿತು. ಅದ ನ್ನೆಲ್ಲ ನೋಡಿ ಸುಂದರಿ :ಖಿನ್ನಳಾಗಿ ಕಣ್ಣೀರು ಸುರಿಸಿದಳು. "ಅಯ್ಯೋ ಹನುಮಾ !" ಎಂದು ಅವಳು ಫಟಾಲನೆ ಮನೆಯ ಬಾಗಿಲು ಮುಚ್ಚಿ ಒಳಗೆ ಓಡಿ ಬಂದಳು. ಹನುಮನ ಫೋಟೋದ ಕೆಳಗೆ ನಿಂತುಕೊಂಡು ಭಕ್ತಿಯ ಕಣ್ಣೀರು ಸುರಿಸತೊಡಗಿದಳು.

ಅಲ್ಲಿ ನಿಂತಾಗ ಅವಳ ಕಲ್ಪನಾ ರಾಜ್ಯದ ಮೇಲೆ ಹಿಂದೆ ಚೌಡಪ್ಪ ಹೇಳಿದ ಸಿದ್ದಪ್ಪನ ಕಥೆಯೆಲ್ಲ ಪದರುಪದರಾಗಿ ಬಂದು ಕ್ರೂರವಾಗಿ ಕಾಣ ಹತ್ತಿತು. ಅವನ ಕಾಲು ಮುರಿಸಿದೆನೆಂಬ ಚೌಡಪ್ಪನವರ ಬಿಂಕದ ನುಡಿ ಅವಳ ನೆನಪಿಗೆ ಬಂತು. ಕಣ್ಣಿಗೆ ಎಸಿಡ್ ಹಾಕಿಸಿದೆನೆಂದು ಅವರು ತಮ್ಮ ಪೌರುಷ ಕೊಚ್ಚಿಕೊಂಡದ್ದೂ ಅವಳಿಗೆ ನೆನಪಾಗದೆ ಬಿಡಲಿಲ್ಲ. ಮನುಷ್ಯ-ಮನುಷ್ಯನೊಡನೆ ಇಂಥ ಪಶುವೃತ್ತಿಯಿಂದ ನಡೆದುಕೊಳ್ಳುತ್ತಾನಲ್ಲ! ಅಯ್ಯೋ ಮಾನವನ ಬಾಳೇ. ನರನಿದ್ದವನು ಕೆಣಕಿದಾಗ ಸುರನಾಗುತ್ತಾನೆಯೋ ? ಮನುಷ್ಯತ್ವದಲ್ಲೇ ರಾಕ್ಷಸತ್ವ ಅಡಗಿರುತ್ತದೇ ಹೊರತು ರಾಕ್ಷಸರೆಂಬುವ ಕುಲ ವಿಲ್ಲ ಈ ಜಗತ್ತಿನಲ್ಲಿ. ಹೌದು, ಅಂದು ಅವನಿಗೆ ಹಾಗೆ ಪೀಡಿಸಿದರು, ಮುಂದೆ ನನ್ನನ್ನು ಹೇಗೆ ಕಷ್ಟಕ್ಕೀಡು ಮಾಡುತ್ತಾರೋ ಏನೋ! ಎಂದು ಮೊದಲಾಗಿ ಆಕೆ ಕೆಲಸಮಯ ಚಿಂತಿಸಿದಳೇನೋ ಹೌದು. ಆದರೆ ಆ ಕ್ಷಣ ದಲ್ಲೇ ಅವಳಿಗೆ ಹನುಮನ ಮೇಲೆ ಒಂದೇ ಹೊತ್ತಿಗೆ ಭಯ, ಭಕ್ತಿ, ಸಿಟ್ಟು ಗಳೆಲ್ಲವೂ ಬಂದವು.

"ನಾನು ಕೇಳಿಕೊಂಡಂತೆ ಮಾಡಿದೆಯಲ್ಲಾ ಹನುಮಾ! ವೈರಿಗೂ ಅಂಥ ಪಾಪಾವಸ್ಥೆ ಬರಬಾರದು ಹನುಮಾ. ಅಯ್ಯೋ—ನಿನ್ನ ಕಟಾಕ್ಷೆಯಿಂದಲೇ ಅವನಿಗೆ ಆ ಗತಿ ಬಂತೆಂದು ತಿಳಿಯಲೇ? ನನ್ನ ಪ್ರಾರ್ಥನೆಯನ್ನು ನೀನು ಅಕ್ಷರಶಃ ಪಾಲಿಸಿದೆಯಲ್ಲ ಹನುಮಾ! ನೀನು ನಿಜಕ್ಕೂ ದೇವಾದಿದೇವನಯ್ಯಾ. ಕೆಟ್ಟ ಕೃತ್ಯಗಳನ್ನು ನೆರವೇರಿಸುವುದು ನಿನಗೂ ಇಷ್ಟವೇ ಹನುಮಾ? ಮನುಷ್ಯನನ್ನು ಹಾಳು ಮಾಡುವ ಕೆಲಸ ಎಷ್ಟು ಬೇಗ ಮುಗಿಸುತ್ತೀರಲ್ಲಾ—ನೀವು ದೇವರಾದವರು!........ ಒಳ್ಳೆಯದನ್ನು ದಯಪಾಲಿಸಲು ನಿಮಗೆ ಕೈ ಮುಂದೆ ಬೇಗನೆ ಬರುವುದಿಲ್ಲವಲ್ಲ! ಇದು ಯಾವ ನ್ಯಾಯ?.................. ನಾನು ಎಂದಿನಿಂದ ಬೇಡಿಕೊಂಡು ಬಂದ ಮಾತನ್ನು, ನೀನಿನ್ನೂ ಅನುಗ್ರಹಿಸಲಿಲ್ಲವಲ್ಲ ಹನುಮಾ?........ ಇದು ನಿನ್ನ ನ್ಯಾಯನೀತಿಯೋ? ಮೊನ್ನೆ ಮೊನ್ನೆ........ಏಳೋ ಎಂಟೋ ವರುಷಗಳ ಹಿಂದೆಯೆಂದು ತೋರುತ್ತದೆ—ನಾನು ನಿನಗೆ 'ಆ ನೀಚನನ್ನು ನಾಶಮಾಡು' ಎಂದು ಕೇಳಿಕೊಂಡೆ. ಅಂದಿನಿಂದ ಅದನ್ನು ಪ್ರತಿದಿನವೂ ಬೇಡುತ್ತ ಬಂದಿದ್ದೇನೆ ನಿಜ. ಆದರೆ ಅದಕ್ಕಿಂತ ಮೊದಲು ಎಷ್ಟೋ ವರುಷಗಳಿಂದ ನಾನು ಕೇಳಿಕೊಂಡು ಬಂದ ವರವನ್ನು ನೀನು ಇನ್ನೂ ದಯಪಾಲಿಸಲಿಲ್ಲವಲ್ಲಾ! ....ನನ್ನ ಅಪರಾಧವನ್ನು ನೀನು ಕ್ಷಮಿಸಿದ್ದಿಯೋ ಇಲ್ಲವೋ ಗೊತ್ತಿಲ್ಲ! ದಯವಿಟ್ಟು ಅದನ್ನು ಕ್ಷಮಿಸು ಹನುಮಾ. ನನ್ನನ್ನು.......ಅಲ್ಲ ನನ್ನ ಮುದ್ದು ಕಂದನನ್ನು ಈ ಹಳ್ಳದಿಂದ ಎತ್ತಿ ಹಾದಿಗೆ ಹಚ್ಚು ದೇವಾ....ನನ್ನ ಪ್ರಾರ್ಥನೆ, ನನ್ನ ಬೇಡಿಕೆ, ನನ್ನ ಬಾಳಿನ ಸರ್ವಸ್ವವೂ ಅದೇ ಒಂದು ನೋಡು ಹನುಮಾ" ಎಂದು ಆಕೆ ಕಣ್ಣೀರು ಸುರಿಸುತ್ತ ಅವನೊಡನೆ ಬೇಡಿಕೊಳ್ಳುತ್ತಿದ್ದಳು. ಎಷ್ಟೋ ಹೊತ್ತಿನವರೆಗೆ ಅಲ್ಲಿ ಹಾಗೇ ಕುಳಿತಿದ್ದಳು. ಒಳಗೆ ಮಾಡಿಟ್ಟ ಅಡಿಗೆ ಆರಿ ತಂಗಳಾಗುತ್ತ ಬಂದಿತ್ತು. ಆದರೂ ಅಲ್ಲಿಂದ ಏಳಲಿಲ್ಲ.

ಚೌಡಪ್ಪನವರೇ ಅಲ್ಲಿಗೆ ಬಂದು ಅವಳನ್ನು ಎಬ್ಬಿಸಬೇಕಾಯಿತು. ಅಷ್ಟು ಹೊತ್ತಿಗೆ ಬಿಸಿಲೂ ಅಡ್ಡವಾಗಿತ್ತು. "ಇದೇನು ಸುಂದರೀ ಭಕ್ತಿ ನಿನ್ನದು? ಛೀ ಛೀ! ಜನ ಹೇಳುವುದಕ್ಕೂ ನೀನು ಮಾಡುವುದಕ್ಕೂ ಸರಿ ಹೊಂದಿದೆಯಲ್ಲ" ಎಂದು ಚೌಡಪ್ಪ ಅವಳನ್ನು ನಿಂದಿಸಿಯೇ ಮಾತಾಡಿದರು. ಅವರು ಬಂದು ಹಾಗೆಲ್ಲ ಮಾತಾಡುವುದು ಅವಳ ಕಿವಿಗೆ ನಾಟಿತೋ ಇಲ್ಲವೋ

ಗೊತ್ತಿಲ್ಲ. ಆದರೆ ಅವರು ಬಂದದ್ದರಿಂದ ಆಕೆ ಮಧ್ಯಾಹ್ನದ ಊಟವನ್ನು ಸಂಜೆಯ ನಾಲ್ಕುವರೆಗೆ ಆದರೂ ಮಾಡಿದಳು. ಅವಳು ಊಟಕ್ಕೆಂದು ಒಳಗೆ ಹೋದರೂ ಚೌಡಪ್ಪ ತಮ್ಮ ಉಪನ್ಯಾಸಕ್ಕೆ ಪೂರ್ಣವಿರಾಮ ಕೊಟ್ಟಿರಲಿಲ್ಲ. "ಹಿರಿಯರು ಮಾಡಿಟ್ಟ ನುಡಿ—ನಾಣ್ನುಡಿ ಸುಳ್ಳಲ್ಲ! ಹೌದು ಹೌದು—ಮುಪ್ಪಿನ ಕಾಲಕ್ಕಾದರೂ ಜೋಗತಿಯ ವೇಷ ಬೇಡವೇ?" ಎಂದು ತಮ್ಮಷ್ಟಕ್ಕೆ ಪ್ರಶ್ನೆ ಕೇಳಿಕೊಂಡರು. ಅವಳನ್ನು ಕೆಣಕಬೇಕೆಂದೇ ಅವರು ಹಾಗೆ ನುಡಿದಿರಬೇಕು. ಯಾಕೆಂದರೆ ಹಲವಾರು ದಿನಗಳಿಂದ ಆಕೆ ಸಾಧು ಹಸುವಿನಂತೆ ವರ್ತಿಸತೊಡಗಿದ್ದಳು. ಅವಳ ನಡೆನುಡಿಗಳಲ್ಲೂ ಆ ಬಗೆಯ ಸಮಾಧಾನ ಕಂಡುಬರುತ್ತಿತ್ತು. ಕಾರಣ, ಅವಳ ಮೊದಲಿನ ಮನೋವಿಕಾರ ಮಾಯವಾಗಿರಬಹುದೆಂದು ಚೌಡಪ್ಪ ಬಲವಾಗಿ ನಂಬಿದ್ದರು. ಆದರೂ ಅವಳು ಆಡುತ್ತಿದ್ದ ಒಂದೇ ಒಂದು ಮಾತು, "ನನ್ನ ಮುದ್ದು ಕಂದನಿಗೊಬ್ಬ ಯೋಗ್ಯ ವರ ಸಿಗಬೇಕು"—ಎಂಬುದು ಮಾತ್ರ ಅವರ ಕಿವಿಗೆ ಬಿದ್ದೊಡನೆ ಅಸಮಾಧಾನವಾಗುತ್ತಿತ್ತು. "ಈ ಒಂದು ರೋಗ ಇವಳಿಗೆ ಇನ್ನೂ ಬಿಡಲಿಲ್ಲ" ಎಂದು ಅವರು ಮನಸ್ಸಿನಲ್ಲೇ ಅರಿದುಕೊಳ್ಳುತ್ತಿದ್ದರು.

ಹಿಂದೆ ಅವರು ಸಿದ್ದಪ್ಪನ ವಿಷಯ ಅವಳೊಡನೆ ಹೇಳುವಾಗಲಾದರೂ ಅಷ್ಟೇ, ತಮ್ಮ ಅಭಿಮಾನವನ್ನು ಕಾಯ್ದುಕೊಂಡೇ ಮಾತಾಡಿದ್ದರು. ಅವನನ್ನು ಸುಂದರಿಯ ಮನೆಗೆ ರಾತ್ರಿಯಲ್ಲಿ ತಾನು ಕಳುಹಿಸಿದೆನೆಂದು ಅವರು ಅವಳಿಗೆ ತಿಳಿಸಲಿಲ್ಲ. ಅವಳಾದರೂ ಆತ ರಾತ್ರಿ ಬಂದು ಅತ್ಯಾಚಾರ ಮಾಡಿ ಹೋದನೆಂದು ಪೂರ್ವಗ್ರಹಪೀಡಿತಳಾಗಿಯೋ ಏನೋ ಹೇಳಲಿಲ್ಲ. ಅವನ ವಿಷಯ ಚೌಡಪ್ಪ ಅವಳೊಡನೆ ಹೇಳಿದುದರಲ್ಲಿ ಸುಳ್ಳಿನ ಅಂಶ ಹೆಚ್ಚೇನು ಇದ್ದಿಲ್ಲ ಸರಿ. ಆದರೆ ಮುಖ್ಯವಾಗಿ ಅವನಿಂದ ತಾವು ಮಾಡಿಸಿದ ಅಪರಾಧವನ್ನು ಮಾತ್ರ ಅವರು ಸುಂದರಿಗೆ ವಿದಿತಪಡಿಸಲಿಲ್ಲ. "ನೀವು ಸುಂದರಿಯ ಮನೆಗೆ ಹೋಗುವುದನ್ನು ಬಿಡಬೇಕು. ನಾನು ನಿಮಗೆ ಅವಳಿಗಿಂತ ನಾಲ್ಕು ಪಟ್ಟು ಚೆಲುವಿನ ರಂಭೆಯನ್ನು ತಂದುಕೊಡುತ್ತೇನೆ. ಅವಳು ಎಷ್ಟೆಂದರೂ ಹಳೆಯ ಎಮ್ಮೆ. ನಿಮ್ಮಂಥವರು ಯಾವಾಗಲೂ ಅಂಥ ಮುದಿಗೊಡ್ಡಿನ ಹಿಂದೆ ಇರುವುದು ಸರಿಯಲ್ಲ. ನಿಮ್ಮಲ್ಲಿ ಅದಕ್ಕೆ ತಕ್ಕ ಸಿರಿವಂತಿಕೆ ಇರುವಾಗ ನೀವೇಕೆ ಅದರ ಸದುಪಯೋಗ ಮಾಡಿಕೊಳ್ಳಬಾರದು?" ಎಂದು ಸಿದ್ದಪ್ಪ

ತನ್ನನ್ನು ಸುಂದರಿಯಿಂದ ದೂರವಿರಲು ಕಿವಿಯೂದುತ್ತಿದ್ದನೆಂದು ಅವಳೊಡನೆ ಚೌಡಪ್ಪ ತೊಡೆ ಬಡಿದುಕೊಂಡು ಹೇಳಿದ್ದರು. ಆ ಹೊತ್ತಿನಲ್ಲಾದರೂ ತಾವು ಅವನೊಡನೆ ಕೂಡಿಕೊಂಡು ಮದ್ರಾಸಿಗೆ ಹೋದದ್ದು. ಅಲ್ಲಿ ಪಟ್ಟ ಕಷ್ಟವಾವುದನ್ನೂ ಅವರು ಸುಂದರಿಗೆ ಹೇಳಲಿಲ್ಲ. ಆತನನ್ನು ನೌಕರಿಯಿಂದ ರದ್ದು ಮಾಡಿದುದರ ಕಾರಣವೆಂದರೆ ಅವನ ಅಪ್ರಾಮಾಣಿಕತನದ ವರ್ತನೆ ಯೆಂದೇ ಚೌಡಪ್ಪ ಹೇಳುತ್ತಿದ್ದರು. ಅವನು ಪಕ್ಕಾ ಜೂಜುಗಾರನಿದ್ದನೆಂದು ತನಗೆ ಮೊದಲು ತಿಳಿದಿದ್ದರೆ ಅವನೊಡನೆ ಅಷ್ಟು ಸಲುಗೆಯಿಂದ ವರ್ತಿಸುತ್ತಿರ ಲಿಲ್ಲವೆಂದೂ ಅವರು ಸುಂದರಿಯೊಡನೆ ಹೇಳಿಕೊಂಡಿದ್ದರು.

ಇಂದಿನ ಸಿದ್ದಪ್ಪನ ಪರಿಸ್ಥಿತಿಯನ್ನು ಕಂಡು ಚೌಡಪ್ಪನವರು ಅಂದು ಹೇಳಿದ್ದೆಲ್ಲ ನಿಜವೆಂದು ಸುಂದರಿಗೆ ಖಾತ್ರಿಯಾಯಿತು. ಅಂದು ಅವರು ತಾನು ಅವನಿಗೆ ಹಾಗೆ ಮಾಡಿಸಿದೆ—ಹೀಗೆ ಹೊಡೆಸಿದೆ ಎಂದು ಹೇಳಿದ್ದೆಲ್ಲ ಸುಳ್ಳು ಇರಬಹುದೆಂದು ಆಕೆ ಬಗೆದಿದ್ದಳು. ಈಗ ಮಾತ್ರ ಅವಳಿಗೆ ಚೌಡಪ್ಪ ನವರ ಪೂರ್ಣ ಮೂರ್ತಿಸ್ವರೂಪ ಗೊತ್ತಾಯಿತು. ಇಂಥವರೊಡನೆ ತಾನು ಇಲ್ಲಿಯವರೆಗೆ ಹೇಗೆ ಬಾಳುವೆ ಮಾಡಿಕೊಂಡು ಬಂದೆಯೆಂದು ಅವಳೇ ಆಶ್ಚರ್ಯಪಟ್ಟಳು. ಸಿದ್ದಪ್ಪ ಇಂದು ಬಂದು ಹೋದ ಸುದ್ದಿಯನ್ನು ಅವರೊ ಡನೆ ಹೇಳಲೇ ಎಂದು ಯೋಚಿಸಿದಳು. ಆದರೆ ಅವಳ ಮನಸ್ಸು ಅದಕ್ಕೆ ಒಪ್ಪಲಿಲ್ಲ. ಕಾರಣ ಆಕೆಯೂ ಮನಸ್ಸು ಗಟ್ಟಿ ಮಾಡಿಕೊಳ್ಳಬೇಕಾಯಿತು. ಊಟಕ್ಕೆ ಕೂತಾಗ ಅವನ ಪರಿಸ್ಥಿತಿಯನ್ನು ನೆನೆದು ಅವಳಿಗೆ ಅನ್ನದ ರುಚಿಯೇ ಹತ್ತಲಿಲ್ಲ. ಶಾಸ್ತ್ರಕ್ಕೆ ತಕ್ಕ ಊಟ ಮುಗಿಸಿ ಹೊರಗೆ ಬಂದಳು.

"ಎಷ್ಟು ಬೇಗ ಬಂದಿಯಲ್ಲ!" ಎಂದು ಚೌಡಪ್ಪ ಆಶ್ಚರ್ಯದಿಂದ ಕೇಳಿದರು. ಸುಂದರಿ ಅವರ ಮಾತಿಗೆ ಉತ್ತರಿಸಲಿಲ್ಲ.

"ನೀನು ಹೀಗೆಲ್ಲ ಹೊತ್ತಿಗೆ ಸರಿಯಾಗಿ ಅನ್ನ ತಿನ್ನದಿದ್ದರೆ ನಾನು ನಿನ ಗಾಗಿ ಇನ್ನೊಂದು ದವಾಖಾನೆ ಓಪನ್ (Open) ಮಾಡಿಸಬೇಕಾಗುತ್ತದೆ" ಎಂದು ಚೌಡಪ್ಪ ನಸುನಗುತ್ತ ನುಡಿದರು.

"ಹೇಗಾದರೂ ಮುನ್ಸಿಪಾಲ್ಟಿ ನಿಮ್ಮ ಸ್ವಾಧೀನವಲ್ಲಿಯೇ ಇದೆಯಲ್ಲ!" ಎಂದು ಸುಂದರಿಯೂ ನಗುತ್ತ ಹೇಳುವಾಗ ಚೌಡಪ್ಪನವರ ಕೆನ್ನೆಗೆ ನಾಲ್ಕೇಟು

ಕೊಟ್ಟಂತೆ ಭಾಸವಾಯಿತು ಕೂಡಲೇ ವಿಷಯ ಬದಲಾಯಿಸಿದರು. ಯಾಕಂದರೆ ಈಗೀಗ ಅವರ ಮೇಲೆ ಊರಲ್ಲಿಯ ಪತ್ರಿಕೆಗಳು ಟೀಕಾಸ್ತ್ರಗಳನ್ನು ಎಸೆಯುವ ಕೆಲಸ ನಡೆಸಿದ್ದವು. ಅಲ್ಲದೆ ಅವರ ಪಕ್ಷದ ಬಹುಮತವೂ ಕಡಿಮೆಯಾಗುತ್ತ ಬಂದಿತ್ತು. ಹೀಗಾಗಿ ಅವರು ಸಾಕಷ್ಟು ಬಳಲಿ—ಮುಖಭಂಗ ಮಾಡಿಸಿಕೊಂಡಿದ್ದರು. ಇಲ್ಲಿ ಸುಂದರಿಯೂ ತನ್ನ ಹೆಗ್ಗಳಿಕೆಗೇ ನೀರು ತಂದದ್ದು ನೋಡಿ ಅವರಿಗೆ ಅಸಮಾಧಾನವಾಯಿತು. ಆದರೂ ಅದಕ್ಕೆಲ್ಲ ಅವರು ಹೆದರಬೇಕಾಗಿರಲಿಲ್ಲ ಯಾಕಂದರೆ ಊರಿನ ನಗರಸಭೆಯು ಉತ್ಪನ್ನದ ನಾಲ್ಕು ಪಟ್ಟು ಅವರ ವರಮಾನವಿತ್ತು.

"ನಾನು ಹೇಳುವುದು ನಿನ್ನ ಹಿತಕ್ಕಾಗಿ ಮತ್ತು ನಿನ್ನ ಮಗಳ ಹಿತಕ್ಕಾಗಿ. ಈಗ ನಾನು ನಿನಗಿಂತ ಹೆಚ್ಚು ಕಾಳಜಿ ನಿನ್ನ..........ಯಾಕೆ? ನಮ್ಮ ಗೋದಿಯ ಮೇಲೆ ತೆಗೆದುಕೊಳ್ಳಬೇಕಾಗಿದೆ. ಯಾಕಂದರೆ ಅವಳಿನ್ನೂ ಸಣ್ಣವಳು. ನೀನು ಹೀಗೆಲ್ಲ ಅಲಕ್ಷ್ಯದಿಂದ ಆರೋಗ್ಯ ಕೆಡಿಸಿಕೊಳ್ಳಲಿಕ್ಕೆ ಪ್ರಾರಂಭಿಸಿದರೆ ಅವಳು ನಿನ್ನ ಬಗ್ಗೆ ಚಿಂತಿಸಲಿಕ್ಕೆ ಪ್ರಾರಂಭಿಸುತ್ತಾಳೆ. ನಾನು ಅಲ್ಲಿಗೆ ಹೋದ ಹೋದಾಗಲೆಲ್ಲ ಮೊದಲು ಅವಳು 'ಅಮ್ಮ ಹೇಗಿದ್ದಾಳೆ?' ಎಂದು ಕೇಳುವಳು. ಆಗ ನಾನು, ನೀನು ಹೀಗೆಲ್ಲ ಹೊತ್ತು ವೇಳೆ ಇಲ್ಲದೆ ಊಟ ಮಾಡಿ ಚಿಂತಿಸುತ್ತ ಕುಳಿತುಕೊಳ್ಳುತ್ತಿಯೆಂದು ಹೇಳಲೇ?" ಎಂದು ಚೌಡಪ್ಪ ಕಳಕಳಿಯಿಂದ ಕೇಳಿದರು.

"ನಾನೆಲ್ಲಿ ಚಿಂತಿಸುತ್ತ ಕೂಡುತ್ತೇನೆ? ಯಾರಿಗಾಗಿ ಚಿಂತಿಸುವುದು?" ಎಂದು ಸುಂದರಿ ಕೇಳಿದಳು.

"ಹಾಗೇ ಮಾತಿಗೆ ಹೇಳಿದೆ ಸುಂದರೀ......." ಎನ್ನುತ್ತ ಚೌಡಪ್ಪ ವಿಷಯಾಂತರಿಸಿದರು.

"ನೋಡು ಸುಂದರೀ, ನಿನ್ನ ಗೋದಿಯನ್ನು ಎಷ್ಟು ಜಾಗ್ರತೆಯಿಂದ ಆರೈಕೆ ಮಾಡುತ್ತಾಳೆ ಮುದುಕಿ!........ಅವಳಿಗೆ ವಾರಕ್ಕೊಮ್ಮೆಯೋ ತಿಂಗಳಿಗೊಮ್ಮೆಯೋ ಒಂದು ಬಾಟ್ಲಿ ಅಮೃತ ಒಯ್ದು ಕೊಟ್ಟರಾಯಿತು" ಎಂದು ಚೌಡಪ್ಪ ಹೇಳುವಾಗ ಸುಂದರಿ ನಡುವೆ ಬಾಯಿ ಹಾಕಿ ಮಾತಾಡಿದಳು.

" ಸಾಯಲಿಕ್ಕೆ ಹೊರಟ ಮುದುಕಿಗೂ ಅದರ ಆಸೆ ಬಿಡಲಿಲ್ಲವೋ ? ನೀವು ಅವಳಿಗೆ ಅಷ್ಟೆಲ್ಲ ಸಲುಗೆ ಕೊಡುವುದು ಸರಿಯಲ್ಲ "

" ಅದು ಸಲಿಗೆಯೇ ಸುಂದರೀ ? ಪಾಪ ಮುದುಕಿ, ಚಳಿಗೆ ರಾತ್ರಿ ಒಂದಿಷ್ಟು ಕುಡಿದು ಮಲಗುತ್ತಾಳೆ. ಅದರಿಂದ ತಪ್ಪೇನಾಯಿತು ? ನಿನ್ನ ಹಾಗೆಯೇ ಎಲ್ಲರೂ ಇರುತ್ತಾರೆಯೇ ? ನೀನು ಅಮೃತ ಬಿಟ್ಟು ನಾಲ್ಕೈದು ವರುಷವಾಯಿತು ಬಿಡು. ಅಂದಿನಿಂದ ನೀನು ಸಾಧು ಆಕಳದ ಹಾಗೆ ಆಗಿದ್ದಿ "

" ನಾನು ಹೇಳುವ ಮಾತಿನ ಧ್ವನಿ ನಿಮಗೆ ಅರ್ಥವಾಗಲಿಲ್ಲ "

" ಏನದು ? "

" ನೀವು ಹಾಗೆಲ್ಲ ಆ ಮಗುವಿನ ಎದುರು ಅವಳಿಗೆ ಕುಡಿಯಲು ಅವಕಾಶ ಒದಗಿಸಿಕೊಡುವುದು ಅಪಾಯಕರ "

" ಥೂ ಹುಚ್ಚೀ ! ನಿನಗಿಂತ ನಿನ್ನ ಮಗಳು ಪಂಡಿತಳಿದ್ದಾಳೆ. ಅವಳು ಎಂದಾದರೂ ಕುಡಿಯುವ ಚಟ ಕಲಿತುಕೊಂಡಾಳೇ ? ಹಾಲು ಕುಡಿಯುವವರು ಹೆಂಡ ಕುಡಿಯುತ್ತಾರೆಯೇ ? ನೀನು ನಿನ್ನ ಮಗಳ ಸ್ವಭಾವವನ್ನು ಪರೀಕ್ಷಿಸಿಲ್ಲ........ನೀನು, ಅವಳು ಮೊದಲಿನ ಗೋದಿಯೆಂದೇ ಭಾವಿಸಿರಬೇಕು.........ಈಗಿನ ಗೋದಿಯೇ ಬೇರೆ. "

" ಈಗ ಅವಳಿಗೂ ಬುದ್ಧಿ ಬಂದಿರಬಹುದು. ಎಷ್ಟೆಂದರೂ ಬೆಳೆದ ಹೆಣ್ಣಲ್ಲವೇ ಅವಳು ?........ ನನಗೆ ಒಂದೇ ಚಿಂತೆ !...........ಅವಳಿಗಿನ್ನೂ ಒಬ್ಬ ವರ ಸಿಗಲಿಲ್ಲವಲ್ಲಾ....ಎಂದು ! ಋತುಮತಿಯಾಗಿ ತಿರುಗಿ ಒಂದು ವರುಷವಾಗುತ್ತಾ ಬಂತು.......ಇನ್ನೂ ಅವಳನ್ನು ಅಲ್ಲಿ........ ಅಷ್ಟು ದೂರ ಬಿಡುವುದು ಸರಿಯಲ್ಲ. ದೇವರಿದ್ದಾನೆ ನೋಡುವಾ ! ನಾನು ಅವಳಿಗೆ ಹೋಗುವಾಗ ಸಾರಿ ಸಾರಿ ಹೇಳಿದ್ದೇನೆ, ' ಜಾಗ್ರತೆ ಮಗೂ ಜಾಗ್ರತೆ ' ಎಂದು ! ಎಲ್ಲವನ್ನೂ ಮುದುಕಿಗೆ ಒಪ್ಪಿಸಿದ್ದೇನೆ........ಅವಳು ನನ್ನ ಮುದ್ದುಕಂದನ ಸಂರಕ್ಷಣೆಯ ಬಗ್ಗೆ ನನ್ನಿಂದ ಆಣೆ ತಿಂದಿದ್ದಾಳೆ........... " ಎಂದು ಸುಂದರಿ ಭಾವನಾವಶಳಾದಾಗ ಚೌಡಪ್ಪನವರಿಗೆ ಆಶ್ಚರ್ಯವಾಯಿತು. ಅವರ ಮನಸ್ಸು ಗೋದಿಯನ್ನು ನಾಲ್ಕಾರು ಸಲ ಕಲ್ಪನೆಯಲ್ಲೇ ಕಂಡಿತು.

ಗೆದರೆ ಮುದುಕಿ ಆಗಾಗ ಅವರಿಗೆ ಹೇಳುತ್ತಿದ್ದ ಮಾತುಗಳನ್ನು ನೆನೆದು ಅವರಿಗೂ ಸ್ವಲ್ಪ ಅಧೈರ್ಯವುಂಟಾಗದೆ ಬಿಡಲಿಲ್ಲ. ಆದರೂ ಸುಂದರಿಯನ್ನು ಸಮಾಧಾನಿಸಲು ಪ್ರಯತ್ನಿಸಿದರು.

"ನಿನಗಿನ್ನೂ ಗೊತ್ತಿಲ್ಲ ಸುಂದರೀ, ಗೋದಿ ನನ್ನೊಡನೆ ಹೇಗೆ ವರ್ತಿಸುತ್ತಾಳೆ ಎಂಬುದು! ಹಿಂದೆ ಅವಳು ಸಣ್ಣವಳಿರುವಾಗ ನನ್ನನ್ನು ನೋಡಿದೊಡನೆ ಎಲ್ಲಿಗಾದರೂ ಓಡಿಹೋಗಿ ಬಚ್ಚಿ ಕೂಡುತ್ತಿದ್ದಳಷ್ಟೇ? ಈಗ ಅವಳ ಸ್ವಭಾವ ಬದಲಾಗಿದೆ. ನನ್ನ ಮೇಲೆ ಅವಳಿಗೆ ತುಂಬ ಗೌರವ. 'ನೀವು ಇಲ್ಲದಿದ್ದರೆ ನಮ್ಮ ಅಮ್ಮ ಬದುಕುತ್ತಿದ್ದಳೋ ಇಲ್ಲವೋ!' ಎಂದು ಗೋದಿ ನನಗೆ ಹೇಳುತ್ತಾಳೆ. ನನ್ನ ಉಪಕಾರವನ್ನು ಅವಳೆಂದೂ ಮರೆಯುವುದಿಲ್ಲವಂತೆ. ಆ ಮುದುಕಿಗೊಬ್ಬಳಿಗೆ ಇಲ್ಲದ ಸಂಶಯ ನನ್ನ ಮೇಲೆ! ನಾನೂ ಗೋದಿ ಎಲ್ಲಿಯಾದರೂ ಸ್ವಲ್ಪ ಹೊತ್ತು ಹೆಚ್ಚು ಮಾತಾಡಿದರೆ ಸಾಕು ಅಲ್ಲಿಗೆ ಓಡಿ ಬಂದು ಗೋದಿಗೆ ಬೆದರಿಸುತ್ತಾಳೆ. ಎಷ್ಟೆಂದರೂ ಗೋದಿಗೆ ನನ್ನ ಮೇಲೆ ತುಂಬ ವಿಶ್ವಾಸ. ನೀನು ಹೋದ ವರುಷ ಇಲ್ಲಿಯೇ ಅದನ್ನೆಲ್ಲ ನೋಡಿರಬಹುದು. ಆಕೆ ನನ್ನೊಡನೆ ಎಷ್ಟು ಸಲೀಸಾಗಿ ಮಾತಾಡುತ್ತಿದ್ದಳು! ಈಗಲಾದರೂ ಅಷ್ಟೇ. ನನಗೂ ಅವಳ ಮೇಲೆ ತುಂಬ ಪ್ರೀತಿ. ಸುಂದರೀ, ನೀನು ತಪ್ಪು ತಿಳಿದುಕೊಳ್ಳಬೇಡ. ನಾನು ಮುಂದಿನ ವರುಷವೇ, ಆ 'ಕನ್ನಡ ಸಾಲೆ' ಇದೆಯಲ್ಲ, ಅಲ್ಲಿ ಅವಳಿಗೆ ನೌಕರಿ ಕೊಡಿಸುತ್ತೇನೆ. ಆ ಬಗ್ಗೆ ನೀನೇನು ಚಿಂತಿಸುವುದು ಬೇಡ' ಎಂದು ಚೌಡಪ್ಪ ಸುಂದರಿಗೆ ನಿಜವಾದ ಸ್ಥಿತಿಯನ್ನು ವಿಶದಪಡಿಸಿದರು.

"ಅವಳನ್ನು ದಾರಿಗೆ ಹಚ್ಚುವುದು ನಿಮ್ಮ ಜವಾಬ್ದಾರಿ. ನಿಮ್ಮ ಮೇಲೆ ನನಗೂ ವಿಶ್ವಾಸವಿದೆ. ಅಲ್ಲದೆ ನೀವೇ ಹಿಂದೊಮ್ಮೆ, 'ಸುಂದರೀ, ಹಾದಿಯಿಂದ ಹಳ್ಳ ಹಿಡಿಯುವುದು ಬಹು ಸುಲಭ. ಹಳ್ಳದಿಂದ ಹಾದಿಗೆ ಹೋಗುವುದು ಕಠಿಣ' ಎಂದು ಹೇಳಿದ್ದು ನನ್ನ ಮನಸ್ಸಿನಲ್ಲಿ ಇದೆ. ಅದು ಇನ್ನೂ ಮರೆತಿಲ್ಲ. ಆದ್ದರಿಂದ ನೀವು ಅವಳನ್ನು ನಿಮ್ಮ ಹೊಟ್ಟೆಯಿಂದ ಹುಟ್ಟಿದ ಮಗಳಂತೆ ನೋಡಿಕೊಳ್ಳುತ್ತೀರೆಂದು ನಂಬಿದ್ದೇನೆ. ನೀವಾದರೂ ಅವಳೊಡನೆ ವಾತ್ಸಲ್ಯಪೂರ್ವಕ ವರ್ತಿಸುವುದು ನ್ಯಾಯ. ನಿಮ್ಮನ್ನು ಬಿಟ್ಟರೆ ನನಗೆ ಈ ಜಗತ್ತಿನಲ್ಲಿ ಬೇರೆಯೊಂದು ನರಹುಳವೂ ಸಹಕರಿಸಲಾರದು. ನನಗೂ,

ಗೋದಿ ನಿಮ್ಮೊಡನೆ ಪಿತೃವಾತ್ಸಲ್ಯದಿಂದ ನಡೆದುಕೊಳ್ಳಬೇಕೆಂಬ ಇಚ್ಛೆ ಮೊದಲಿನಿಂದಲೂ ಇತ್ತು. ಅಂತೇ ಅವಳು ಚಿಕ್ಕವಳಿರುವಾಗ ನಿಮ್ಮನ್ನು ಕಂಡೊಡನೆ ಓಡಿಹೋಗಿ ಅಡಗಿ ಕೂಡುತ್ತಿದದ್ದು ನನಗೆ ಸೇರಿಬರುತ್ತಿರಲಿಲ್ಲ. ನಾನಾದರೂ ಅವಳಿಗೆ ಅದಕ್ಕಾಗಿ ಬುದ್ಧಿ ಹೇಳಿದ್ದೂ ಇದೆ. ಕಾರಣ, ನಾನೇನು ತಪ್ಪು ಕಲ್ಪನೆ ಮಾಡಲಾರೆ. ಸತ್ಯಕ್ಕೆ ಸರಿಯಾಗಿ ನೀವು ನಡೆಯಬೇಕೆಂದು ನನ್ನ ಆಸೆ. ನೀವು ಹಾಗೆ ನಡೆಯುತ್ತೀರೆಂದು ನನಗೆ ಸಾಕಷ್ಟು ಧೈರ್ಯವಿದೆ. ಅಲ್ಲದೆ ಆ ಮುದುಕಿಯನ್ನು ನಾನು ನಿಜಕ್ಕೂ ನನ್ನ ತಾಯಿಯೆಂದು ನಂಬಿದ್ದೇನೆ. ತಾಯಿ ತಂದೆ—ಬಂಧು ಬಳಗವಿಲ್ಲದ ನನ್ನ ಬಾಳಿಗೆ ಆ ಮುದುಕಿ ಮತ್ತು ನೀವೇ ಸರ್ವಸ್ವ” ಎಂದು ಸುಂದರಿ ಆವೇಶಪೂರ್ಣವಾಗಿ ತನ್ನ ಹೃದಯದೊಳಗಿನ ಆಸೆಯನ್ನೆಲ್ಲ ಹೊರಗೆ ಪ್ರಾಮಾಣಿಕತೆಯಿಂದ ತೋಡಿಕೊಂಡಳು. ಅವಳು ನುಡಿದಂತೆ ಅವಳ ಭಾವನೆಯೂ ಚೌಡಪ್ಪನವರ ಬಗ್ಗೆ ನಿರ್ಮಲವಾಗಿತ್ತು.

ಅವಳು ಮಾತಾಡುವಾಗ ಚೌಡಪ್ಪನವರ ಲಕ್ಷ್ಯ ಅವಳತ್ತ ಇತ್ತೋ ಇಲ್ಲವೋ ಎಂದು ನಿರ್ದಿಷ್ಟವಾಗಿ ಹೇಳುವುದು ಪ್ರಯಾಸದ ಕೆಲಸ. ಯಾಕಂದರೆ ಅವಳು ಹೇಳುವ ಮಾತುಗಳನ್ನು ಅವರು ಚೆನ್ನಾಗಿ ಆಲಿಸುವುದರಬದಲು ತಮ್ಮ ಕೈಗಡಿಯಾರ ನೋಡುವುದರಲ್ಲಿ ತಲ್ಲೀನರಾಗಿದ್ದರು. ಅದನ್ನೇ ನಾಲ್ಕಾರು ಸಲ ನೋಡಿ,ನೋಡಿ ಹೇಗೂ ಸುಂದರಿ ತನ್ನ ಭಾಷಣಕ್ಕೆ ವಿರಾಮ ಕೊಡುವವರೆಗೆ ಸಮಯ ಕಳೆದರು. ಆಮೇಲೆ ಕೂಡಲೆ ಅವಸರ ಅವಸರವಾಗಿಯೇ, “ಹೋ! ಹೊತ್ತು ಐದಾಯಿತು!........ಐದು ದಾಟಿತು. ನನಗೆ ಹಳ್ಳಿಗೆ ಹೋಗಬೇಕಾಗಿದೆ. ಹೋಗಿ ಪುನಃ ಹತ್ತು ಗಂಟೆಗೆ ಇಲ್ಲಿ ಇರಲೇಬೇಕು” ಎಂದು ಹೇಳಿದರು.

“ಗೋದಿ ಮತ್ತು ಮುದುಕಿ ಇರುವ ಹಳ್ಳಿಗೋ?” ಎಂದು ಸುಂದರಿ ಉತ್ಸಾಹಪೂರ್ವಕ ಕೇಳಿದಳು.

“ಯಾಕೆ?” ಎಂಬ ಪ್ರಶ್ನೆ ಆ ಕ್ಷಣಕ್ಕೇ ಚೌಡಪ್ಪನವರಿಂದ ಬಂದೇಬಿಟ್ಟಿತು.

“ಅಲ್ಲಿಗೆ ಹೋಗುವುದಿದ್ದರೆ ನಾನೂ ಬರುತ್ತಿದ್ದೆ, ಎಂದು ಕೇಳಿದೆ. ಗೋದಿ ಇಲ್ಲಿಗೆ ಬಾರದೆ ಏಳು-ಏಳುವರೆ ತಿಂಗಳಾಯಿತು. ಅವಳನ್ನು ನೋಡ

ಬೇಕೆಂದು ಯಾಕೋ ನನ್ನ ಮನಸ್ಸು ಕಾತರಿಸುತ್ತಿದೆ "

"ಅವಳಿದ್ದಲ್ಲಿಗೆ ಹೋದರೂ ಹೋದೆ, ಇಲ್ಲವಾದರೆ ಇಲ್ಲ. ಒಟ್ಟಾರೆ ಆ ಹಳ್ಳಿಯ ಹತ್ತಿರವೇ ಹೋಗಬೇಕಾಗಿದೆ. ಭಾರೀ ಅರ್ಜಂಟ ಕೆಲಸವಿದೆ. ಆದ್ದರಿಂದ ನೀನು ಬರುವುದು ಬೇಡ. ಇನ್ನೇನು? ಬಹಳವಾದರೆ ಒಂದೋ ಎರಡೋ ತಿಂಗಳಿರಬಹುದು—ಗೋದಿಯ ಪರೀಕ್ಷೆಗೆ. ಆಮೇಲೆ ಅವಳು ಅಷ್ಟು ದೂರವೇನು ಇರುವುದಿಲ್ಲವಲ್ಲ. ಇಲ್ಲಿಂದ ಬೇರೆ ಕಡೆ ಹೋಗಲಿಕ್ಕೂ ಆವಳಿಗೆ ಸೌಡು ಸಿಗುತ್ತದೋ ಇಲ್ಲವೋ? ನೀನು ಇಷ್ಟು ಯಾಕೆ ಅವಸರ ಪಡುತ್ತಿ? ಮೊನ್ನೆ ಮೊನ್ನೆಯಾದರೂ ಅವಳ ಕಾಗದ ಬಂದಿದೆ! ಅಲ್ಲದೆ ನಾನೂ ಅತ್ತ ಹೋಗಿ ಇವತ್ತಿಗೆ ತಿಂಗಳಾಗುತ್ತ ಬಂದಿದೆಯಷ್ಟೇ?" ಎಂದು ಚೌಡಪ್ಪ ಸುಂದರಿಯ ಬಯಕೆಯನ್ನು ಮುರಿದೇ ಬಿಟ್ಟರು. ಅಲ್ಲಿಂದ ಎದ್ದೂ ಆಯಿತು. "ಅದೋ ಅಲ್ಲಿ ಒಂದು ಓವೆಲ್‌ಟಾಯಿನ್ ಡಬ್ಬಿ ಇಟ್ಟಿದ್ದೇನೆ. ಅದನ್ನು ಹಾಲಲ್ಲಿ ಹಾಕಿ ಕುಡಿ. ಹೀಗೇ ಚಿಂತೆ ತೆಗೆಯುತ್ತ ಹುಚ್ಚರಂತೆ ಇಲ್ಲದ ವಿಚಾರಗಳನ್ನು ತಲೆಗೆ ಹಚ್ಚಿಕೊಂಡು ಕೂತರೆ ಒಳ್ಳೆಯದಲ್ಲ. ಮೊದಲು ದೇಹಕ್ಕೆ ಸ್ವಲ್ಪ ಬ್ರಾಂಡಿ, ಬೀರ್, ಗೀರ್–ಗಳ ನೀರಾದರೂ ಬೀಳುತ್ತಿತ್ತು. ಈಗ ನೀನು ಅದನ್ನೂ ಬಿಟ್ಟು ಏಕಾದಶಿಯ ವ್ರತ ಪ್ರಾರಂಭಿಸಿದ್ದಿ. ಅಗೋ ಅದನ್ನು ಒಳಗೆ ಒಯ್ಯು" ಎಂದು ಹೇಳಿ ಅಲ್ಲಿಂದ ಹೊರಟೇ ಬಿಟ್ಟರು. ಅವರ ಉಪಚಾರದ ಮಾತುಗಳನ್ನು ಕೇಳಿ ಸುಂದರಿಗೆ ಅವರ ಮೇಲೆ ಅಪಾರವಾದ ಕರುಣೆ, ಪ್ರೇಮ ಹುಟ್ಟಿತು. "ಎಷ್ಟು ಒಳ್ಳೆಯವರು ನನ್ನ ಧನಿ!" ಎಂದು ನೆನೆಯುತ್ತ ಆಕೆ ಆ ಡಬ್ಬಿಯನ್ನು ಒಳಗೆ ಒಯ್ದು ಇಟ್ಟೇ ಬಿಟ್ಟಳು.

ಚೌಡಪ್ಪನವರು ಮಾತ್ರ ಸರ್ರನೆ ಹೋಗಿ ತಮ್ಮ ಕಾರಿನಲ್ಲಿ ಕುಳಿತುಕೊಂಡರು. ಡ್ರಾಯ್ವರ್ ಕೂಡಲೆ ಕಾರು ಹೊಡೆದ. ಆತ "ಎಲ್ಲಿಗೆ?" ಎಂದು ಅವರನ್ನು ಕೇಳಲಿಲ್ಲ.

ಸರಿಯಾಗಿ ಆರು ಗಂಟೆಗೆ ಚೌಡಪ್ಪ ಮುದುಕಿ ಇದ್ದ ಹಳ್ಳಿಗೆ ಮುಟ್ಟಿದರು. ಅವಳ ಮನೆಯ ಮುಂದೇ ಹೋಗಿ ಕಾರಿನ ಬ್ರೇಕು ಬಿತ್ತು. ಚೌಡಪ್ಪ ಕಾರಿನಿಂದ ಇಳಿದು ಸೀದಾ ಒಳಗೆ ಹೋದರು ಡ್ರಾಯ್ವರ್ ಕಾರು ಹೊಡೆದು

ಕೊಂಡು ಮುಂದೆ ಹೋಗಿ, ತಿರುಗಿಸಿ ತಂದು ಮೊದಲಿದ್ದಲ್ಲಿಗೇ ತಂದು ನಿಲ್ಲಿಸಿದ.

ಗೋದಿಯು ಕೋಣೆಯಲ್ಲಿ ಕುಳಿತುಕೊಂಡು ಯಾವುದೋ ಪುಸ್ತಕ ಓದುತ್ತಿದ್ದಳು. ಚೌಡಪ್ಪನವರನ್ನು ಕಂಡೊಡನೆ ಆಕೆ ಎದ್ದು ನಿಂತು ಅವರಿಗೆ ಗೌರವ ಸಲ್ಲಿಸಿದಳು. ಆದರೆ ಅವರನ್ನು ಪೂರ್ಣ ಕೋಣೆಯೊಳಗೆ ಪ್ರವೇಶ ಮಾಡಲು ಬಿಡದೆ, "ಅಲ್ಲಿಯೇ ನಿಂತುಕೊಳ್ಳಿ, ನಾನು ಮುಟ್ಟು" ಎಂದು ಮುಗುಳು ನಗೆಯಿಂದ ಅವರಿಗೆ ಹೇಳಿದಳು.

ತಾವು ತಂದ ಚ್ಯಾಕ್ಲೇಟಿನ ಡಬ್ಬಿಯನ್ನು ಅವಳಿದ್ದಲ್ಲಿಗೆ ಚೆಲ್ಲಿದರು ಚೌಡಪ್ಪ. "ನೋಡು ಈ 'ಬೋರ್ ಮಾಳಾ' ಹೇಗಿದೆ?" ಎಂದು ಬಂಗಾರದ ಸರವನ್ನು ಅವಳಿಗೆ ಕೊಟ್ಟರು. ನಗುನಗುತ್ತ ಗೋದಿ ಅದನ್ನು ತೊಟ್ಟುಕೊಂಡಳು. "ಎಷ್ಟು ಚೆಂದ ಕಾಣುತ್ತದೆ" ಎಂದು ಅವಳೇ ನುಡಿದಳು. ಚೌಡಪ್ಪನವರಿಗೆ ಆನಂದವಾಯಿತು. ಸುಖವೂ ಆಗಿರಬಹುದು ಅವರಿಗೆ. ಹೊರಗೇ ನಿಂತುಕೊಂಡು ಅವರು ಆಕೆಯ ಸೌಂದರ್ಯ ಸವಿಯುತ್ತಿದ್ದರು. ಅಷ್ಟರಲ್ಲಿ ಅಲ್ಲಿಗೆ ಅವಸರದಿಂದ ಓಡೋಡಿ ಮುದುಕಿ ಬಂದು ಉಪಾಯದಿಂದ ಚೌಡಪ್ಪನವರನ್ನು ಅಲ್ಲಿಂದ ಕರೆದುಕೊಂಡು ಒಯ್ದು ಚಹಾ ಮಾಡಿ ಕೊಟ್ಟಳು. ಸ್ವಲ್ಪ ಹೊತ್ತಾದ ಮೇಲೆ "ಹಾಗೆಲ್ಲ ಅವಳಿಗೆ ಸಲಿಗೆ ಕೊಡಬೇಡ ಚೌಡಣ್ಣಾ....ಅವಳ ಗುಣ ಸಣ್ಣಂದಿನಲ್ಲಿ ಒಂದು ತೆರನಾಗಿತ್ತು. ಈಗ ಆಕೆಯ ಸ್ವಭಾವವೇ ಬದಲಾಗಿದೆ.... ಈ ವಯಸ್ಸಾದರೂ ಅದೇ ಬಿಡು. ಆದರೂ ನೀನು ಜಾಗ್ರುತೆಯಿಂದ ಅವಳೊಡನೆ ಮಾತಾಡು" ಎಂದು ಚೌಡಪ್ಪನವರಿಗೆ ಬುದ್ಧಿ ಹೇಳಿದಳು. ಮುದುಕಿ ಯಾವಾಗಲೂ ಚೌಡಪ್ಪನವರಿಗೆ ಅಷ್ಟು ಬುದ್ಧಿವಾದ ಹೇಳುತ್ತಲೇ ಇದ್ದಳು. ಅವರು ಅದನ್ನು ಕೇಳಿಕೊಂಡು ಪುನಃ ಕಾರು ಹತ್ತಿ ಹೊರಟರು.

ಎಂಟನೆಯ ಅಧ್ಯಾಯ

ಶಿಕ್ಷಣವನ್ನೆಲ್ಲ ಮುಗಿಸಿಕೊಂಡು ಗೋದಿ ಮನೆ ಸೇರಿಯಾಯಿತು. ಅವಳೊಡನೆ ಮುದುಕಿಯೂ ಮರಳಿ ಬಂದಳು. ಅವಳ ವಾಸವೂ ಸುಂದರಿಯ ಮನೆಯ ಬಳಿಯಲ್ಲಿದ್ದ ಮೊದಲಿನ ಮನೆಯಲ್ಲೆಂದು ಚೌಡಪ್ಪ ನಿರ್ಧರಿಸಿದ್ದರು. ಈಗಲಾದರೂ ಮುದುಕಿಗೆ ಗೋದಿಯ ಸೇವೆ ಮಾಡುವುದು ತಪ್ಪಲಿಲ್ಲ. ಚೌಡಪ್ಪನವರೇ, "ನೀನಿನ್ನು ಗೋದಿ ಹೇಳಿದಂತೆ ಕೇಳಬೇಕು" ಎಂದು ಅವಳಿಗೆ ಆಜ್ಞಾಪಿಸಿದ್ದರು. ಕಾರಣ, ಮುದುಕಿ ಹಾಗೆ ಮಾಡಬೇಕಾಯಿತು. ಹಾಗೆಂದು ಸುಂದರಿ ಹೇಳಿದ ಕೆಲಸಗಳಿಗೆ ಆಕೆ ಒಪ್ಪುತ್ತಿರಲಿಲ್ಲವೆಂದು ತಿಳಿಯಬೇಡಿ. ಆದರೆ ಸುಂದರಿಯ ಚಾಕರಿಗಳಿಗಿಂತ ಗೋದಿಯ 'ಹುಕುಮ್'ಗಳು ಮುದುಕಿಗೆ ಬಹಳವಾಗಿದ್ದವು. ಯಾಕಂದರೆ ಗೋದಿ ಈಗ 'ಮುನ್ಸಿಪಲ್ ಹಾಯ್‌ಸ್ಕೂಲಿ'ನಲ್ಲಿ 'ಟೀಚರ್' (Teacher) ಆಗಿದ್ದಳು. ಚೌಡಪ್ಪ ಹಿಂದೆ ಹೇಳಿದಂತೆ ಗೋದಿಗೊಂದು ನೌಕರಿಯನ್ನು ಕೊಡಿಸಿದ್ದರು. ಹೀಗಾಗಿ ಗೋದಿ ಈಗ ಮನೆಯ ಯಜಮಾನಿ ಆಗಿದ್ದಾಳೆ. ಅವಳು ಹೇಳಿದಂತೆ ಮುದುಕಿ ಕೇಳಬೇಕಾಗಿತ್ತು. ಗೋದಿಗೆ ಪ್ರತಿದಿನವೂ ಪೇಟೆಗೆ ಹೋಗಿ ಬಾರದಿದ್ದರೆ ನಿದ್ರೆ ಬೀಳದು. ಹಾಗೆಂದು ಅವಳು ಯಾವಾಗಲೂ ಪೇಟೆಯಿಂದ ಏನಾದರೂ ತರುವುದಿಲ್ಲವೆಂದಲ್ಲ. ವಾರಕ್ಕೊಂದು ಸ್ನೋ ಬಾಟ್ಲಿ ಅವಳಿಗೆ ಬೇಕಿತ್ತು. ಪೌಡರ್, ಲಿಪ್‌ಸ್ಟಿಕ್ (Lipstick) ಇತ್ಯಾದಿ ಪರದೇಶಿ ವಸ್ತುಗಳ ಭೂಷಣವಿಲ್ಲದೆ ಆಕೆ ಎಂದೂ ಸಾಲೆಗೆ ಹೋಗುವುದಿಲ್ಲ. ಕೈಯಲ್ಲೊಂದು 'ವೇನಿಟಿ ಬ್ಯಾಗ್' (Vanity Bag) ಸದಾ ಇರುತ್ತದೆ. ಒಟ್ಟಿನಲ್ಲಿ ಗೋದಿ "ಲೇಡೀ ಟೀಚರ್" ಎಂದು ಆ ಸಾಲೆಯ ವಿದ್ಯಾರ್ಥಿಗಳು ಹೆಸರಿರಿಸಿದಂತೇ ಆಗಿದ್ದಳು. ಈ ಮುದುಕಿಗೆ ಸಂಜೆ ಅವಳ ಹಿಂದಿನಿಂದ ಆ ಪೌಡರ್, ಸ್ನೋ, ವೆಸ್ಲಿನ್ ಮೊದಲಾದವುಗಳ ಭರಣಿಗಳನ್ನು ಹೊತ್ತುಕೊಂಡು ಮನೆಗೆ ಮುಟ್ಟುವಾಗ ಸಾಕುಬೇಕಾಗಿ ಹೋಗುತ್ತಿತ್ತಂತೆ. ಕೆಲವೊಮ್ಮೆ ಚೌಡಪ್ಪನವರು ತಮ್ಮ 'ಶೀವರ್‌ಲೆಟ್' ಕಾರು ಕಳುಹಿಸುತ್ತೇನೆಂದರೂ ಗೋದಿ ನಿರಾಕರಿಸುತ್ತಿದ್ದಳು. ಹೀಗೆ ಗೋದಿ ತನ್ನದೇ ಆ

ದಾರಿಯನ್ನು ತುಳಿಯತೊಡಗಿದಳು. ಆಕೆ ಮೊಟ್ಟಮೊದಲು ಸಾಲೆಗೆ ಶಿಕ್ಷಕಿಯಾಗಿ ಹೋದಾಗ ಎಷ್ಟೋ ಜನರು, "ಇವಳೇ!....... ಇವಳು, ನಮಗೆ ಗೊತ್ತಿಲ್ಲವೇ?" ಎಂದು ಆಕೆಯ ಗೋತ್ರೋಚ್ಚಾರಣೆ ಮಾಡುತ್ತಿದ್ದರು. ಅಂಥವರಿಗೆ ಗೋದಿ ಹೆದರುವವಳಲ್ಲ. ಹಿಂದೆ ಹಾಗೆಲ್ಲ ಆಕೆ ಎಷ್ಟೋ ಮಾತುಗಳನ್ನು ಕೇಳಿರಬಹುದು. ಆದರೆ ಇಂದಿನ ಗೋದಿಯೇ ಬೇರೆಯವಾಗಿದ್ದಾಳೆ. ಈಗ ಅವಳು ಸ್ವಾಸ್ಪ್ವ ಇಂಗ್ಲೀಷು ಕಲಿತುಕೊಂಡಾಗಿದೆ. ಅಂಥವರು ಯಾರಾದರೂ ಚೇಷ್ಟೆ ಮಾಡಿದರೆ, "This is twentieth century" ಎಂದು ಸಿಡಿಮಿಡಿಗೊಂಡು ಅವರ ಮೋರೆಗೆ ಉತ್ತರಿಸುತ್ತಿದ್ದಳು.

ಮಗಳ ಈ ರೀತಿಯ ನಡತೆಯನ್ನು ಕಂಡು ಸುಂದರಿಯ ಮನಸ್ಸು ಅಪಾರವಾದ ತಲ್ಲಣಕ್ಕೊಳಗಾಗಿತ್ತು. "ನಾವು ತಿಳಿಯುವುದೊಂದು ದೈವ ಬಗೆಯುವುದೊಂದು" ಎಂದು ಅವಳಿಗೆ ಮುದುಕಿ ತಂಗಳು ತತ್ವವನ್ನೂ ಉಪದೇಶಿಸಿದ್ದಳು. ಆದರೆ ಸುಂದರಿ ಮಾತ್ರ ಅವಳನ್ನು ಗೋದಿಯ ಹಿಂದೆ ಸರ್ಪಕಾವಲಾಗಿ ಇರುವಂತೆ ಕೇಳಿಕೊಂಡಿದ್ದಳು. ತಾನಾದರೂ ಅದೇ ಪ್ರಕಾರ ಗೋದಿಯ ಮೇಲೆ ಕಣ್ಣಿಟ್ಟಿದ್ದಳು. ಅಲ್ಲದೆ ಹಲವಾರು ಸಲ ಮುದುಕಿಗೂ "ನಿನ್ನ ಪೈಕಿ ಅಥವಾ ನಿನ್ನ ಗುರ್ತಿನ ಪೈಕಿ ಯಾರಾದರೂ ಒಬ್ಬರು ನನ್ನ ಗೋದಿಯ ಕೈ ಹಿಡಿಯುವ ಪುಣ್ಯ ಕಟ್ಟಿಕೊಂಡಾರೆ?" ಎಂದು ಕೇಳಿದ್ದು ಇದೆ. ಮುದುಕಿಯಾದರೂ ನಾಲ್ಕಾರು ಕಡೆ ಹೋಗಿ, ಕೇಳಿಕೊಂಡು ಸಾಕಷ್ಟು ಮಂಗಳಾರತಿ ಮಾಡಿಸಿಕೊಂಡಾಗಿತ್ತು. "ಸೂಳೆಯ ಮಗಳನ್ನು ಯಾರು ಮದುವೆಯಾಗುವವರು?" ಎಂದೇ ಮುದುಕಿಗೆ ಮೊದಲನೆಯ ಮಂಗಳ ಪುಷ್ಪ ಏರಿಸಲ್ಪಡುತ್ತಿತ್ತು. ಆದರೆ ಇದೇ ಮಾತನ್ನು ಅವಳೆಂದೂ ಸುಂದರಿಗೆ ಹೇಳುವವಳಲ್ಲ; ಹೇಳಿಯೂ ಇಲ್ಲ. ಸುಂದರಿಯ ಕಿವಿಗೆ ಆ ಶಬ್ದ ಬಿದ್ದೊಡನೆ ಕಾಸಿದ ಸೀಸ ಹೊಯ್ದಂತೆ ವೇದನೆಯಾಗುತ್ತಿತ್ತು. ಅಲ್ಲದೆ ಆಕೆ ನಾಲ್ಕೈದು ದಿನ—ಆ ಮಾತು ಕೇಳಿದ ಮೇಲೆ ಹುಚ್ಚರಂತೆ ಕೂತು, ಊಟ ಬಿಟ್ಟು ಉಪವಾಸ ಕೈಕೊಂಡದ್ದೂ ಇದೆ. ಇದೆಲ್ಲ ವಿಷಯವನ್ನು ಅರಿತ ಮುದುಕಿ ಅವಳ ಕಿವಿಗೆ ಅಂಥ ಯಾವ ಮಾತೂ ಬೀಳದಂತೆ ಜಾಗ್ರತೆ ವಹಿಸುತ್ತಿದ್ದಳು. ಅಂತೇ "ಕಾಲ ಬಂದೀತು. ಎಲ್ಲದಕ್ಕೂ ಒಂದೊಂದು

ಸಮಯ ಬರುತ್ತದೆ. ಕಾಲ ಬಾರದೆ ಯಾವುದೂ ಆಗುವುದಿಲ್ಲ" ಎಂದು ಮುದುಕಿ ಅವಳಿಗೆ ಆಗಾಗ ಸಮಾಧಾನ ಹೇಳುತ್ತಿದ್ದಳು ದಿನದಿನವೂ ಇದೇ ರೀತಿಯಲ್ಲಿ ಮಗಳ ಮದುವೆಯ ವಿಷಯದಲ್ಲಿ ಸುಂದರಿ ಕೊರಗದೆ ಇಲ್ಲ. ಅದೇ ವಿಷಯದ ಬಗ್ಗೆ ಅವಳಿಗೂ ಮುದುಕಿಗೂ ಸಂಭಾಷಣೆಯೂ ನಡೆಯಬೇಕು. ಆದರೆ ಅದರ ಕೊನೆ ಮಾತ್ರ "ಎಲ್ಲ ಆ ಹನುಮನ ತಲೆಯಮೇಲೆ. ಅವನಿಗೆ ಮನಸ್ಸಿದ್ದರೆ ನನ್ನ ಮಗುವಿಗೊಂದು ವರ ದೊರೆಯಲು ಎಷ್ಟು ದಿನ ಬೇಕು? ಅವನಿಗೂ ಕಣ್ಣಿದೆ ನೋಡೋಣ, ಇಂದಿಲ್ಲ ನಾಳೆ. ನಾಲ್ಕು ದಿನ ಕಾಯಬೇಕಾದೀತು. ಎಷ್ಟೆಂದರೂ ಅವನು ದೇವನಷ್ಟೆ! ಮನುಷ್ಯರಿಗೆ ಹೇಳಿಕೊಂಡು ಏನು ಪ್ರಯೋಜನ?" ಎಂದು ಎಲ್ಲವೂ ಹನುಮನ ಮೇಲೆ ಹೇರಲ್ಪಟ್ಟು ಆಗುತ್ತಿತು—ಸುಂದರಿಯಿಂದ.

ತನ್ನ ಮನದೊಳಗಿನ ಆ ಆಶಯವನ್ನು ಸುಂದರಿ ಗೋದಿಗೂ ತಿಳಿಸಿದ್ದಳು. "ಮಗೂ ಗೋದಿ, ನನ್ನ ಆಸೆ ಏನಿದೆಯೆಂದು ನಿನಗೆ ಗೊತ್ತಿರಬಹುದು" ಎಂದು ಸುಂದರಿ, ಗೋದಿ ಸಾಲೆಯ ಶಿಕ್ಷಕಿಯಾದ ವೇಳೆಯಲ್ಲೇ ಕೇಳಿಯಾಗಿತ್ತು.

"ನಿನ್ನ ಮನಸ್ಸಿನೊಳಗಿನ ಆಸೆ ನನಗೆ ಹೇಗೆ ತಿಳಿಯುವುದಮ್ಮಾ?" ಎಂದು ಗೋದಿ ಪ್ರಶ್ನಿಸಿದಾಗಲೇ ಸುಂದರಿಗೆ ಮಗಳ ಸ್ವಭಾವದ ಮೂರ್ತಿಮಂತ ಕಲ್ಪನೆಯಾಗಿತ್ತು.

"ಹೀಗೇಕೆ ಮಗೂ, ಮಾತು ಮಾತಿಗೂ ನೀನು ನಿರ್ಲಕ್ಷ್ಯಳಾಗಿ ವರ್ತಿಸುವಿ?"

"ನಿನ್ನ ಆಸೆಯಾದರೂ ನನಗೆ ಹೇಗೆ ತಿಳಿಯಬೇಕು ಹೇಳು? ನಾನೇನು ಜಾದುಗಾರಳೇ? ಅಥವಾ ಕಣಿ ಹೇಳುವವಳೇ?"

"ನಾನು ಇಲ್ಲಿಯವರೆಗೆ ಬದುಕಿದ್ದು, ಇನ್ನು ಬದುಕುವುದೂ ನನ್ನ ಒಂದೇ ಒಂದು ಬಯಕೆ ಈಡೇರುವುದಕ್ಕಾಗಿ ಮಗೂ. ಅದು ನಿನ್ನನ್ನೇ ಅವಲಂಬಿಸಿದೆ ಗೋದಾ."

"ನನ್ನ ಸಲುವಾಗಿ ನೀನೇನು ಚಿಂತಿಸುವುದು ಬೇಡ. ನನಗೇನು ಕಡಿಮೆಯಾಗಿದೆಯೆಂದು ನೀನು ವ್ಯಥೆ ಪಡುವುದು?"

" ನಿನಗದು ಅನಿಸಲಿಕ್ಕಿಲ್ಲ ಮಗೂ "

" ನಿನಗೆ ವಯಸ್ಸು ಆಗುತ್ತಾ ಆಗುತ್ತಾ ಇಲ್ಲದ್ದೇನೇನೋ ತಲೆಯೊಳಗೆ ಬರತೊಡಗಿದೆ. ನಿನ್ನ ಈಗಿನ ಭಕ್ತಿಯೇನು ! ದೇವರು ಏನು ! ನೀವೆಲ್ಲ ಆ ಏಯ್‌ಟೀಂತ್ ಸೆಂಚರಿ (Eighteenth Century) ಮಂದಿ ನೋಡಮ್ಮಾ. ನಿಮಗೆ ಲಾಯಿಫ್ (Life) ಎಂಬೋದನ್ನು ಹೇಗೆ ಎಂಜಾಯ್ (enjoy) ಮಾಡಬೇಕೆಂಬುವುದೇ ಗೊತ್ತಿಲ್ಲ ! "

" ನಿನ್ನ ಇಂಗ್ಲೀಷು ಚೆನ್ನಾಗಿ ತಿಳಿಯದಿದ್ದರೂ ನಿನ್ನ ಮಾತಿನ ಅರ್ಥ ಆಗುತ್ತದೆ ಗೋವಿ. ಆದರೆ ನೀನು ಹೇಳಿದ ಹಾಗೆ ಕೇಳದಿದ್ದರೆ........ನನ್ನ ಮಟ್ಟಿಗೆ ನಾನು ಯಾವುದಾದರೂ ಒಂದು ಕೆರೆಯೋ, ಬಾವಿಯೋ ನೋಡಿ ಕೊಳ್ಳಬೇಕಾಗುತ್ತದೆ "

" ನಾನ್‌ಸೆನ್ಸ್ ! ಆ ಮಾತು ಇನ್ನೊಮ್ಮೆ ಆಡಬೇಡಮ್ಮಾ ! ನಾನ್ ಸೆನ್ಸ್ ! ನಿನಗಾಗಲಿ, ನನಗಾಗಲಿ ಏನು ಕಡಿಮೆ ಉಂಟು ಹೇಳು ನೋಡೋಣ "

" ನಿನಗಿನ್ನೂ ಚೆನ್ನಾಗಿ ಪ್ರಪಂಚದ ಜ್ಞಾನವಾಗಿಲ್ಲ ಗೋದಾ. ನಮಗೇನು ಕಡಿಮೆ ಉಂಟು ಎಂದು ಕೇಳುತ್ತಿಯಲ್ಲ ನೀನು ! ನಮಗೆ ಏನು ಮಹಾ ಸ್ವರ್ಗಸುಖ ಉಂಟು ಎನ್ನುವುದನ್ನಾದರೂ ಹೇಳು. "

" ಅಯ್ಯೋ ! ಸಿಂಪಲ್‌ಟನ್ (Simpleton) ನಿನಗೆ ಇಷ್ಟೂ ತಿಳಿಯುವುದಿಲ್ಲವೇ ? ಈ ಮನೆ ಯಾರದು ? ಈ ಮನೆ ಕಂಪೌಂಡು ಯಾರ ಹೆಸರಿನಲ್ಲಿದೆ ? ಒಳಗೆ ಟ್ರೆಜರಿಯೊಳಗಿರುವ ಸೇರು–ಸೇರು ಬಂಗಾರ ಯಾರದು ? ಇದೆಲ್ಲಾ ಯಾರದಮ್ಮಾ ? ಇದರ ಹಕ್ಕೆಲ್ಲ ಯಾರದು ಗೊತ್ತೇ ನಿನಗೆ ? "

" ನನಗೆ ಗೊತ್ತಿಲ್ಲ ಗೋದಿ ! "

" ನೋಡು, ಹಾಗೆ ಸಿಟ್ಟಿಗೇಳಬೇಡ- "

" ನಿನ್ನ ಮೇಲೆ ನನಗೆ ಸಿಟ್ಟೇ ಮಗೂ ? "

" ಹಾಗಾದರೆ ನಿನ್ನ ವಿಶ್ (wish) ಆದರೂ ಹೇಳು."

" ನೀನು ಹೇಳಿದ ಹಾಗೆ ನಮಗೆ ಯಾವುದಕ್ಕೂ ಕಡಿಮೆ ಇಲ್ಲ ! ಆದರೆ ನಮಗೆ ಈ ಜಗತ್ತಿನಲ್ಲಿ ಎಲ್ಲರಿಗಿಂತ ಒಂದು ಹೆಚ್ಚಿನ ಮರ್ಯಾದೆ (!) ಉಂಟು

ಅದು ಗೊತ್ತೇನೆ ನಿನಗೆ?"

"ಓ ಎಸ್! I know ಅಮ್ಮಾ. This is twentieth century, I say ಅಮ್ಮಾ!"

"ಸಾಕು ಮಾಡೇ ನಿನ್ನ ಇಂಗ್ಲೀಷು"

"ನೀನು ಹೇಳುವುದು ಚೌಡಪ್ಪನವರ ವಿಷಯ ಅಲ್ಲವೇನಮ್ಮ? ಅವರು ನಮ್ಮ..............."

"ಥೂ ನೀನೇ! ನಿನಗೆ ನಾನು ಹೇಳುವುದೇ ತಿಳಿಯದು."

"ಅದನ್ನೇ ಹೇಳು ಅಂತೇನೆ"

"ನೀನು ಬೇಗ ಮದುವೆ ಆಗಬೇಕು ಅಂತೇನೆ"

"ಇಷ್ಟೇ ಏನು!"

"ನನ್ನ ಆಸೆ ಅದೇ ಗೋದಾ. ವರುಷ ವರುಷಗಳ ಲಾಗಾಯ್ತು ನಾನು ಜೀವ ಹಿಡಿದುಕೊಂಡಿರುವುದು ಅಷ್ಟರ ಸಲುವಾಗಿಯೇ ಮಗೂ. ನಿನಗೆ ಒಂದು ಮದುವೆಯಾಯಿತೆಂದರೆ ನಾನು ಸ್ವರ್ಗ ಸೇರಿದಂತೆ. ನನ್ನ ಜೀವನದ ಧ್ಯೇಯವೇ ಅದೇ ಮಗೂ. ನೀನು ಒಂದು ದಾರಿ ಹಿಡಿಯ ಬೇಕು."

"ನನಗಿದು ಎಷ್ಟು ವರ್ಷ ಎನ್ನುವುದು ನಿನಗೆ ಗೊತ್ತುಂಟೇನಮ್ಮ?"

"ಯಾಕೆ?"

"ಗೊತ್ತುಂಟೇ ಎಂದು ಕೇಳಿದೆ"

"ನಿನ್ನನ್ನು ಹೊತ್ತು, ಹೆತ್ತವಳಿಗೆ ಅದು ಗೊತ್ತಿಲ್ಲದೆ ಮತ್ತಾರಿಗೆ ಗೊತ್ತಿರುತ್ತದೆ ಕಂದಾ? ನೀನು ಯಾಕೆ ಹೀಗೆ ಮಾತಾಡುವಿ?"

"ನನಗೆ ಈಗಲೇ ಮದುವೆಯ ವಯಸ್ಸಾಯಿತೇ?"

"ಅಯ್ಯೋ ಮಂಕೇ! ಇಷ್ಟರಲ್ಲೇ ನಿನ್ನ ಪ್ರಾಯದ ಹೆಣ್ಣುಮಕ್ಕಳು ಒಂದೊಂದು ಮಗುವಿನ ತಾಯಂದಿರಾಗಿದ್ದಾರೆ! ನೀನಿನ್ನೂ ಸಣ್ಣವಳೇ?"

"ಆಗಿರಬಹುದು, ನನ್ನ ಪ್ರಾಯದ ಹೆಣ್ಣುಮಕ್ಕಳು ಆಗಿರಬಹುದು. ಆದರೆ ನಾನೂ ಅವರಂತೇ ಆಗಬೇಕಂತೀಯೇನಮ್ಮ?"

"ನನ್ನ ಕರುಳು ಹಾಗೆ ಹೇಳುತ್ತದೆ ಮಗೂ, ಕಣ್ಣು ಕೂಡಾ ಅದನ್ನೇ ಕಾಣಬೇಕೆನ್ನುತ್ತದೆ ಗೋದಾ. ನಿನ್ನ ಪ್ರಾಯದವರನ್ನು ಕಾಣುವಾಗ ನನ್ನ

ಮನಸ್ಸೂ, ‘ ನನ್ನ ಗೋದಿಯೂ ಹೀಗೆ ಯಾವಾಗ ಮಗುವಿನ ತಾಯಿಯಾಗುವ ಭಾಗ್ಯವತಿ ಆದಾಳು ? ’ ಎಂದು ತವಕಿಸುತ್ತದೆ. ”

“ ನೀನು ಅದಕ್ಕಾಗಿ ಯಾಕೆ ಕೊರಗುವದಮ್ಮಾ ? ನಾನಂತೂ ಇನ್ನೂ ಒಂದೆರಡು ವರುಷಗಳ ಮಟ್ಟಿಗೆ ಮ್ಯಾರೇಜ್ ಮಾಡಿಕೊಳ್ಳುವುದಿಲ್ಲ. ನಾನು ಒಪ್ಪಿದರೆ ಎಷ್ಟೋ B. A. B. T. ಗಳು ನನ್ನನ್ನು ಮ್ಯಾರೇಜ್ ಮಾಡಿಕೊಳ್ಳಲು ತಯಾರಿದ್ದಾರೆ. ನೀನೇನೋ ತಿಳಿದುಕೊಂಡಿರಬಹುದು, “ನಾವು ಕುಲಗೋತ್ರ ಇಲ್ಲದವರು ’ ಎಂದು ಅದಕ್ಕಾಗಿಯೇ ನಾನು ನಿನಗೆ ‘ ಸಿಂಪಲ್ ಟನ್ ’ ಎಂದದ್ದು ! ನೀನು ಇಷ್ಟೇಕೆ ಚಿಂತಿಸುವುದು ? ಮೊದಲಿನ ಜಗತ್ತು ಅಲ್ಲವಮ್ಮಾ ಇದು ! ತಿಳಿಯಿತೇ ? ನಾನು ಅಂಡರ್ ಗ್ರ್ಯಾಜುವೇಟ್ (Under-graduate) ಇದ್ದೇನೆ ಅನ್ನುವುದಾದರೂ ನಿನಗೆ ಗೊತ್ತಿದೆಯೇ ? ಅದೇ ನಾನು ಕನ್ನಡ ಅಷ್ಟೇ ಕಲಿತು, ಕನ್ನಡ ಸಾಲೆಯ ಶಿಕ್ಷಕಿಯಾಗಿದ್ದರೆ, ಇಷ್ಟೆಲ್ಲ ವಿಚಾರ ನನ್ನ ತಲೆಯೊಳಗೆ ಬರುತ್ತಿದ್ದಿಲ್ಲ; ನಿನಗೂ ತಿಳಿಯುತ್ತಿದ್ದಿಲ್ಲ. ನೀನೊಂದು ಹುಚ್ಚು! ಯಾವಾಗಲೂ ದೇವರು, ದಿಂಡರು ಪೂಜೆ; ಹನುಮ--ಅದೂ ಇದೂ ಅಂತ ಏನೇನೋ ಮಾಡಿಕೊಂಡು ಹೊತ್ತು ಕಳೆಯುತ್ತಿ. ”

“ ನಮ್ಮ ಸಂಸಾರದ ಪರಿಸ್ಥಿತಿ ನಿನಗಿನ್ನೂ ತಿಳಿದಿಲ್ಲ ಗೋದೀ. ಅದು ತಿಳಿದಿದ್ದರೆ ನೀನು ಹೀಗೆ ಮಾತಾಡುತ್ತಿರಲಿಲ್ಲ. ನಮಗೆ ಸಮಾಜದಲ್ಲಿ ಸಿಗುವ ಸ್ಥಾನ ಎಂತಹದೆಂದು ನಿನಗೆ ಗೊತ್ತಿಲ್ಲ. ನಮ್ಮ ಜೀವನ ಅನ್ನುವುದು ಬೇರು, ಚಿಗುರು ಇಲ್ಲದೆ ಸತ್ತ ಗಿಡವಾಗಿದೆ ಗೋದಾ. ನೀನೇ ಅದಕ್ಕೆ ಜೀವದಾನ ಮಾಡಿ, ಅದರಲ್ಲಿ ಚಿಗುರು, ಕೊಂಬೆ, ಫಲಪುಷ್ಪಗಳು ಉದ್ಭವಿಸುವಂತೆ ಹೆಣಗಾಡಬೇಕು. ಉಳಿದ ಜನರಂತೆ ನಾವಾದರೂ ಸಂಸಾರ ಹೂಡಿಕೊಂಡು ಇರಬಾರದೇಕೆ ? ನಾವು ಅಂಥ ಅಪರಾಧವಾದರೂ ಮಾಡಿದ್ದೇನು ? ನೀನು ನಾನು ಹೇಳಿದಂತೆ ಕೇಳುವಿಯೆಂದು ನಂಬಿದ್ದೇನೆ. ”

“ ನೀನೇಕೆ ಇಷ್ಟು ಚಿಂತಿಸುತ್ತೀಯೆಂದು ನನಗಿನ್ನೂ ತಿಳಿಯದಮ್ಮಾ ! ನಮಗೆ ಚೌಡಪ್ಪನವರು ಯಾವುದಕ್ಕೆ ಕಡಿಮೆ ಮಾಡಿದ್ದಾರೆ ? ”

“ ಅವರು ನಮಗೆ ಎಷ್ಟು ದಿನಗಳ ವರೆಗೆ ಸಾಕಬಹುದು ? ”

"ನನಗೆ ಬುದ್ಧಿ ತಿಳಿದ ಲಾಗಾಯ್ತು ಅವರೇ ಅಲ್ಲವೇನಮ್ಮ ನಮ್ಮನ್ನು ಸಾಕಿದವರು? ನೀನೇ ಅವರನ್ನು ಕೆಲಕಾಲ ಹೊಗಳಿರಲಿಲ್ಲವೇ? ಈಗ ಲಾದರೂ ಅವರು ನಮ್ಮನ್ನು ನಡುನೀರಿಗೆ ಕೈಬಿಡುತ್ತಾರೆಯೇ? ಅವರ ಸಹಾಯವಿಲ್ಲದಿದ್ದರೆ ನಾನು ಇಷ್ಟರವರೆಗೆ ಕಲಿತು, ಮನುಷ್ಯಜೀವಿ ಎನಿಸಿಕೊಳ್ಳುತ್ತಿದ್ದನೇ? ಮೊದಲು ನಾನು ಸಣ್ಣವಳಿರುವಾಗ ಅವರ ಬಗ್ಗೆ ನನಗೆ ಜಿಗುಪ್ಸೆ ಇತ್ತು. ಸಣ್ಣವರಿರುವಾಗ ಎಲ್ಲ ಹುಡುಗರಿಗೂ ಕೆಲವರ ಮೇಲೆ ಅಂಥ ಜಿಗುಪ್ಸೆ ಇದ್ದೇ ಇರುತ್ತದೆಂದು ನನಗೆನಿಸುತ್ತದೆ. But now ನಾನ ಇಂಪ್ರೂವ್ (Improve) ಆಗಿದ್ದೇನಮ್ಮ. ಅವರಾದರೂ ನನ್ನ ಮೇಲೆ ತುಂಬ ಆದರ ತೋರಿಸುತ್ತಾರೆನ್ನುವುದು ನಿನಗೆ ಗೊತ್ತಿದೆ. ನಾನೆಂದರೆ ಅವರಿಗೆ ಪಂಚಪ್ರಾಣ. ಅವರಿಗೆ ನಾನು Next election ಗೆ ಎಸೆಂಬ್ಲಿಗೂ contest ಮಾಡಲಿಕ್ಕೆ ಹೇಳಿದ್ದೇನಮ್ಮ. ಚೌಡಪ್ಪ ರಿಯಲೀ (Really) ಒಂದು ಗ್ರೇಟ್ ಪರ್ಸನಾಲಿಟಿಯಮ್ಮ (Great Personality). ಅವರ ಬಾಡಿ (body) ನೋಡಿದರೆ ಯಾರಾದರೂ ಅವರಿಗೆ ಅಷ್ಟು ವಯಸ್ಸಾಗಿದೆಯೆಂದು ಹೇಳಬಹುದೇ? ನಿನ್ನ ಇದೇ ಈ ಶರೀರ ಕಂಡರೆ ನೂರು ವರುಷದ ಮುದುಕಿಯ ಹಾಗೆ ಕಾಣುತ್ತೀಯಮ್ಮ ನೀನು! ಇದೆಲ್ಲ ಯಾವುದರಿಂದ ಗೊತ್ತೆ? Due to worries ಅಮ್ಮಾ! ಆದ್ದರಿಂದ ನೀನು ಹಾಗೆ ಚಿಂತಿಸಬೇಡ. ಅಂತೇ ನಿನ್ನ ಆ ಸ್ವಭಾವ ನನಗೂ ಸರಿತೋರಿ ಬರುವುದಿಲ್ಲ. ....ನೀನು ಅದನ್ನು ಇಂಪ್ರೂವ್ ಮಾಡಿಕೊಳ್ಳಬೇಕಮ್ಮ" ಎಂದು ಗೋದಿ ಎಷ್ಟೋ ಹೊತ್ತಿನವರೆಗೆ ಚೌಡಪ್ಪನವರ ಹೊಗಳಿಕೆ ನಡೆಸಿ ಕೊನೆಗೆ ತಾಯಿಯ ಗುಣ ತಿದ್ದುವುದಕ್ಕೂ ಹೊರಟಳು. ಅವಳ ಮಾತುಗಳನ್ನೆಲ್ಲ ಸುಂದರಿ ಸುಮ್ಮನೆ ಕೂತುಕೊಂಡು ಕೇಳುತ್ತಿದ್ದಳು. ಪಿಟ್ಟೆಂದು ಒಂದು ಶಬ್ದವನ್ನೂ ಅವಳಿಗೆ ಉತ್ತರಿಸಲಿಲ್ಲ. ಆಗ ಗೋದಿಯೇ ಪುನಃ, "Where is your head?" ಎಂದು ಕೇಳಿದಳು.

"ಏನು? ಏನು?" ಎಂದು ಸುಂದರಿ ಬೆಚ್ಚಿ ಬಿದ್ದವರ ಹಾಗೆ ಪ್ರಶ್ನಿಸಿದಳು.

"ನಾನು ಏನು ಹೇಳಿದೆ ಗೊತ್ತೇ ನಿನಗೆ?"

"ಇಲ್ಲ ಮಗೂ, ನನ್ನ ತಲೆ ಎಲ್ಲಿಯೋ ಇತ್ತು ಇನ್ನೊಮ್ಮೆ ಹೇಳು."

"ನೀನು ಚೌಡಪ್ಪನವರನ್ನು ಹಾಗೆ ತುಚ್ಛೀಕರಿಸಬಾರದು ಅಂತ ನನ್ನ ಹೇಳಿಕೆ."

"ಅಂದರೆ? ನಿನ್ನ ಮಾತು ನನಗೆ ಅರ್ಥವಾಗದಲ್ಲ!"

"ನಾನು ಮತ್ತು ಅವರು ಯಾವಾಗಾದರೊಮ್ಮೆ ಮಾತಾಡಿಕೊಂಡು ಕುಳಿತರೆ, ನೀನು ಅಲ್ಲಿಗೆ ಬಂದು, 'ಹಾಗೆಲ್ಲ ಗೋದಿಯೊಡನೆ ಸಲುಗೆಯಿಂದ ಮಾತಾಡಬೇಡಿ! ಇದು ಒಳ್ಳೆಯದಲ್ಲ. ನೀವು ಹಿಂದೆ ಹೇಳಿದ ಮಾತು ನೆನಪಿದೆಯೇ ನಿಮಗೆ? ನೀವು ಅವಳೊಡನೆ ಹಾಗೆ ನಕ್ಕು ನಲಿಯಬಾರದು' ಎಂದು ಅವರಿಗೆ ಇನ್ಸಲ್ಟ್ (insult) ಮಾಡುತ್ತಿಯಲ್ಲ! ಹಾಗೆ ಮಾಡ ಬಾರದು ಎಂದು ನಾನು ನಿನಗೆ ಹೇಳುವುದು."

"ಹೋ, ಹೀಗೋ ನಿನ್ನ ಆಲೋಚನೆ! ನಿನಗಿನ್ನೂ ಅವರ ಸ್ವಭಾವದ ಪರಿಚಯವಾಗಿಲ್ಲ. ನಾನು ಮೊದಲಿನಿಂದಲೂ ಅವರ ವರ್ತನೆಯ ಬಗ್ಗೆ ನಿನಗೆ ಎಚ್ಚರ ಕೊಡುತ್ತಾ ಇದ್ದೇನೆ."

"ಛೀ, ಆ ಮಾತು ಆಡಬೇಡ! ಅವರೆಂದೂ ಹಾಗೆ ಮೋಸ ಮಾಡುವವರಲ್ಲ. ನಿನಗಿಂತ ಹೆಚ್ಚಿನ ಪರಿಚಯ ಅವರ ಕಾಂಡಕ್ಟದ (conduct) ಬಗ್ಗೆ ನನಗಾಗಿದೆ!"

"ಹಾಗೆ ತಿಳಿಯಬೇಡ ಗೋದಾ. ಅರಳಿದ ಹೂ ಕೈಯಲ್ಲಿದ್ದಾಗ ಮೂಸಿ ನೋಡದವನ ಮೂಗು ಕಡಿಮೆ. ಈಗೀಗ..........ಅಂದರೆ ಎರಡು ಮೂರು ತಿಂಗಳಲಾಗಾಯಿತು ಅವರು ನನ್ನ ಸಂಗವನ್ನೇ ಬಯಸುವುದಿಲ್ಲ ....ಯಾಕೋ ಏನೋ..........ದೇವರೇ ಬಲ್ಲ!.................. ನೀನು ಅವರಿಗೆ ಹೆಚ್ಚಿನ ಸಲುಗೆ ಕೊಡಬೇಡ. ತಿಳಿಯಿತೇ? ಅವರ ಸ್ವಭಾವ ನನಗೆಲ್ಲ ಗೊತ್ತು."

"ನೀನು ಹೇಳುವುದು ಕ್ವಾಯ್ಟ ಕರೆಕ್ಟ್. ಆದರೆ, ಅವರನ್ನು ನಾನೂ ನಿನ್ನಂತೆ ಇನ್ಸಲ್ಟ್ ಮಾಡಿದರೆ ಮುಂದೆ ಅವರು ನಮ್ಮ ಮನೆಗೆ ಕಾಲಿಟ್ಟಾರೇ! ನಿನಗೆ ಇನ್ನೂ Modern technique ಎಲ್ಲ ಗೊತ್ತಿಲ್ಲ!... .... ಅವರನ್ನು ನಾನು ಹೇಗೆ ನಡೆಸಿಕೊಂಡು ಬಂದಿದ್ದೇನೆ ಗೊತ್ತೇ ನಿನಗೆ? ನನ್ನ ಮನಸ್ಸು ಒಲಿಸಬೇಕೆಂದು ಅವರೆಲ್ಲ ಎಷ್ಟು ಪ್ರಯತ್ನಪಟ್ಟರು! ನನಗೆ ಎಷ್ಟು

ಆರ್ನಮೆಂಟ್ಸ್ ಪ್ರೆಸೆಂಟ್ ಕೊಟ್ಟರು! ನೀನೇನೂ ತಪ್ಪು ತಿಳುಕೊಳ್ಳಬೇಡ. I know very well how to deal with such person ತಿಳಿಯಿತೇ ನಮ್ಮ!..........ನಿನ್ನ ಮನಸ್ಸು ಏನೋ ಇರಬಹುದು—ನಾನು as early as possible ಮ್ಯಾರೇಜ್ ಮಾಡಿಕೊಳ್ಳಬೇಕೆಂದು. ಆದರೆ ನಾನು ಇಷ್ಟು ಬೇಗ ಮಾತ್ರ ಅದಕ್ಕೆ ಒಪ್ಪುವುದಿಲ್ಲ. ವಿನಾಕಾರಣ ನೀನು ಅದಕ್ಕಾಗಿ ನನ್ನನ್ನು force ಮಾಡಬೇಡ..........ಅಲ್ಲಿ ಇರಬೇಕಾದರೆ, ಆ ಮುದುಕಿ ನನ್ನ ಹಿಂದೆ ಮುಂದೆ ಡಾಗ್ (dog) ಓಡಾಡಿದ ಹಾಗೆ ಓಡಾಡುತ್ತಿದ್ದಳು. ಅವಳಾದರೂ ನಿನ್ನ ಹಾಗೆ ಉಪದೇಶ ಮಾಡುತ್ತಿದ್ದಳಮ್ಮ. ನಿಮ್ಮ ಈ ಎಲ್ಲ ತರಹದ ನಡತೆ ಲಂಯ್ಕು (like) ಆಗುವುದಿಲ್ಲ.......... ನೀನು ಏನೇ ಹೇಳು, I know ಚೌಡಪ್ಪಾ's mind. ನೀನು ತಿಳಿದುಕೊಂಡಷ್ಟು ಕೀಳು ಮನುಷ್ಯ ಅವರಲ್ಲ "

"ನೀನು ಹೇಳುತ್ತಿಯೆಂದು ನಾನು ಹಾಗೆಲ್ಲ ನಿನಗೆ ಸಿಕ್ಕಂತೆ ಅವರೊಡನೆ ವರ್ತಿಸಲು ಎಡೆಕೊಡಲಾರೆ..........ನೋಡು, ಮತ್ತು ನಿನ್ನ ಖುಷಿ ಕಂದಾ..........ಎಷ್ಟೆಂದರೂ ಅವರು ದೊಡ್ಡವರು ಈ ಊರಿಗೇ ಅವರು ದೊಡ್ಡವರು.......... ನಾನಾದರೂ ನಿನ್ನನ್ನು ಎಷ್ಟೆಂದು ಕಾಯಲಿ? ನನ್ನ ಇಡೀ ಜೀವನದ ಧ್ಯೇಯ ನಿನ್ನ ಮುಂದೆ ಇಟ್ಟಿದ್ದೇನೆ.......ಅದಕ್ಕಾಗಿ ನಾನು ನನ್ನ ಕೈಯಿಂದ ಆದಷ್ಟು ಪ್ರಯತ್ನ ಮಾಡುವವಳೇ. ಚೌಡಪ್ಪನವರಿಗೆ ಹೇಳುವುದಾದರೂ ನಾನು ಅದನ್ನೇ. ಹೇಗಾದರೂ ಮಾಡಿ ನನ್ನ ಗೋದಿಗೊಂದು ಯೋಗ್ಯ ದಾರಿ ತೋರಿಸಿ ಕೊಡಿ—ಎಂದು ನಾನು ಅವರಿಗೆ ಎಷ್ಟೋ ಸಲ ಹೇಳಿದ್ದೇನೆ" ಎಂದು ಸುಂದರಿ ತನ್ನ ಮಗಳಿಗೆ ಸಾಕಷ್ಟು ಬುದ್ಧಿ ಹೇಳಿದ್ದಳು. ಆದರೆ ಆಕೆ ಮಾತ್ರ ಸುಂದರಿಯ ಮಾತಿಗೆ ಒಪ್ಪಿರಲಿಲ್ಲ. ಅವಳು ಹಾಗೆ ಒಪ್ಪುವಂತೆಯೂ ಸುಂದರಿಗೆ ಕಾಣಿಸಲಿಲ್ಲ.

ಇದನ್ನೆಲ್ಲ ನೆನೆದು ಸುಂದರಿಗೆ ಬದುಕಿನ ಮೇಲಿನ ವಿಶ್ವಾಸವೇ ಕಳೆದು ಹೋಗುವಂತಾಗಿತ್ತು. ಆಕೆ ಕೂತಕೂತಲ್ಲೇ ಇದೇ ವಿಚಾರವನ್ನು ನೆನೆದು ಮನಸ್ಸಿನಲ್ಲೇ ಮರುಗತೊಡಗಿದ್ದಳು. ಮನುಷ್ಯನಿಗೆ ಶಿಕ್ಷಣದಿಂದ ದೊರೆಯುವ ಸಂಸ್ಕಾರವೆಂಬುದೇ ಸುಳ್ಳು ಎಂದು ಅವಳಿಗೆ ಖಂಡಿತವಾಗಿತ್ತು. ಯಾಕಂದರೆ ಸ್ವತಃ ತನ್ನ ಮಗಳಿಗೆ ಅದರಿಂದ ದೊರೆತ ಸಂಸ್ಕಾರವೆಂತಹದೆಂ

ಬುದು ಅವಳಿಗೆ ಗೊತ್ತಾಗಿತ್ತು. ಅಂತೇ ಮನುಷ್ಯನ ಸ್ವಭಾವವಾದರೂ ಹೇಗೇ ಪರಿವರ್ತನೆಗೊಳ್ಳುತ್ತದೆಂದು ನಿರ್ದಿಷ್ಟವಾಗಿ ಹೇಳುವುದು ಅಸಾಧ್ಯ. ಪ್ರಕೃತಿಯಲ್ಲಿಯ ಹಣ್ಣುಹಂಪಲುಗಳ ಪರಿವರ್ತನೆಯಂತೆ ಮಾನವ ಸ್ವಭಾವ ಪರಿವರ್ತನೆಗೊಳ್ಳುತ್ತದೆ. ಕಹಿಯಾದ ಕಾಯಿಯೊಂದು ಅತಿ ಮಧುರವಾದ ಹಣ್ಣಾಗಬಹುದು. ಅಂತೇ ಸಿಹಿಯಾದ ಮಿಡಿಯೊಂದು ಬೆಳೆದು ಬೆಳೆದು ಕಹಿ ವಿಷವಾಗಲೂ ಬಹುದು. ಹೀಗೇ ಮಾನವ ಸ್ವಭಾವ. ಚಿಕ್ಕಂದಿನಲ್ಲಿ ಹೇಗೆ ಇದ್ದಳು ಗೋದಿ! ಅವಳ ಮಾತೃಪ್ರೇಮವೆಂತಹದ್ದು! ತನ್ನನ್ನು ಬಿಟ್ಟು ಕೆಲವೊಂದು ದಿನಗಳಲ್ಲಿ ಆಕೆ ಊಟ ಕೂಡಾ ಮಾಡದ್ದು ಇದೆ. ಆದರೆ ಈಗಿನ ಗೋದಿಯೇ ಬೇರೆ! ಅವಳು ಹೇಳಿದಂತೆಯೇ ತಾನು ಕೇಳಬೇಕೆಂದು ವಾದ ಬೇರೆ ಹೂಡುತ್ತಾಳೆ! ನಿಜ, ಮುದುಕಿ ಹೇಳಿದ ಮಾತಿನಲ್ಲಿ ಅಪಾರವಾದ ಸತ್ಯ ತುಂಬಿದೆ. 'ನಾವು ನೆನೆಯುವುದೊಂದು, ದೈವ ಬಗೆಯುವುದು ಮತ್ತೊಂದು' ಎಂದು ಸುಂದರಿ ಅದೃಷ್ಟದ ಮೇಲೆಯೂ ಅಪವಾದ ಹೊರಿಸಿದಳು.

ಗೋದಿಯ ಪಕ್ಷಕ್ಕೆ ಚೌಡಪ್ಪನವರೂ ಆಗಾಗ ಸೇರಿ, ಸುಂದರಿಯೊಡನೆ ವಾದಿಸುತ್ತಿದ್ದರು. ಇವರೆಲ್ಲರ ಮಧ್ಯ ತಟಸ್ಥ ಧೋರಣೆಯನ್ನು ವಹಿಸುವವಳೆಂದರೆ ಮುದುಕಿ. ಆಕೆ ತನ್ನ ಮಗಳ ಚಿಂತೆಯಲ್ಲೇ ಈಗಿನ ದಿವಸಗಳನ್ನು ಕಳೆಯುತ್ತಿದ್ದಳು. ಅವಳ ಮಗಳು ಇತ್ತೀಚೆಗೆ ಪಕ್ಷವಾತದಿಂದ ಬಳಲತೊಡಗಿದ್ದಳಂತೆ. ಹೀಗಾಗಿ ಆಕೆ ಹೆಚ್ಚಿನ ದಿನಗಳನ್ನು ತನ್ನ ಅಳಿಯನ ಮನೆಯಲ್ಲೇ ಕಳೆಯಬೇಕಾಗುತ್ತಿತ್ತು.

ಚೌಡಪ್ಪನವರು ಬಂದಾಗಲೇ ಒಮ್ಮೆ ಗೋದಿಯ ಮುಂದಿನ ಭವಿಷ್ಯತ್ತಿನ ಬಗ್ಗೆ ಸುಂದರಿ ಮಾತೆತ್ತಿದಳು. ತಾಯಿ ಮಗಳು ತುರುಸಿನ ಚರ್ಚೆ ನಡೆಸಿರುವುದನ್ನು ನೋಡಿ ಚೌಡಪ್ಪನವರೂ ಅದರೊಳಗೆ ಸೇರಿಕೊಂಡರು. ಅಂತೇ ಗೋದಿಯ ಪಕ್ಷವನ್ನು ವಹಿಸಿಯೂ ಆಯಿತು.

"ಹೀಗೇ ಇದ್ದು ಜೋಗತಿಯಾಗುತ್ತಿಯೇನೆ?" ಎಂದು ಸುಂದರಿ ಮಗಳಿಗೆ ಸ್ವಲ್ಪ ಬಿರುಸಾಗಿಯೇ ಕೇಳಿದಳು.

"ನೀನು ಹಾಗೆಲ್ಲ ಮಾತಾಡಬೇಡ ಅಮ್ಮಾ! ನಾನು ಮತ್ತು

ಮುಂದೇನು ಮಾಡುತ್ತೇನೋ ಗೊತ್ತಿಲ್ಲ!" ಎನ್ನುತ್ತ ಗೋದಿ ಮೂದಲಿಸು ತ್ತಿದ್ದಳು. ಆಗ ಚೌಡಪ್ಪ, "ಏನೇ ಗೋದಿ ಅದು? ಅದೇನು ಅಂಥ ಗಂಭೀರ ವಿಷಯದ ಚರ್ಚೆ ನಡೆದಿದೆ?" ಎಂದು ಗೋದಿಗೆ ಕೇಳಿದರು.

"ನೀವು ನಮ್ಮ ಮಾತಿನಲ್ಲಿ ಮೂಗು ಹಾಕುವುದು ಬೇಡ" ಎಂದು ಸುಂದರಿ ಅವರಿಗೆ ಎಚ್ಚರಿಸಿದಳು. ಆದರೆ ಅವರು ಅವಳ ಮಾತಿಗೆ ಹೆಚ್ಚಿನ ಮಹತ್ವ ಕೊಡಲಿಲ್ಲ. ಬದಲು, "ಈಗೀಗ ಸುಂದರಿಗೂ ಕೂತಲ್ಲೇ ಸ್ವಲ್ಪ ಸ್ಕ್ರೂ ಲೂಸ್ (Loose) ಆಗಲಿಕ್ಕೆ ತೊಡಗಿದೆಯೆಂದು ಕಾಣುತ್ತದೆ. ಅವ ಳಿಗೆ ಪಾಪ ಯಾವಾಗಲೂ ಏನೋ ಪಿರಿಪಿರಿ ಮಾಡುತ್ತ ಕುಳಿತಿರುತ್ತಾಳೆ! ತನ್ನ ಕೈಯಿಂದ ಏನೂ ಸಾಧ್ಯವಿಲ್ಲ. ವಯಸ್ಸಾಗದಿದ್ದರೂ ಮುದುಕಿಯಾಗಿ ಆಯಿತು. ನಿನ್ನ ಈ ವಯಸ್ಸಿನಲ್ಲಿ ನೀನು ಹೇಗೆ ಹಾರಾಡುತ್ತಿದ್ದಿ? ಆ ಆ ವಯಸ್ಸಿಗೆ ಅದು ಅದು ಆಗಲೇ ಬೇಕು.........ಈಗ ಒಂದೆರಡು ತಿಂಗಳಿಂದ ಅಂತೂ ನಿನ್ನ ತಲೆಯೇ ಕೆಟ್ಟಿದೆಯೆಂದು ನನಗೆ ಖಾತ್ರಿಯಾಗಿದೆ ಸುಂದರೀ! ಅದಕ್ಕಾಗಿಯೇ ನಾನು ನಿನ್ನೊಡನೆ ವಿಶೇಷ ಮಾತಾಡುವುದಿಲ್ಲ. ನೀನು ಯಾವ ಕೆಲಸ ಮಾಡದೆ, ಸುಮ್ಮನೆ ಮನೆಯಲ್ಲಿ ಬಾಲ ಮಡಚಿದ ನಾಯಿಯ ಹಾಗೆ ಬಿದ್ದುಕೊಳ್ಳಬಾರದೇ! ಆ ಹುಡುಗಿಗೆ ಯಾಕೆ ತ್ರಾಸು ಕೊಡುತ್ತಿ? ಅವಳಿನ್ನೂ ಬೆಳೆಯುವ ಹುಡುಗಿ........ನಿನ್ನಿಂದ ಇನ್ನು ಏನು ಸಾಧ್ಯವಿದೆ? ನಿನ್ನ ಮುಖವೆಲ್ಲ ನೆರಿಗೆ ಬಿದ್ದು ಹೋಯಿತು!.......... ಸುಮ್ಮನೆ ಇರಬಾ ರದೇ?" ಎಂದು ಚೌಡಪ್ಪ ತುಸು ನಾಲಗೆ ಉದ್ದ ಬಿಟ್ಟೇ ಸುಂದರಿಗೆ ಬುದ್ಧಿ ಹೇಳಿದರು.

ಆಗ ಸುಂದರಿಯ ಮುಖದ ಮೇಲೆ ವಿಕಟವಾದ ನಗು ಮೂಡಿತು. ಅವಳ ಮನಸ್ಸು ರಕ್ಕಸನಂತೆ ಭೀಕರವಾಯಿತು. ಮನದ ಭೀಕರತೆಯನ್ನು ಬಾಯಿಯೂ ವ್ಯಕ್ತಪಡಿಸದೆ ಬಿಡಲಿಲ್ಲ.

"ನನ್ನಿಂದ ಏನಾಗುತ್ತದೆ ಅನ್ನುತ್ತೀರಾ? ಹೋ ಹೋ! ನೀವು ದೊಡ್ಡ ಗಂಡಸು ಕಾಣುತ್ತದೆ! ನಾನು 'ಈಗ ಇಲ್ಲಿಂದ ಹೊರಗೆ ಬೀಳು!' ಎಂದರೆ ಸಾಕು. ನಿಮಗೆ ಇಲ್ಲಿ ನಿಲ್ಲುವ ಧೈರ್ಯವಿದೆಯೇ? ನಿಮ್ಮಲ್ಲಿ ಗಂಡಸುತನವಿದೆಯೇ? ಇದೇಯೇ ನಿನ್ನಲ್ಲಿ ಗಂಡಸುತನ?" ಎಂದು ಬಲ ವಾಗಿ ಬೊಬ್ಬಿರಿದು ಕೇಳಿದಳು. ಚೌಡಪ್ಪನವರ ಮುಖದ ಮೇಲೆ ಹೆದರಿ

ಕೆಯು ಪರದೆ ಇಳಿಯಿತು. "ಇವಳಿಗೆ ತಲೆ ಕೆಟ್ಟಿದೆ" ಎಂದೂ ಅವರು ತೀರ್ಮಾನಿಸಿದರು. ಅಲ್ಲಿಂದ ಹೊರಡುವುದೇ ಉಚಿತವೆಂದು ಬಗೆದರು. ಅದಕ್ಕಾಗಿ ತಯಾರಿಯೂ ನಡೆಯಿತು.

ಅಷ್ಟರಲ್ಲಿ ಸುಂದರಿಯ ಮನಸ್ಸಿನ ಸ್ಥಿತಿಯೇ ಬದಲಿಸಿತು. ಯಾವುದೋ ಒಂದು ಆಳಿಯಲಾರದ ಹುಣ್ಣು ಆ ಮನಸ್ಸಿಗಾಗಿತ್ತು. ಅದು ಈಗ ಮರಕ ಳಿಸಿದಂತೆ ಅವಳಿಗನಿಸಿರಬೇಕು ಆಕೆಯ ಸ್ವರ ದೀನವಾಯಿತು.

"ಹೌದು, ನನ್ನ ಅಪರಾಧ!............ ನೀವಾದರೂ ಏನು ಮಾಡ ಬಹುದು? ಆ ಹನುಮನೇ ಅದನ್ನು ಕ್ಷಮಿಸಬೇಕು........" ಎನ್ನುತ್ತ ಆಕೆ ಅಲ್ಲಿಂದ ಎದ್ದಳು. "ಇವಳನ್ನು ಆಸ್ಪತ್ರೆಗೆ ಹಾಕುವುದು ಒಳ್ಳೆಯದು" ಎಂದು ಅವರು ಗೋದಿಗೆ ಹೇಳಿದರು. "ನೀವೇನು ಅವಳ ಬಗ್ಗೆ ಹೆದರ ಬೇಡಿ" ಎಂದು ಗೋದಿ ಅವರಿಗೆ ಆಶ್ವಾಸನವಿತ್ತಳು.

ಆದರೆ ಸುಂದರಿ ಮಾತ್ರ ಸಹಸ್ರಾರು ಕಲ್ಪನೆಗಳನ್ನು ತಲೆಯಲ್ಲಿ ತುಂಬಿ ಸಿಕೊಂಡು, ಹುಚ್ಚಳಂತೆ ಅಲ್ಲಿಯೇ ನಿಂತಿದ್ದಳು. ಚೌಡಪ್ಪ ಅವಳನ್ನು ನೋಡದೆ ಹೊರಟರು.

ಒಂಬತ್ತನೆಯ ಅಧ್ಯಾಯ

ಮುದುಕಿಯ ಬಾಳಿನ ಕೊನೆಯಾಯಿತೆಂದು ಅವಳಿಗೇ ಖಾತ್ರಿ ಯಾಗಿದೆ ತಾನಿನ್ನು ಉಳಿದು ಮಾಡುವುದಾದರೂ ಏನೆಂದು ಆಕೆಯೇ ಹೇಳುತ್ತಾಳೆ. ತಾನು ಯಾವಳ ಸಲುವಾಗಿ ಈ ಪರಿಯ ವೇಷ ಧರಿಸಬೇ ಕಾಯಿತೋ ಅವಳೇ ಈಗ ಇಲ್ಲ. ಆದರಿಂದಾಗಿ ತನ್ನ ಬಾಳಿನ ಒಂದು ಬದಿಯೇ ಬಿದ್ದಂತಾಗಿದೆ. ತನ್ನನ್ನು ಯಾವ ಮನೆಯ ಆಧಾರದ ಕಂಬ ಮಾಡಲು ಸಾಧ್ಯವಿದೆ? ತಾನು ಎಷ್ಟೆಂದರೂ ಬೇಲು ಸತ್ತ ಬಳ್ಳಿ. ಜಗತ್ತಿ ನಲ್ಲಿ ಯಾರಿಗಾದರೂ ದುಃಖವೆಂಬುದು ಇರುವುದಾದರೆ ಅವರು ತನ್ನನ್ನು ನೋಡಿ ಮರೆಯಬೇಕು. ತನಗಿಂತ ಹೆಚ್ಚಿನ ದುಃಖ ಅದಾರಿಗೂ ಈ

ಲೋಕದಲ್ಲಿ ಸಿಕ್ಕಿರಲಿಕ್ಕಿಲ್ಲವೆಂಬುದು ಅವಳ ಭಾವನೆ. ತನ್ನ ಕಣ್ಣಮುಂದೆಯೇ ತನ್ನವರ ಸಾವು ಕಾಣಬೇಕಾದರೆ ತಾನೆಷ್ಟು ಪಾಪಿಯೆಂದು ಅವಳೇ ಚಿಂತಿಸ ತೊಡಗಿದ್ದಾಳೆ. ಅವಳ ಕುರುಡಿ, ಕುಂಟಿಯಾದ ಮಗಳ ಸಾವು ಆಗಿ ಇದೇ ತಿಂಗಳಾಗುತ್ತ ಬಂದಿದೆ. ರತ್ನದಂಥ ಎಷ್ಟೋ ಮಕ್ಕಳನ್ನು ಹೆತ್ತ ಆಕೆಯು ಹೊಟ್ಟೆಯೊಳಗಿನ ವಾತ್ಸಲ್ಯದ ತಾವುಗಳೆಲ್ಲ ಬರಿದಾಗಿವೆ. ದೇವರು ಮಕ್ಕಳನ್ನು ಕೊಡಬಾರದು. ಕೊಟ್ಟು ಹೀಗೆ ಮೋಸ ಮಾಡಬಾರದು ಎಂದಾಕೆ ಮನದೊಳಗೆ ಮರುಗಿಯೇ ಮರಗುತ್ತಾಳೆ. ಸಿಕ್ಕವರೊಡನೆಲ್ಲ ತನ್ನ ಹಿಂದಿನ ಗೋಳಿನ ಕಥೆಯನ್ನು ಕಕ್ಕುತ್ತಾಳೆ. ತನಗೆ ಯಾವಾಗ ಯಮದೂತರು ಕರೆದೊಯ್ಯಲು ಬರುವರೆಂದು ಎಲ್ಲರೊಡನೆಯೂ ಕೇಳುವುದು ಆಕೆಯ ಕೆಲಸ. ಆತ್ಮಹತ್ಯ ಮಾಡಿಕೊಳ್ಳಬೇಕೆಂದರೂ ಮನಸ್ಸು ಬರುವುದಿಲ್ಲ. ಇನ್ನೆಷ್ಟು ದೇವರು ತನಗೆ ದುಃಖ ಕೊಡುವನೋ ಏನೋ! ಆದನ್ನು ಅನುಭವಿಸುವುದಕ್ಕಾಗಿಯೇ ತನಗೆ ಆ ಭೀರುತ್ವ ಬರುತ್ತದೆಂದು ಆಕೆಯ ಮತ

ಮಗಳ ಸಾವಿನ ತರುವಾಯ ಆಕೆ ಅಳಿಯನ ಮನೆಗೆ ಹೋಗಲಿಲ್ಲ. ಹೋಗುವ ಮನಸ್ಸೂ ಅವಳಿಗೆ ಇರಲಿಲ್ಲ. ಕಾರಣ ಸುಂದರಿಯ ಮನೆಯ ಹತ್ತಿರದ ಗುಡಿಸಲಲ್ಲೇ ಕಾಲ ಕಳೆಯುತೊಡಗಿದಳು. ತನಗೀಗ ಯಾರ ಹಂಗೂ ಇಲ್ಲ. ಮೇಲಿರುವ ಆಕಾಶ, ಕೆಳಗಿರುವ ಭೂಮಿಯೇ ತನಗೆ ಗತಿ. ತಾನು ಯಾರಿಗೇಕೆ ಹೆದರಬೇಕು? ಎಂದಾಕೆ ಚೌಡಪ್ಪನವರಿಗೂ ಧೈರ್ಯದಿಂದ ಆ ದುಃಖದಲ್ಲಿಯೂ ಪ್ರಶ್ನಿಸಿದ್ದಳು. ಅವರು ಆಕೆಯ ಬಗ್ಗೆ ಹೆಚ್ಚಿನ ಕಾಳಜಿ ತೋರಿಸಲಿಲ್ಲ "ನೀನು ಮನೆ ಬಿಟ್ಟು ಹೋಗೆಂದು ನಾನು ಹೇಳುವುದಿಲ್ಲ" ಎಂದು ತಮ್ಮ ಅಪೂರ್ವದ ಔದಾರ್ಯವನ್ನು ಅವಳಿಗೆ ತೋರಿಸಿದರು. ಮುದುಕಿಗೆ ಅವರ ಮಾತು ಎಷ್ಟರಮಟ್ಟಿಗೆ ಅರ್ಥವಾಗಿತ್ತೆಂದು ಹೇಳುವುದು ಕಷ್ಟ. ಆಕೆ ತನ್ನ ದುಃಖದ ಬಾವಿ ಬರಿದು ಮಾಡುವುದರಲ್ಲೇ ತೊಡಗಿದ್ದಳು.

ಇಂಥ ಸಮಯದಲ್ಲೇ ಸುಂದರಿಗೆ ಆ ಮುದುಕಿಯ ಸಂಪೂರ್ಣ ಇತಿಹಾಸ ಗೊತ್ತಾಗತೊಡಗಿತ್ತು. ಅವಳಿಗಾದರೂ ಮನಸ್ಸಿನಲ್ಲಿ ಹುದುಗಲಾರದ ದುಃಖವಿತ್ತು. ಆದರೆ ಮುದುಕಿಯ ಗೋಳನ್ನು ಕೇಳುತ್ತ ಅದನ್ನು ಆಕೆ ಮರೆಯಲು ಪ್ರಯತ್ನಿಸುತ್ತಿದ್ದಳು. ಅಲ್ಲದೆ ಮುದುಕಿ ತನ್ನ ಮನೆಯಲ್ಲಿ

ಕೆಲವು ದಿವಸಗಳಿಂದ ಅಡುಗೆ ಬಿಟ್ಟು ಒಲೆಯೊಳಗೆ ಬೆಂಕಿ ಕೂಡಾ ಹೊತ್ತಿಸಿರಲಿಲ್ಲ. ಕಾರಣ ಸುಂದರಿಯೇ ತನ್ನ ಮನೆಯ ಊಟವನ್ನು ಅವಳಿಗೆ ನೀಡಬೇಕಾಗಿತ್ತು. ಅವಳ ದುಃಖ ಸ್ವಲ್ಪ ಹಳೆಯದಾಗುವ ತನಕ ಹಾಗೆ ಮಾಡಿದರಾಯಿತೆಂದು ಸುಂದರಿ ನಿರ್ಧರಿಸಿದ್ದಳು. ಮತ್ತು ಸುಂದರಿಗೆ ಹಿಂದೆ ಎಂದೂ ತಿಳಿಯದ ಎಷ್ಟೋ ವಿಷಯಗಳು—ಅವಳ ಬಗ್ಗೆ ಮುದುಕಿಯ ಬಾಯಿಯಿಂದಲೇ ತಿಳಿಯುತ್ತಿದ್ದವು. ಮೂಕಿಯಾಗಿ ಸುಂದರಿ ಅದನ್ನೆಲ್ಲ ಕೇಳುತ್ತಿದ್ದಳು.

ಅಂದು ಸಂಜೆ ಸುಂದರಿ ತಾನಾಗಿಯೇ ಮುದುಕಿಯ ಮನೆಗೆ ಹೋದಳು. ಗೋದಿ ಮಾತ್ರ ತನಗೆ ತಲೆನೋವು ಎಂದು ಹೇಳಿ ಮನೆಯೊಳಗೆ ತನ್ನ ಕೋಣೆಯಲ್ಲಿ ಮಲಗಿದ್ದಳು. ಸುಂದರಿ ಹೋಗಿ ಕೂತೊಡನೆ ಮುದುಕಿ ತನ್ನ ಕಥೆಯನ್ನೇ ಪ್ರಾರಂಭಿಸಿಯಾಯಿತು. ಆಕೆಗೆ ಹೇಳಿದ್ದನ್ನೇ ಹೇಳಿಯೂ ಬೇಸರವಿಲ್ಲ. ಸುಂದರಿಗಾದರೂ ಕೇಳಿದ್ದನ್ನೇ ಕೇಳಿಯೂ ಬೇಸರವಿಲ್ಲೆಂದೇ ಹೇಳಬೇಕು.

"ನನಗೂ ಸುಂದರೀ, ನಿನ್ನ ಈ ಗೋದಿಗಿಂತ ನೂರು ಮಡಿ ರೂಪವತಿಯಾದ ಮಗಳಿದ್ದಳು" ಎಂದು ಮುದುಕಿ ತನ್ನ ಬಾಳಿನ ಕಥೆಯನ್ನು ಹೇಳತೊಡಗಿದಳು. ಸುಂದರಿ ಸುಮ್ಮನೆ ಕೂತು ಅದನ್ನೆಲ್ಲ ಕೇಳುತ್ತಿದ್ದಳು.

"ನನ್ನ ಈ ಹೊಟ್ಟೆ ಹನ್ನೆರಡು ಮಕ್ಕಳನ್ನು ಹೆತ್ತದ್ದು! ಆದರೆ ಹನ್ನೆರಡನೆಯ ಪುಷ್ಪವೂ ನನ್ನ ಪಾಲಿಗೆ ಸಿಗಲಿಲ್ಲ. ದೇವರಿಗೆ ನಾನು ತೃಪ್ತಿಯಿಂದ ಇರುವುದು ಬೇಡವಾಯಿತು. ಮನುಷ್ಯರ ಹಾಗೆಯೇ ಅವನಿಗೂ ಹೊಟ್ಟೇಕಿಚ್ಚು ಇದೆಯೆಂದು ಕಾಣುತ್ತದೆ. ಎಂಥೆಂಥ ಮಕ್ಕಳನ್ನು ಕೊಟ್ಟಿದ್ದನೆಂದಿ ಸುಂದರೀ? ಅವುಗಳನ್ನೆಲ್ಲ ಒಯ್ದು; ಬಿಡಲಿಲ್ಲ. ಅವುಗಳೊಡನೆ ನನ್ನ ಹಣೆಯ ಕುಂಕುಮವನ್ನೂ ಉಜ್ಜಿ ಬಿಟ್ಟ! ನಾನೇನು ಮಾಡಬೇಕು? ನನ್ನ ಈ—ಮೊನ್ನೆ ಹೋಯಿತಲ್ಲ—ಜನರೆಲ್ಲ 'ಕುರುಡಿ' 'ಕುಂಟಿ' ಎಂದು ಕರೆಯುತ್ತಿದ್ದರಲ್ಲ—ಈ ಮಗಳಿಗೆ ಹತ್ತು ವರುಷ ಪ್ರಾಯವಾದಾಗ ನನ್ನ ಸೌಭಾಗ್ಯವನ್ನೂ ಕಸೆದುಕೊಂಡು ಹೋದ ಆ ದೇವರು.

"ಮಗಳನ್ನು ಸಾಕಿದೆ. ನನ್ನಲ್ಲಿ ಸ್ವಲ್ಪ ಹಣವೂ ಇತ್ತು. ಅದನ್ನೆಲ್ಲ

—ಚೌಡಪ್ಪನವರಿಗಾಗಲೀ.........ತಿಳಿದಂತಾಯಿತು !........ಸುಂದರೀ, ಚೌಡಪ್ಪನವರು ಸಿದ್ದಪ್ಪನಿಗೆ ಕೊಟ್ಟ ಶಿಕ್ಷೆ ಎಂತಹದ್ದೆಂದು ನಿನಗೆ ನೆನಪಿರಬಹುದು. ....ನಿನಗೆ ಗೊತ್ತಿರಬಹುದು. ನನಗೆ ಈಗಲಾದರೂ ಚೌಡಪ್ಪನವರ ಮೂರ್ಖತನಕ್ಕೋ........ಅಥವಾ ನನ್ನ ಮರುಳತನಕ್ಕೋ........ ಬಹಳ ಕೆಡಕೆನಿಸುತ್ತದೆ............ಇದರಲ್ಲಿ ಯಾರು ಮಾಡಿದ ಅಪರಾಧ ಹೆಚ್ಚಿನದ್ದೆಂದು ನನಗೇ ತಿಳಿಯುವುದಿಲ್ಲ............ಪ್ರಾಯಶಃ ನನ್ನ ಅಪರಾಧ ಹೆಚ್ಚಿನದ್ದೆಂದು ನನಗೆನಿಸುತ್ತದೆ............ಅಂಥ ಅನ್ಯಾಯ ಮಾಡಲಿಕ್ಕೇ ದೇವರು ನನ್ನನ್ನು ಉಳಿಸಿದನೆಂದು ನನಗೊಮ್ಮೊಮ್ಮೆ ಅನಿಸುತ್ತದೆ.........ನಾನಿನ್ನೇನೂ ಬಹಳ ದಿವಸ ಉಳಿಯುವುದಿಲ್ಲ ಸುಂದರೀ........ಇನ್ನು ಸತ್ತರೂ ನನಗೆಷ್ಟೋ ತೃಪ್ತಿ ಸಿಕ್ಕೀತು, ಯಾಕೆ? ನಕ್ಕಾಯಿತು............ನನ್ನ ಹೃದಯವೀಗ ಎಷ್ಟೋ ಹಗುರವಾಗಿದೆ. ಆದರೆ ಸುಂದರೀ, ಚೌಡಪ್ಪನವರ ಮೇಲೆ ಮಾತ್ರ ನನಗೆ ನಂಬಿಗೆ ಇಲ್ಲ........ಅವರದೂ ನಿನ್ನ ಮಗಳದೂ ಸ್ನೇಹ ಬಹಳವಾಗಿದೆ........ ಅವರು ನಿನ್ನ ಜೀವನವನ್ನು ಹಾಳು ಮಾಡಿದಂತೆ, ನಿನ್ನ ಮಗಳ ಜೀವನವನ್ನೂ ಹಾಳು ಮಾಡಬಾರದು ನಿಜ. ಅವರಾಗಿಯೇ ಅದನ್ನು ನನ್ನೊಡನೆ ಎಷ್ಟೋ ಸಲ ಹೇಳಿದ್ದರು. ಆದರೆ....ಏನು ಮಾಡುವುದು? ನಿನ್ನ ಮಗಳ ಬುದ್ಧಿ ಬದಲಾಗಿದೆ! ಮನುಷ್ಯರ ಸ್ವಭಾವ ಪರಿವರ್ತಿಸುವ ಯಂತ್ರವೆಲ್ಲಿಯಾದರೂ ಉಂಟೇ? ಸಣ್ಣವಳಿರುವಾಗ ಗೋದಿ ಹೇಗಿದ್ದಳು? ಅವಳ ಗುಣವೆಂತಹದ್ದು? ಈಗಿನ ಗೋದಿ ಹೇಗೆ ಆಗಿದ್ದಾಳೆ!........ನೀನಾದರೂ ಅವಳಿಗೆ ಎಷ್ಟು ಹೇಳಬಹುದು? ಕಟ್ಟಿಕೊಟ್ಟ ಬುತ್ತಿ, ಹೇಳಿಕೊಟ್ಟ ಬುದ್ಧಿ ಎಷ್ಟು ದಿನ ಬಂದೀತು?........ ನಿಜ ಸುಂದರೀ, ಮನುಷ್ಯರ ಜೀವನವೇ ಹೀಗೆ....ನಾವು ತಿಳಿಯುವುದು ಒಂದು. ಅದು ಆಗುವುದು ಮತ್ತೊಂದು! ....ಯಾರಾದರೂ ತಿಳಿದಿದ್ದರೇ ಗೋದಿ ಹೀಗಾಗುತ್ತಾಳೆಂದು?

" ಸುಂದರೀ, ಇಡೀ ಜೀವಮಾನದಲ್ಲೇ ಒಂದೇ ಒಂದು ಪಾಠ ಕಲಿಯುವುದು ಅನೇಕರಿಗೆ ಅಸಾಧ್ಯವಾಗುತ್ತದೆ. ಅದಕ್ಕಾಗಿ ಇಡೀ ಜೀವನವೇ ಹಾಳಾಗಿ ಹೋದರೂ ಅವರಿಗೆ ಕೆಡಕೆನಿಸಿಸುವುದಿಲ್ಲ. ಚೌಡಪ್ಪ ನಿಜಕ್ಕೂ ನಮ್ಮೆಲ್ಲರಿಗಿಂತ ನಿಪುಣರು. ಅವರಷ್ಟು ಬುದ್ಧಿವಂತರು ಈ ಊರಲ್ಲೇ ಕಡಿಮೆ. ಆದರೆ ಪ್ರತಿಯೊಬ್ಬರಿಗೂ ಏನೋ ಒಂದು ದೋಷ ಅಂಟಿಕೊಂಡಿ

ರುತ್ತದೆ. ಅದನ್ನು ತೆಗೆದೊಗೆಯಲು ಆತ ಪ್ರಯತ್ನಿಸಿದರೂ ಅವನಿಂದ ಸಾಧ್ಯವಾಗುವುದಿಲ್ಲ........ ಚೌಡಪ್ಪನವರ ಮೇಲೆ ದೋಷ ಹೊರಿಸುವುದು ನನಗೇಕೋ ಸರಿಯೆನಿಸದು.....ನಿನ್ನ ಮಗಳು ನಿನ್ನನ್ನೇ ಈಗ ಹೇಗೆ ನಡೆಸಿಕೊಂಡು ಹೋಗುತ್ತಿದ್ದಾಳೆಂದು ನಿನಗೇ ಗೊತ್ತಿದೆ" ಎಂದು ಮುದುಕಿ ಹೇಳುವಾಗ ಸುಂದರಿ 'ಗೊಳೋ' ಎಂದು ಅಳುತ್ತ ಅವಳ ಹತ್ತಿರ ಬಿದ್ದಳು. "ಅಳಬೇಡ, ಅಳಬಾರದು" ಎನ್ನುತ್ತ ಮುದುಕಿ ಅವಳಿಗೆ ಸಮಾಧಾನ ಹೇಳಿಯೇ ಹೇಳಿದಳು.

"ನಿಜಕ್ಕೂ ನೀನು ನನ್ನ ತಾಯಿಯ ಸಮಾನ ಮುದುಕೀ" ಎಂದು ಸುಂದರಿ ಅಳುತ್ತಲೇ ಹೇಳಿದಳು. ಮುದುಕಿಯ ಕರುಳು ಕರಗಿತು. ಅದರಲ್ಲೂ ಸುಂದರಿ, "ಅವರು ನನ್ನ ಮೈ ಮುಟ್ಟದೆ ಎರಡು ವರುಷ ದಾಟಿದವು ! ಅಜ್ಜೀ.........ದಾಟಿದವು" ಎಂದು ಹೇಳುವಾಗ ಮುದುಕಿಗೆ ಅಲ್ಲಿ ಕೂಡುವದಕ್ಕಾಗಲಿಲ್ಲ. "ಹೊತ್ತಾಯಿತು, ಸುಂದರೀ ಹೋಗು. ಊಟ ಮಾಡು-ನಾನೂ ಈಗ ಬರುತ್ತೇನೆ...........ಬಹುಶಃ ನಾಳೆ ನಾನು ಬೆಳಗ್ಗೆ ಏಳಲಿಕ್ಕೆ ಉಳಿಯುತ್ತೇನೋ ಇಲ್ಲವೋ !" ಎನ್ನುತ್ತ ಮುದುಕಿ ಅವಳನ್ನು ಮನೆಗೆ ಕಳುಹಿಸಿದಳು. ಗಂಟೆ ರಾತ್ರಿಯ ಒಂಬತ್ತು ದಾಟಿತ್ತು. ಭಾರವಾದ ಮನಸ್ಸಿನಲ್ಲಿ ಕಳವಳದ ಹೊರೆ ಹೊತ್ತುಕೊಂಡೇ ಆಕೆ ಮನೆ ಸೇರಿದಳು. ಅಷ್ಟು ಹೊತ್ತಾಗಿರಬಹುದೆಂದು ಅವಳು ಎಣಿಸಿರಲಿಲ್ಲ.

ಅಡುಗೆ ಮನೆಯಲ್ಲಿ ದೀಪ ಉರಿಯುತ್ತಿತ್ತು. ಅಲ್ಲಿ ಸ್ವಲ್ಪ ಹೊತ್ತು ನಿಂತುಕೊಂಡು, ಗೋದಿಯ ಊಟವಾಗಿರಬಹುದೇ ಎಂದು ಪರೀಕ್ಷಿಸಿದಳು ಸುಂದರಿ. ಗೋದಿ ಉಂಡ ಕುರುಹುಗಳಾವುವೂ ಅವಳಿಗೆ ಕಾಣಲಿಲ್ಲ. ಅವಳ ತಲೆ ಸಹಸ್ರಾರು ವಿಚಾರಗಳಿಂದ ಭಾರವಾಗಿತ್ತು. ಇಷ್ಟು ದಿನಗಳವರೆಗೂ ಆಕೆ ಇಷ್ಟೊಂದು ವೇಳೆಯನ್ನು ಮುದುಕಿಯ ಮನೆಯಲ್ಲಿ ಕಳೆದಿರಲಿಲ್ಲ. ಇಂದು ಅವಳಿಗೂ ಬೇಜಾರವಾಗಿತ್ತು. ಅದಕ್ಕಾಗಿ ಅಷ್ಟು ಹೊತ್ತು ಅಲ್ಲಿ ಕುಳಿತಿರಬೇಕು.

ಅಲ್ಲಿ ಬಹಳ ಹೊತ್ತು ನಿಲ್ಲಲಿಲ್ಲ ಆಕೆ. ಸರ್ರನೆ ಹೊರಗೆ ಬಂದಳು. ಮನೆತುಂಬ ದೀಪಗಳು ಬೆಳಗುತ್ತಿದ್ದವು. ಆದರೆ ಗೋದಿಯ ಕೋಣೆಯೊಳಗೆ ಮಾತ್ರ ದೀಪದ ಪ್ರಕಾಶವಿರಲಿಲ್ಲ. ಸಂಶಯದಿಂದಲೇ ಸುಂದರಿ ಅತ್ತ

ದೃಷ್ಟಿ ತೂರಿದಳು. ಆಗ ಆ ಕತ್ತಲಲ್ಲಿ ಒಳಗೇನಿದೆಯೆಂದು ಅವಳಿಗೆ ತಿಳಿಯ ದಾಯಿತು ಆದರೂ ಮನಸ್ಸು ಮಾತ್ರ ಅಲ್ಲಿಯ ಸನ್ನಿವೇಶವನ್ನು ಅವಳ ಕಣ್ಣಿಗೆ ತೋರಿಸದೆ ಬಿಡಲಿಲ್ಲ.

ಕೋಪದಿಂದ ಕಿಡಿಕಿಡಿಯಾದಳು ಸುಂದರಿ. ಕರಕರನೆ ಹಲ್ಲು ಕಚ್ಚಿ ಕೊಂಡಳು. ಇಡೀ ಜಗತ್ತಿನ ಮೇಲಿನ ವಿಶ್ವಾಸವೇ ಅವಳಿಗೆ ಕಳಚಿ ಹೋಯಿತು. 'ಏನು ಮಾಡಲಿ?' ಎಂದು ಅತ್ತ ಇತ್ತ ಕೆರಳಿದ ಕಣ್ಣು ಗಳಿಂದಲೇ ನೋಡಿದಳು. ಮನೆಯೇ ಬುಡಮೇಲಾದಂತೆ ಅವಳಿಗೆ ಭಾಸ ವಾಯಿತು.

ಸಿಟ್ಟಿನಿಂದ ಉರಿಯುವ ತನ್ನ ಒಡಲು ಕೆಂಪುಕೆಂಪಾಗಿದೆಯೆಂದು ಅವ ಳಿಗೂ ವಿದಿತವಾಯಿತು. ಅದನ್ನೆಲ್ಲ ತಡೆದುಕೊಂಡಳು. ಸಹನಶೀಲತೆಂು ಪರಮಾವಧಿಯದು. ಆಕೆ ಕೋಪದ ಬೆಂಕಿಯನ್ನು ಆರಿಸಿದ ದೀಪವಾಗಿ ಮುಂದೆ ಮುಂದೆ ಕಾಲಿರಿಸತೊಡಗಿದಳು. ಚಕ್ಕಮುಕ್ಕಿಯ ಕಲ್ಲಿನಂತೆ ಅವಳ ಒಡಲು ಕ್ರೋಧಾಗ್ನಿಯನ್ನು ಕುಡಿದುಕೊಂಡಿತು.

ಅವಳು ಗೋದಿಯ ಕೋಣೆಯ ಹೊಸ್ತಿಲ ಬಳಿಗೆ ತಲಪಿದ್ದಳಷ್ಟೇ. ಆಗ ಒಮ್ಮೆಲೇ ಅಲ್ಲಿಯ ವಿದ್ಯುತ್‌ದೀಪ ಚೆಕ್ಕನೆ ಬೆಳಗಿತು. ಅದನ್ನು ಹಚ್ಚಿದ ವರು ಚೌಡಪ್ಪ! ಗೋದಿಯು ಅಲ್ಲಿಯೇ ತನ್ನ ಪಲ್ಲಂಗದ ಮೇಲೆ ತಲೆ ನೋವಿನಿಂದ ಬಳಲಿ ಪವಡಿಸಿಕೊಂಡಿದ್ದಳು!

ಸುಂದರಿ—ಈ ದೃಶ್ಯವನ್ನು ಬೆದರಿ ಬೆದರಿ ನೋಡುತ್ತಿದ್ದಳು. "ಊಟ ...." ಎಂದು ಚೌಡಪ್ಪ ಅವಳಿಗೆ ಕೇಳಿದರು. ಸುಂದರಿ ಬಂದಂತೆ ಹಿಂದೆ ಹೋದಳು. ಚೌಡಪ್ಪ ಅಲ್ಲಿ ಬಹಳ ಹೊತ್ತು ನಿಲ್ಲಲಿಲ್ಲ. ಅವರು ಹೊರಟ ಹಾದಿಯತ್ತ ಸುಂದರಿ ಎಷ್ಟೋ ಹೊತ್ತು ನೋಡುತ್ತ ನಿಂತಿದ್ದಳು. ಅವಳ ಹೊಟ್ಟೆ ಅವ್ಯಕ್ತವಾದ ಕ್ರೋಧದಿಂದ ತುಂಬಿಕೊಳ್ಳುತಲಿತ್ತು. ಅವಳ ತಲೆ ಯಲ್ಲಿ ಹಿಂದಿನ ಎಷ್ಟೋ ಘಟನೆಗಳು ನಲಿದಾಡಿದವು. ಆದರೆ ಅವುಗಳಿಗೆಲ್ಲ ಅವಳು ಹೆಚ್ಚಿನ ಲಕ್ಷ್ಯವೀಯಲಿಲ್ಲ. ಹಿಂದಿನ ಬಾಳ ಕಥೆಯ ಹೊಳೆಯೇ ಅವಳ ಬಗೆಗಣ್ಣಿನ ಮುಂದೆ ಹರಿಯತೊಡಗಿತು. ಹನುಮಂತನ ಗುಡಿಯ ಸನ್ನಿ ವೇಶವೂ ಅವಳ ಮುಂದೆ ಕುಣಿಯಹತ್ತಿತು.

ಆದರೆ, ಈಗ ಅವಳು ಅದಕ್ಕಾಗಿ ಕೊರಗಲಿಲ್ಲ. ಅದಕ್ಕಾಗಿ ಆಕೆ ನೊಂದು ನೊಂದು, ಕ್ಷಮೆ ಕೇಳಿ ಕೇಳಿ ಬೇಸತ್ತು ಹೋಗಿದ್ದಳು ಇಂದು, ಈಗ ಅವಳಿಗೆ ಹನುಮನ ಮೇಲೆ ಎಲ್ಲಿಂದಿಲ್ಲದ ಸಿಟ್ಟು ಉಕ್ಕೇರಿತು. ಒಂದೇ ಹೆಜ್ಜೆಯಿಂದ ಒಳಗೆ ಓಡಿದಳು ಸುಂದರಿ! ಇದ್ದ ಬಲವನ್ನೆಲ್ಲ ಉಪಯೋಗಿಸಿ ಆ ಹನುಮನ ಭಾವಚಿತ್ರವನ್ನು ಎಳೆದು ಎಳೆದು ಹೊರಗೆ ತಂದಳು. ಮಾತಾಡಲಿಕ್ಕೆ ಅವಳಿಗೆ ಸಿಟ್ಟಿನಿಂದ ಬಾಯಿ ಬಾರದಾಯಿತು. ಆದರೂ ಮನಸ್ಸು ಒಳಗಿಂದೊಳಗೆ ಅಪಾರವಾದ ಜಿಗುಪ್ಸೆಯಿಂದ ಅವನನ್ನು ನಿಂದಿಸುತ್ತಿತ್ತು; ಸಿಕ್ಕಂತೆ ಜರಿಯುತ್ತಲೂ ಇತ್ತು. "ನೀವು ದೇವರುಗಳೇ? ನೀನು ಹನುಮನೇ? ಒಳ್ಳೆಯದಾಗುವ ಕೆಲಸ ನೆರವೇರಿಸಲು ನಿಮಗೂ.......... ನಿನಗೂ....ಇಷ್ಟು ಬೇಸರವೇ! ಕೆಟ್ಟ ಕಾಯಕ ಮಾಡಲು ಮನುಷ್ಯರಿಗಿಂತ ನೀವೇ ಮೊದಲು ಓಡುತ್ತಿರಲ್ಲ! ಎಷ್ಟು ವರುಷವಾಯಿತು?.............. ನಾನು! ಇದೇ ನಾನು ನಿನಗೆ ಬೇಡಲಿಕ್ಕೆ ಹತ್ತಿ!" ಎಂದು ಅವಳು ಮನಸ್ಸಿನೊಳಗೆ ಆ ಹನುಮನನ್ನು ಬೇಕುಬೇಕಾದಂತೆ ತಿರಸ್ಕರಿಸಿ 'ಸಟಾಲನೆ' ಆ ಫೋಟೋವನ್ನು ಎಸೆದು ಬಿಟ್ಟಳು! ಎಲ್ಲಿಗೆ? ಗೊತ್ತೇ?——ಚೌಡಪ್ಪ ಹೊರಟ ದಾರಿಯತ್ತ! 'ಚೆಲ್ಲನೆ' ಅದರ ಗಾಜು ಒಡೆದು ಸಾವಿರ ಕಡೆಗೆ ಸಿಡಿದು ಸೀಳಿ ಸೀಳಿ ಹೋಯಿತು. ಬಲವಾದ ಕಟ್ಟನ್ನು ತೊರೆದು ಕನ್ನಡಿ ಶೂನ್ಯದಲ್ಲಿ ಚದರಿ ಹೋಯಿತು! ಸುಂದರಿಯ ಮನಸ್ಸೂ ಹಾಗೇ ಚೌಡಪ್ಪನವರ ಹಂಗಿನ ಕಟ್ಟಿನಿಂದ ಪುಟಿದು ಹೋಯಿತು. ಒಂದು ವಿಕಟವಾದ ನಗುವೂ ಅವಳಿಗೆ ಬರಲಿಲ್ಲ.

'ಪಠಾಲನೆ' ಬಾಗಿಲು ಮುಚ್ಚಿಕೊಂಡು ಒಳಗೆ ಬಂದಳು. ಗೋದಿಯ ಕೋಣೆಯತ್ತ ದೃಷ್ಟಿಕೂಡಾ ತೂರಲಿಲ್ಲ. ಅಲ್ಲಿ ದೀಪ ಉರಿಯುತ್ತಲೇ ಇತ್ತು! ಒಳಗೆ ಅಡುಗೆ ಮನೆಗೇ ಹೋದಳು ಸುಂದರಿ. ಮುದುಕಿಯ ನೆನಪೂ ಅವಳಿಗೆ ಬರಲಿಲ್ಲ. ಅವಳಿಗೆ ತನ್ನ ಜೀವದ ಅರಿವಿದ್ದರಲ್ಲ ಇನ್ನೊಬ್ಬರ ಅರಿವಾದೀತು? ಹೊಟ್ಟೆ ಉರಿಯುತ್ತಿತ್ತು! ಕಾರಣ, ಹೊಟ್ಟೆತುಂಬ ತಾನೇ ಬಡಿಸಿಕೊಂಡು ಉಂಡಳು. ಎಷ್ಟೋ ಹೊತ್ತಿನ ವರೆಗೆ ಆವಳ ಭೋಜನ ಮುಗಿಯಲಿಲ್ಲ. "ಹೋಗುವಾಗ———ದಾರಿಯ ಖರ್ಚಿಗೂ ಇರಲಿ———" ಎನ್ನುತ್ತಾ ಸ್ವಲ್ಪ ಹೆಚ್ಚೇ ಊಟ ಮಾಡಿದಳು. ಮಗಳ

ನೆನಪೇ ಆವಳಿಗೆ ಬರಲಿಲ್ಲ. ಮುದುಕಿಯೂ ಅಲ್ಲಿಗೆ ಬರಲಿಲ್ಲ. ಆಕೆಯೂ ಕದ ಮುಚ್ಚಿ ಸುಖವಾಗಿ ನಿದ್ರಿಸುತ್ತಿದ್ದಳು—ತನ್ನ ಮನೆಯಲ್ಲೇ.

ಊಟ ಭಕ್ಷಿಸಿ ಹೊರಗೆ ಬಂದು, "ಗೋದೀ" ಎಂದು ಒದರಿದಳು ಸುಂದರಿ.

"ಊಂ ಊಂ" ಎಂದು ಪಲ್ಲಂಗದ ಮೇಲೇ ಹೊರಳಾಡಿದಳು ಗೋದಿ.

"ಏಳೇ ತಾಟಕೀ, ಉಣ್ಣು!"

"ನೀನು ಮುಕ್ಕಿ ಬಂದಿಯಾ?"

"ನಿನ್ನ ಪಾಲಿದ್ದೂ ತಿಂದು ಬಂದಿದ್ದೇನೆ!"

"ಸುಖವಾಗಿ ಮಲಗು!"

"ನಿನ್ನ ಸುಖ ಮುಗಿಯಿತಲ್ಲ! ಅಷ್ಟೇ ಸಾಕು"

"Hold your tongue."

"ಹಾದಿ ಬಿಟ್ಟು ಹಳ್ಳ ಹಿಡಿದಾಯಿತು!——ಇನ್ನೇನು ಉಳಿಯಿತು! ನಾನು ನಿನ್ನ ಹೆತ್ತವಳಲ್ಲ!——ಮಲಗು—ಸುಖವಾಗಿ ಮಲಗು! ಇಂದೆಲ್ಲ ಗೊತ್ತಾಯಿತು——ನನ್ನ ಕಣ್ಣೆದುರಿಗೇ ನರಕ ನೋಡಿದೆನಲ್ಲಾ——ನೀನು ನನ್ನ ಹೊಟ್ಟೆಯಲ್ಲಿ ಹುಟ್ಟಿದವಳೇ! ನನ್ನ ಮಗಳೇನೆ ನೀನು? ತಾಟಕಿ! ಶೂರ್ಪನಖಿ———ನಿನ್ನನ್ನು ಈಗ ಹರಿದು ತಿನ್ನುತ್ತೇನೆ! ಮುಂಡೇ! ನೀನು ನನ್ನ ಗೋದಿಯೇನೆ ನೀನು! ಮುಂಡೇ!——ಮುಂಡೇ—— ನಿನಗೆ ಏನು ಮಂಡೆಮಾರಿ ಬಂದಿದೆಯೇ ನಿನಗೆ? ತಲೆನೋವೇನೇ ನಿನಗೆ? ಮುಂಡೇ——ನೀನು ನನ್ನ ಮಗಳೇನೇ? ನಿನ್ನನ್ನು ಸೀಳಿ——ನಾಲ್ಕು ಭಾಗ ಮಾಡಿ, ನಾಲ್ಕು ಬಾಗಿಲುಗಳಿಗೆ ಜೋತು ಹಾಕುತ್ತೇನೆ ನೋಡು ಈಗ" ಎಂದು ರೌದ್ರಾವತಾರ ತಾಳಿ ಸುಂದರಿ ನಡುನಡುಗಿ ಮಗಳಿಗೆ ಬೆದರಿಸಿ, ಹರಿದು ತಿನ್ನಲಿಕ್ಕೇ ಒಳಗೆ ಹೋದಳು—— ಆಗ ಗೋದಿ, "Get out!" ಎಂದು ಆವಳನ್ನು ಹೊರಗೆ ದೂಡಿ, "ನಾನು ರಂಡೆಯೋ? ನೀನು ರಂಡೇ?" ಎಂದು ಗದರಿಸಿ, ಬಾಗಿಲು ಮುಚ್ಚಿ ಒಳಗೆ ಮಲಗಿಕೊಂಡಳು. "ಸಟ್ಟನೆ" ಒಳಗಿನ ಬೋಲ್ಟ್ (Bolt) ಸಿಕ್ಕಿಸಿದಳು. ಆದರ ಸಪ್ಪಳ ಮಾರ್ದನಿಸುತ್ತಿತ್ತು—ಸುಂದರಿಯ ಕಿವಿಯಲ್ಲಿ.

ಎಷ್ಟೋ ಹೊತ್ತಿನವರೆಗೆ ಸುಂದರಿ ಆ ಬಾಗಿಲಿಗೆ ತನ್ನ ಎರಡೂ ಕೈಗಳಿಂದ ಬಲವಾಗಿ "ಪಟಾ" "ಪಟ್ಟಾ" ಎಂದು ಏಟು ಹೇರುತ್ತಿದ್ದಳು. "ತೆಗೆಯೇ ಬಾಗಿಲು—ತೆರೆಯೇ ಕದಾ" ಎಂದು ಒದರುತ್ತಲೂ ಇದ್ದಳು. ಅವಳ ಕೈ ಬಳೆಗಳೆಲ್ಲ ಪುಡಿಪುಡಿಯಾಗಿ ಬಿದ್ದಿದ್ದವು. ಈ ರೀತಿಯಲ್ಲಿ ಆಕೆ ಆಕ್ರೋಶ ಮಾಡುತ್ತಿರುವ ಧ್ವನಿ ಆ ಮನೆಯ ನಾಲ್ಕು ಗೋಡೆಗಳನ್ನು ದಾಟಿ ಹೊರಗೆ ಗುಡುಗುಡಿರುತ್ತಿರಲಿಲ್ಲ.

ಇತ್ತ ಕೋಣೆಯೊಳಗೆ ಗೋದಿ ಸ್ವಿಚ್ಚಿನ ಬುರುಡೆ ಕಿತ್ತು ಬೀಳುವಷ್ಟು ರಭಸದಿಂದ ಲೈಟ ಆರಿಸಿದಳು. ಹೋಗಿ ದಪ್ಪವಾದ ರಗ್ಗು ಹೊದ್ದುಕೊಂಡು ಪಲ್ಲಂಗದ ಮೇಲೆ ಬಿದ್ದುಕೊಂಡಳು.

ಕೈನೋವಾದ ಮೇಲೆಯೂ ಸುಂದರಿ ಅಲ್ಲಿಂದ ಏಳಲಿಲ್ಲ. ಬಹಳ ಹೊತ್ತು ಅಲ್ಲಿ ಕೂತಿದ್ದಳು. ಆಮೇಲೆ ತಾನಾಗಿಯೇ ಎದ್ದಳು. ಹೊರಗೆ ಬಂದು ಚಾವಡಿಯ ಲೈಟು ಬೆಳಗಿಸಿದಳು. ಅದು ಜ್ವಾಜ್ವಲ್ಯಮಾನವಾಗಿ ಉರಿಯತೊಡಗಿತ್ತು. ಕೂಡಲೆ ಎದ್ದು ಮನೆಯ ಬಾಗಿಲುಗಳನ್ನೆಲ್ಲ ಬಲವಾಗಿ ಮುಚ್ಚುತ್ತ ಬಂದಳು.

ತನ್ನ ಕೋಪ ನಿವಾರಿಸಲೆಂದು ಹಾಗೇ ಕೂತಳು. ನಿದ್ದೆ ಬಾರದಾಯಿತು! ಮುಂದೆ ಒಂದು ವಿದ್ಯುತ್ ಬಳ್ಳಿ (Electric wire) ಜೋತು ಬಿದ್ದಿತ್ತು. ಅದರತ್ತ ಎಷ್ಟೋ ಸಮಯದ ವರೆಗೆ ನೋಡಿದಳು.

ಥಟ್ಟನೆ ಹೋಗಿ ಅದನ್ನು ಎಳೆದಳು! ಅದು ಅವಳ ಕೈಯಲ್ಲೇ ಬಂತು. ಅವಳಿಗೆ ಅದರಿಂದ ಯಾವ ಪರಿಣಾಮವೂ ಆಗಿರಲಿಲ್ಲ. ಮನಸ್ಸು ಕುದಿಯುತ್ತಿತ್ತು. ಆ ಮನಸ್ಸು ಒಳಗೇ ಮರಳಿ ಎರಡು ಸೀಳಾಗಿ ಮಾತಿನ ಯುದ್ಧ ನಡೆಸಿತ್ತು. ಎರಡು ವಿಚಾರಗಳ ಸಂಘರ್ಷಣೆಯೇ ಅದು!

"ಹೋಗು, ಹೋಗು! ಹಿಡಿ, ಹಿಡಿ——"

"ಏನು?"

"ಹಾದಿ....ಅಗೋ ಅದೇ ಹಾದಿ....ಅದೇ ಬಳ್ಳಿಯನ್ನು ಹಿಡಿ....ಅದೇ ನಿನಗೆ ಹಾದಿ."

"ಅದು ವಿದ್ಯುತ್ ಬಳ್ಳಿಯಲ್ಲವೇ?"

" ಅದು ವಿದ್ಯುತ್ ಬಳ್ಳಿಯೂ ಹೌದು, ನಿನ್ನನ್ನು ಈ ಹಾಳು ನರಕದ ಹಳ್ಳದಿಂದ ಹಾದಿಗೆ ಒಯ್ಯುವ ಬಳ್ಳಿಯೂ ಹೌದು "

" ನಡೆಯಲೇ ? "

" ಏಳು ! ಎದ್ದೇಳು—ಅದೇ ನೀನು ಹಿಡಿಯಬೇಕಾದ ಹಾದಿ---—ಏಳು !" ಎನ್ನುವ ಅವಳ ಮನದ ಮಾತು ಅವಳನ್ನು ಹಿಡಿದು ಅಲ್ಲಿಂದ ದೂಡಿತು ! ಆಕೆ ಅಲ್ಲಿಂದ ವಾಯುವೇಗದಿಂದ ಎದ್ದಳು. ಭೀಮಬಲದಿಂದ ತನ್ನ ಮುಂದಿರುವ ಒಂದು ವಿದ್ಯುತ್ ಬಳ್ಳಿಯನ್ನು—ಕಟ್ಟಿಗೆಯ ಕವಚ ಹೊದ್ದುಕೊಂಡದ್ದನ್ನು—ಹಿಡಿದು ಸೆಳೆದಳು. ವಿದ್ಯುತ್ ಬುರಡೆಯೇ ಕಿತ್ತು ಬಂದಿತು ! ಆದನ್ನು ಅವಳು ಅತ್ತ ಬಿಸಾಡಬೇಕಾಗಲಿಲ್ಲ. ಆದು ತಾನಾಗೆಯೇ ಸಿಡಿದು ಬಿತ್ತು. ಎರಡೂ ಕೈಗಳಿಂದ—ಮರಣ ವಧುವನ್ನು ಆಕೆ ಆಲಂಗಿಸಿದಳು ! ಗರಗರ್ರನೆ ಅವಳ ಮಿದುಳಿಗೂ ವಿದ್ಯುತ್‌ಪ್ರವಾಹದ ಚಕ್ರ ಹರಿಯಿತು. ಆಕೆ ನಿಮಿಷ ಮಾತ್ರದಲ್ಲೇ ಅಲ್ಲಿ ಬಿದ್ದಳು. ಅವಳ ಪ್ರಾಣ ಪಕ್ಷಿ ಯಾರಿಗೂ ಕಾಣದ ಹಾದಿ ಹಿಡಿದು ಮಾಯವಾಗಿತ್ತು———ಅವಳ ಮಟ್ಟಿಗೆ ಆವಳು ಹಳ್ಳದಿಂದ ಹಾದಿ ಹಿಡಿದಳು.

ಬೆಳಗಾಯಿತು ! ಸುಂದರಿಯ ಮನೆಯ ಬಾಗಿಲು ಮುಚ್ಚಿಯೇ ಇತ್ತು. ಮುದುಕಿಯೂ ತನ್ನ ಮನೆಯ ಬಾಗಿಲು ತೆರೆದುಕೊಂಡು ಹೊರಗೆ ಬಂದಾಗಿತ್ತು. ಸುಂದರಿಯ ಮನೆಗೂ ಬಂದಳಾಕೆ. " ಜಗತ್ತೆಲ್ಲ ಬಾಗಿಲು ತೆಗೆದಾಗ ಇವಳ ಮನೆಯ ಬಾಗಿಲು ಮುಚ್ಚಿದೆಯಲ್ಲ !" ಎಂದು ಮುದುಕಿ " ಕಡ್ " " ಕಡ್ " ಎಂದು ಬಾಗಿಲು ಬಡೆಯತೊಡಗಿದಳು.

ಹಿತ್ತಿಲ ಬಾಗಿಲಿನಿಂದ ಮುಂದಿನ ಬಾಗಿಲಿಗೂ ಬಂದು ಮುದುಕಿ ಮೊದಲಿನಂತೆ ಬಾಗಿಲು ಬಡೆಯುತ್ತಿದ್ದಳು.

" ಕಡ್ " " ಕಡ್ಡ್ " ಎಂಬ ರೌದ್ರ ಧ್ವನಿ ಗುಡುಗುಡಿಸುತ್ತಿತ್ತು. ಆದರೂ ಸುಂದರಿ ಬಾಗಿಲು ತೆರೆಯಲಾರಳು !

ಆಗ ಚೌಡಪ್ಪನವರೂ ಲಗುಬಗೆಯಿಂದ ಬಂದು " ಏನೇ ಮುದುಕಿ ? ಯಾಕೆ ಬಾಗಿಲು ಬಡೆಯುವಿ ? ಏನು ಕತೆ ? ಗಂಟೆ ಒಂಬತ್ತಾಯಿತು ! ಇನ್ನೂ ಸುಂದರಿಗೆ ನಿದ್ದೆ ಬಿಟ್ಟಿಲ್ಲವೆ ?" ಎಂದು ಕೇಳಿದರು. ತಾವೂ ಬಾಗಿಲು ಬಡೆದರು-

"ಕರ್ಡ್" "ಕಡ್ಡ್" ಎಂಬ ಧ್ವನಿ ಒಂದಕ್ಕೆ–ಎರಡು, ಎರಡಕ್ಕೆ–ನಾಲ್ಕು, ನಾಲ್ಕಕ್ಕೆ ನೂರಾದರೂ ಸುಂದರಿಯ ಮನೆಯ ಬಾಗಿಲು ತೆರೆಯಲಿಲ್ಲ. ಚೌಡಪ್ಪ ವಿಸ್ಮಯಭರಿತರಾದರು!

"ನಾನು ಬೆಳಿಗ್ಗೆ ಏಳುವುದಿಲ್ಲ ಎಂದು ಹೇಳಿದವಳೂ ಎದ್ದು ಬಂದಿದ್ದೇನೆ ಸುಂದರೀ——ನೀನು ಏಳಲಿಲ್ಲವಲ್ಲಾ!——" ಎಂದು ಮುದುಕಿ ಬೊಬ್ಬಿಟ್ಟಳು.

"ಕ್ರ್ಯಾವ್sss" ಎನ್ನುವ ಕ್ರೂರ ಭೀಕರವಾದ ಪ್ರೇತದ ಕೂಗಿನಂತೆ ಕ್ರಂದನ ಮಾಡುತ್ತ ಗೋದಿ ಹೇಗೋ ಬಾಗಿಲು ತೆರೆದು ಹೊರಗೆ ಬಿದ್ದಳು!

ಚೌಡಪ್ಪ ಮಾತ್ರ ತಮ್ಮ ತ್ರಾಣವನ್ನೆಲ್ಲ ಒಂದೆಡೆ ಕೇಂದ್ರೀಕರಿಸಿ, ಎರಡೂ ಬಾಗಿಲುಗಳನ್ನು ಅರಳಿಸುವಾಗ ಎರಡೂ ಬಾಗಿಲಿನ ಹಲಿಗೆಗಳು ಇಬ್ಬದಿಯ ಗೋಡೆಗೆ ಬಡಿದು, 'ಕಟ್' 'ಕಟೊಲ್' ಎಂಬು ಒಮ್ಮೆಲೇ ಎರಡು ಸಲ—ನಾಲ್ಕು ಸಲ——ಪ್ರತಿಧ್ವನಿ ಮಾಡಿದವು. "ಹೋದೆಯಾ ಸುಂದರೀ!—ನನ್ನ ಸುಂದರೀ—" ಎಂದು ಕಿರಚುವ ಮುದುಕಿಯ ಕ್ರಂದನ ಮಾತ್ರ ಸುಂದರಿಯ ಮನೆ ದಾಟಿ, ದೂರ, ದೂರ, ಸುದೂರದ ವರೆಗೂ ಮಾರ್ದನಿಗೊಡುತ್ತಿತ್ತು! ಆ ಕೊರಗಿನ ಕೂಗನ್ನು ಎಳೆದೊಯ್ಯುವ ಮಾರುತ ಮಾತ್ರ ಮಂದವಾಗಿದ್ದ.

———

ಪರಾವಲಂಬಿ

ಇದೇ ಲೇಖಕರ ಸುಪ್ರಸಿದ್ಧ ಕಾದಂಬರಿ!

ಪ್ರಕಾಶಕರು: **ಪ್ರತಿಭಾ ಗ್ರಂಥಮಾಲೆ, ಧಾರವಾಡ.**

ಪುಟಗಳು ೨೨೧] [ಬೆಲೆ ೨—೮—೦

ಕೆಲವು ವಿಮರ್ಶಕರ ಮೆಚ್ಚಿನ ಅಭಿಪ್ರಾಯಗಳು:—

“ ....ಹಳ್ಳಿಗರ ನಿರಕ್ಷರತೆ, ದೇವರು–ದೆವ್ವಗಳ ಮೇಲಿನ ಮೂಢಭಕ್ತಿ, ಅವರ ಬಡತನದ ಬವಣೆ ಮತ್ತು ಸಹನಶೀಲತೆಯ ಪರಮಾವಧಿಗಳನ್ನು ಮನದುಂಬುವಂತೆ ಲೇಖಕರು ಕಾದಂಬರಿಯನ್ನು ಹೆಣೆದಿದ್ದಾರೆ. ದುಡ್ಡಿದ್ದರೂ ಧರ್ಮ ವಿನಯಗಳನ್ನು ಬಿಡದ ವೆಂಕಪ್ಪಯ್ಯ, ದುಡ್ಡಿಗಾಗಿ ಬೀದಿ ಹೆಣದ ಎಲುಬನ್ನಾದರೂ ನೆಕ್ಕಲು ಹೇಸದ ಆಕಾಶರಾಯ ಮತ್ತು ಮುತ್ತುಭಟ್ಟರು, ಬಾಲ್ಯವು ಬಡತನದಲ್ಲಿ ಹೋದರೂ, ಗಟ್ಟಿ ಹತ್ತಿ ಕಾಸು ಕೈತುಂಬಿದೊಡನೆ ಕೊಬ್ಬಿ ತ್ರಿಲೋಕವನ್ನೇ ಕೊಳ್ಳಲೆಳೆಸುವ ಉನ್ಮತ್ತರು, ಅಜ್ಞರ ತಿಳಿಗೇಡಿತನದ ದುರ್ಲಾಭ ಪಡೆಯುವ ಭೂತ-ಪ್ರೇತಗಳ ಹುಸಿ ಮಾಂತ್ರಿಕರು ಮುಂತಾಗಿ ಹಳ್ಳಿಗಳಲ್ಲಿ ಪ್ರಚುರವಾಗಿರುವ ಬಾಳಿನ ವಿವಿಧ ಮುಖಗಳನ್ನು ಲೇಖಕರು ನೈಜವಾಗಿ ಮೈಮರೆಸುವ ಶೈಲಿಯಲ್ಲಿ ವರ್ಣಿಸಿದ್ದಾರೆ. ಎಲ್ಲಕ್ಕಿಂತಲೂ ಸುಖ-ದುಃಖಗಳಲ್ಲಿ, ಸಂಪತ್ತು-ವಿಪತ್ತುಗಳಲ್ಲಿ, ಸಾವು-ನೋವುಗಳಲ್ಲಿ ಕೂಡ ದಾಸಿಯಂತೆ, ಸ್ನೇಹಿತಳಂತೆ, ಹಿತಚಿಂತಕಳಂತೆ ಪತಿದೇವರನ್ನು ಹಿಂಬಾಲಿಸಿದ ಸಿರಿವಂತ ಕನಕಮ್ಮ ಮತ್ತು ಬಡವಿ ರುಕ್ಕು— ಇವರಿಬ್ಬರು ಪುರಾಣದ ಸ್ತ್ರೀಆದರ್ಶಮೂರ್ತಿಗಳಾಗಿ ಕಾಣುತ್ತಾರೆ ಈ ಕಾದಂಬರಿಯಲ್ಲಿ. ಕೊನೆಯದಾಗಿ ಕಾದಂಬರಿಯ ಜೀವಾಳವಾದ ಪರಾವಲಂಬಿ ಜಾರಪ್ಪನ ಜೀವನ, ದುಡಿಮೆ, ಪ್ರಾಮಾಣಿಕವಾದ ಸೇವೆಯೆ ಅವನ ಬಾಳಿನ ಉಸಿರು. ಪ್ರತಿಫಲವಾಗಿ ಒಂದು ಹಿಡಿ ಅಕ್ಕಿ ಸಿಕ್ಕರೂ ಸರಿ, ಬೆನ್ನ ಮೇಲೆ ಒಂದು ಒದೆ ಸಿಕ್ಕರೂ ಸರಿ ‘ **ಕರ್ಮಣ್ಯೇ ವಾಧಿಕಾರಸ್ತೇ** ’ ಎಂಬ ಗೀತಾ

ವಾಕ್ಯವನ್ನು ಅರಿಯದೆ ಅನುಸರಿಸುವವನವನು. ಧನಿಯ ಸುದಿನಗಳಲ್ಲಿ ಉಲ್ಲಾಸದಿಂದ ಪ್ರಫುಲ್ಲವಾಗಿದ್ದ ಜಾರಪ್ಪನ ಪರಾವಲಂಬಿಯಾದ ಬಾಳು, ಸ್ವಾರ್ಥಿ ಧನಪಿಶಾಚಿಗಳ ಸೇವೆಯಲ್ಲಿ ಕೊರಗುತ್ತ ಕರಗುತ್ತ ಕೂಳಿಲ್ಲದೆ ಮಸಣ ಸೇರಿದುದನ್ನು ಲೇಖಕರು ಹೃದಯದ್ರಾವಕವಾಗಿ ಚಿತ್ರಿಸಿದ್ದಾರೆ........ಅವರು ಚಿತ್ರಿಸುವ ಸ್ವಭಾವಗಳಲ್ಲಿ ನೈಜವಿದೆ, ಕಥನಶೈಲಿಯಲ್ಲಿ ಆತ್ಮವಿಸ್ಮರಣೀಯತೆಯಿದೆ...............”

ಡಾ|| ಮ. ಗೋಪಾಲಕೃಷ್ಣರಾಯರು
(ಕಲಿಯುಗ)

“........... ಜಾರಪ್ಪ—ವೆಂಕಪ್ಪಯ್ಯ—ಕನಕಮ್ಮರಂಥ ಪುಣ್ಯಾತ್ಮರ ಮತ್ತು ಆಕಾಶರಾಯ—ಸಂಕಣ್ಣಯ್ಯ—ಮುತ್ತುಭಟ್ಟರಂಥ ಪಾಪಾತ್ಮರ ಪಾತ್ರಪೋಷಣೆ ತುಂಬ ಯಶಸ್ವಿಯಾಗಿದೆ...............ಮುಖ್ಯವಾಗಿ, ಕಥಾನಾಯಕ ಜಾರಪ್ಪನ ಭವ್ಯ ಜೀವನವು ಮಧ್ಯವರ್ತಿಯಾಗಿದ್ದು ಯಶಸ್ವಿಯಾಗಿ ಮೂಡಿದೆ. ಕಾದಂಬರಿಯಲ್ಲಿರಬೇಕಾದ ಧಾರವಾಹಿಯಾದ ಭಾಷಾಸರಣಿ ಹೊಗಳತಕ್ಕುದಾಗಿದೆ........ ”

ಪ್ರೊ. ಎಸ್. ಆರ್. ಮಳಗಿ
(ಕರ್ನಾಟಕ ಕಾಲೇಜದ ಮಿಸ್ಸೆಲನಿಯಲ್ಲಿ)

“...............ಕತೆ ಹೇಳುವಾಗ ನಮ್ಮನ್ನು ಮೈಮರೆಸಿ ಎಳೆದೊಯ್ಯುತ್ತಾರೆ ಗುರ್ಕಾರರು .... ”

ದಾನಿ
(ಜಯ ಹಿಂದ)

" ....ಲೇಖಕರ ಪರಿಚಯ ಹಳ್ಳಿಯವರ ಬಾಳ ಬದುಕನ್ನು ಕವಿ ಸಹಜ ಸಹಾನುಭೂತಿಯಿಂದ ನೋಡಿದ್ದರೂ, ವಾಸ್ತವತೆಯ ಕಟ್ಟಿನಲ್ಲಿ ಕತೆಯನ್ನು ಹೆಣೆದಿರುವುದು ಶ್ಲಾಘನೀಯ. ಕತೆಯ ವಸ್ತು ನಾಗರಿಕ ಜೀವನದ ಝಳಪಿನಿಂದ ದೂರವಾದ ಕುಗ್ರಾಮ. ಕತೆಯ ಪಾತ್ರಗಳೂ ಪ್ರಕೃತಿಯ ಮಕ್ಕಳು. ಪ್ರಕೃತಿಯಂತೆಯೇ ಅವರೂ ಒಮ್ಮೊಮ್ಮೆ ಸುಂದರ ಮೂರ್ತಿಗಳಾದರೆ, ಒಮ್ಮೊಮ್ಮೆ ಎದೆ ನಡುಗಿಸುವ ರೌದ್ರಾವತಾರರಾಗುತ್ತಾರೆ.

................ಕಾದಂಬರಿಯ ಕೊನೆಕೊನೆಯಲ್ಲಿ ಜಾರಪ್ಪನ ಪಾತ್ರವೂ ಕಾದಂಬರಿಯ ವಿಶ್ವಾಸವನ್ನೇ ತುಂಬಿ, ಬೃಹದಾಕಾರವಾಗಿ ಓದುಗರು ಎಂದೆಂದಿಗೂ ಮರೆಯದಷ್ಟು ಪರಿಣಾಮಕಾರಿಯಾಗಿ ನಿಲ್ಲುತ್ತದೆ.

ಈ ಕಾದಂಬರಿಯ ಪ್ರಾಕಾರದ ಬಗ್ಗೆ ಒಂದು ಮಾತು.

ಇದೊಂದು ಪ್ರಾದೇಶಿಕ ಕಾದಂಬರಿ. ಕುವೆಂಪು ಅವರು " ಕಾನೂರು ಸುಬ್ಬಮ್ಮ ಹೆಗ್ಗಡಿತಿ " ಯಲ್ಲಿ ಮಲೆನಾಡಿನ ಜೀವನವನ್ನು ಚಿತ್ರಿಸಿದಂತೆ, ಕಾರಂತರು ತಮ್ಮ ಹಲವು ಕಾದಂಬರಿಗಳಲ್ಲಿ ತಮ್ಮ ನಾಡ ಜೀವನವನ್ನು ಚಿತ್ರಿಸಿದಂತೆ, ಗೋಕಾಕರು " ಇಜ್ಜೋಡು " ವಿನಲ್ಲಿ ಧಾರವಾಡದೊಂದು ಭಾಗದ ಜೀವನವನ್ನು ಚಿತ್ರಿಸಲು ಯತ್ನಿಸಿದಂತೆ, ಶ್ರೀ|| ನುರ್ಕಾರ್‌ರವರು ದಕ್ಷಿಣ ಕನ್ನಡ ಜಿಲ್ಲೆಯ ಹಳ್ಳಿಯ ಬಾಳನ್ನು ಚಿತ್ರಿಸಲೆತ್ನಿಸಿದ್ದಾರೆ, ಯತ್ನಿಸಿ ಜಯಪ್ರದರಾಗಿದ್ದಾರೆ. "

ಸಾಹಿತ್ಯ ಭಿಕ್ಷು
(ಜನಪ್ರಗತಿ)

ಮುದ್ರಕರು :

ಭಾ. ವೆಂ. ಘಾಣೇಕರ,

ಪ್ರತಿಭಾ ಮುದ್ರಣ, ಧಾರವಾಡ.